ಶ್ರೀ

ಶುಭಮಸ್ತು

ಶ್ರೀ ಲಲಿತಾಂಬಿಕಾಯೈ ನಮಃ

# ಶ್ರೀ ಶ್ರೀ ವಿದ್ಯಾರಣ್ಯ ಜಗದ್ಗುರು ವಿರಚಿತಾ

# ಸದಾಚಾರ ದೀಪಿಕಾ

ವ್ಯಾಖ್ಯಾತ

ಶ್ರೀ ಲಲಿತಾ ಪಬ್ಲಿಕೇಷನ್ಸ್

**ಶ್ರೀ ಕೌಂಡಿಣ್ಯ**

(ಲಂಕಾ ಶ್ರೀನಿವಾಸ)

Regi

Price 1—8—6.

# By the Same Author

Books on Sri Vidya.

Samaya Vidya-Dakshinachara.

Sri Vidyaranya's Sadachara Deepika-
(ಸದಾಚಾರದೀಪಿಕಾ) Kanada Vyakhyana

pp. 72 Crown Price 1—8—6

**Books in the Press:—**

1. Sri Lalitha Sahasranama Stotram Kanada Vyakhayanam, Such Vyakhyanam has not been published so far (ಶ್ರೀ ಲಲಿತಾಸಹಸ್ರನಾಮಸ್ತೋತ್ರಮ್)

pp. 400 Crown Price 10—8—6

2. Sri Lalitha Sahasranama Stotram (Moolam) (Kanada Script) (ಶ್ರೀ ಲಲಿತಾಸಹಸ್ರನಾಮಸ್ತೋತ್ರ ಮೂಲಮ್)

3. (ಶ್ರೀ ಮಾತೃಕಾಚಕ್ರವಿವೇಕಮ್) Sri Matrukachakra Vivekam, Kanada Vyakhyanam.

pp. 250 Crown Price 5—9—6

4. (ಶ್ರೀ ಸುಭಗೋದಯಸ್ತೋತ್ರಮ್) Sri Subhagodaya Stotram Kanada Vyakhyanam.

pp. 195 Crown Price 3—6—6

**Under Preparation**

5. (ಶ್ರೀ ಚಕ್ರನವಾವರಣಾರ್ಚನಮ್) Sri Chakra Navara nacharam, (ಸಮಯವಿದ್ಯ-ದಕ್ಷಿಣಾಚಾರಮ್) Samaya Vidya Dakshinacharam.

Copies Can be had from (*Sri Lalitha Publications*)

*L. Srinivasa Rao*

**No A-11/1. Annayyappa Block**
**Seshadripuram Main Road**
Malleswaram P. O. — BANGALORE-3.

ಶ್ರೀ

ಶುಭಮಸ್ತು

ಶ್ರೀ ಗಣೇಶಾಯನಮಃ

# ಸದಾಚಾರ ದೀಪಿಕಾ

## ಉಪೋದ್ಘಾತವು

ಪ್ರಪಂಚವು ಪ್ರಕೃತಿ ಪುರುಷ ಮಿಶ್ರವಾಗಿರೋಣದ್ದರಿಂದ ಜ್ಞಾನವು ಅಜ್ಞಾನವು, ಪುಣ್ಯ ಪಾಪಗಳು, ಸ್ವರ್ಗ ನರಕಗಳು, ಸುಖ ದುಃಖಗಳು ಇಂಥಾ ದ್ವಂದ್ವಗಳು ಸಿದ್ಧವಾಗಿರುತ್ತವೆ.

ಹಿಂದಿನ ಜನ್ಮದಲ್ಲಿನ ಗುಣಕರ್ಮ ವಾಸನಾ ಭೇದಗಳನ್ನು ಅನುಸರಿಸಿ ಪ್ರಪಂಚದಲ್ಲಿ ಸ್ಪಷ್ಟವೂ ಸರ್ವೋತ್ಕೃಷ್ಟವೂ ಆದ ಮಾನವ ಜನ್ಮದಲ್ಲಿ ವರ್ಣಾಶ್ರಮ ವಿಭಾಗವೂ, ಅವರಿಗೆ ಆಯಾ ಕರ್ಮ ಫಲವೂ ಶ್ರೀ ಪರಮೇಶ್ವರನಿಂದ ನಿರ್ಮಿಸಲ್ಪಟ್ಟಿದೆ.

ಅವರವರು, ಆಯಾ ಮಾರ್ಗಗಳನ್ನು ಅನುಸರಿಸಿ ವ್ಯತ್ಯಾಸವಾಗದಂತೆ ಆಚಾರಗಳನ್ನು ನಡೆಸಿಕೊಂಡು ಕೆಳಗಿನ ತರಗತಿಯವರು ಉನ್ನತ ಸ್ಥಾನವನ್ನು ಕೋರಿ ಸೋಪಾನಕ್ರಮವಾಗಿ, ಎಲ್ಲರೂ ಉತ್ತಮ ಸುಖವನ್ನು ಹೊಂದುವ ಇಚ್ಛೆಯಿಂದ ಪ್ರಪಂಚ ವೃದ್ಧಿಗೋಸ್ಕರ ಅವರವರಿಗೆ ಪರಮೇಶ್ವರನು ವೇದ ಮೂಲಕವಾಗಿ ನಿಬಂಧನೆಗಳನ್ನು ಮತ್ತು ಆಚಾರಗಳನ್ನು ನಿರ್ಮಿಸಿದ್ದಾನೆ.

ವೇದಗಳಲ್ಲಿ ನಿಬಂಧನೆಗಳು ಸಂಕ್ಷೇಪವಾಗಿರೋಣದ್ದರಿಂದ ತದನಂತರ ಮಹರ್ಷಿಗಳು, ತದನುಗುಣವಾಗಿ ಅವುಗಳನ್ನು ವಿಶದೀಕರಿಸಿ ಮನ್ವಾದಿ ಸ್ಮೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿರತಕ್ಕ ಅಂಶಗಳು ಸ್ಪಷ್ಟಪಡಿಸಿ ಪುರಾಣಗಳು ಉತ್ಪನ್ನವಾಗಿವೆ.

ಪ್ರವೃತ್ತಿ, ನಿವೃತ್ತಿಗಳು, ಅನುರಕ್ತಿ, ವಿರಕ್ತಿಗಳು ಸುಖ ದುಃಖ ಕಾರಣಗಳಾಗಿಯೂ, ಪ್ರಪಂಚ, ವೃದ್ಧಿ, ಕ್ಷಯ ಕಾರಣಗಳಾಗಿಯೂ ಇರೋಣದ್ದ

ರಿಂದ ಸೃಷ್ಟಿ, ವೃದ್ಧಿಯನ್ನು ಕೋರಿ ಶ್ರೀ ಪರಮೇಶ್ವರನು ಪ್ರಪಂಚದ ಜನರಿಗೆ ಫಲಾಪೇಕ್ಷೆಯನ್ನುಂಟುಮಾಡುತ್ತಾ, ಕಾಮ್ಯ ಕರ್ಮಗಳಲ್ಲಿ ಅಭಿಮುಖರನ್ನಾಗಿ ಮಾಡುವ ಸಂಕಲ್ಪದಿಂದ ಅರವತ್ತು ನಾಲ್ಕು ತಂತ್ರಗಳನ್ನು ನಿರ್ಮಿಸಿದ್ದಾನೆ.

ಪ್ರಪಂಚ ಜನ ಮೋಹನಾರ್ಥವಾಗಿ ಶ್ರೀ ಮಹಾವಿಷ್ಣು ಪ್ರೇರಣೆಯಿಂದ ಶ್ರೀ ಪರಮೇಶ್ವರನು, ಪಾಶುಪತಾದಿ ತಂತ್ರಗಳು ಶ್ರೀ ಪರಶಿವನ ಪ್ರೇರಣೆಯಿಂದ ಶ್ರೀ ಮಹಾವಿಷ್ಣುವು ಪಾಂಚರಾತ್ರ, ವೈಖಾನಸಾದಿ ವೈಷ್ಣವ ತಂತ್ರಗಳು ನಿರ್ಮಿಸಿದ್ದಾರೆ(ಲಪ್ಪಟ್ಟವೆ)ಯೆಂದು ಕೆಲವು ಗ್ರಂಥಗಳಲ್ಲಿ ಕಾಣಬರುತ್ತವೆ.

ಈಶ್ವರ ಮುಖೋದ್ಭೂತಗಳಿಂದ, ಚತುಷ್ಷಷ್ಟಿ ತಂತ್ರಗಳು, ವಿಷ್ಣುಕೃತ ತಂತ್ರಗಳು, ಒಂದೊಂದರಿಂದ ಒಂದೊಂದು ಕಾಮ್ಯವನ್ನು ಮಾತ್ರ ಸಂಪಾದಿಸಲ್ಪಡೋಣದ್ದರಿಂದಲೂ, ಅದೂ ಸಹಾ ಪ್ರಮಾಣವಾಗಿರತಕ್ಕ ವೇದಮಾರ್ಗಕ್ಕೆ ದೂರವಾಗಿರೋಣದ್ದರಿಂದಲೂ ಯೋಚಿಸಿ ಒಂದು ತಂತ್ರದಿಂದಲೇ, ಸಕಲ ಕಾಮ್ಯಗಳೂ ಲಭಿಸಲ್ಪಡತಕ್ಕದ್ದೂ, ವೇದ ಸಮ್ಮತವಾದದ್ದೂ ಆದ ಅಂಥಾ ತಂತ್ರವನ್ನು ನಿರ್ಮಿಸಿ ಉಪದೇಶಿಸಬೇಕೆಂತ ಪರಾಶಕ್ತಿಯುಳ್ಳ ಶ್ರೀ ಪರಮೇಶ್ವರನನ್ನು ಪ್ರಾರ್ಥಿಸಿದ್ದರಿಂದ ಶ್ರೀ ಪರಮೇಶ್ವರನು ಪುನಃ ಅಗ್ರವರ್ಣದವರಿಗೋಸ್ಕರ ವೇದೋಕ್ತ ಮಾರ್ಗವಾದ ಶ್ರೀ ವಿದ್ಯೋಪಾಸನಾಕ್ರಮುವನ್ನು "ಕಾದಿ" ವಿದ್ಯ ಎನ್ನುವ ಸ್ವತಂತ್ರ ತಂತ್ರವನ್ನೂ ಸಿದ್ಧಿಪ್ರದ (ಸಿದ್ಧವಜ್ರ)ವೆನ್ನುವ ಶ್ರೀ ಚಕ್ರವನ್ನೂ ನಿರ್ಮಿಸಿದ್ದಾರೆ. ಇವುಗಳಿಗೆ ಸಮಯ ದಕ್ಷಿಣಾಚಾರಗಳೆಂತಲೂ ವೇದಮಾರ್ಗವೆಂತಲೂ ಮಿಕ್ಕ ತಂತ್ರಗಳು ವಾಮ ಕೌಳಾಚಾರವೆಂತಲೂ ವೇದಬಾಹ್ಯಗಳಾಗಿ ಶೂದ್ರಾದಿಗಳಿಗೋಸ್ಕರ ಉತ್ಪನ್ನವಾಗಿರುತ್ತದೆಂತಲೂ ವಿವರಿಸಿರುತ್ತಾರೆ.

ಈಶ್ವರ ಸೃಷ್ಟಿಯಿಂದ ನಾಲ್ಕು ವರ್ಣದವರಿಗೂ, ವೃದ್ಧಿಯನ್ನು ಕೋರಿ ಇಹಪರ ಸುಖಗಳನ್ನು ಹೊಂದಲು ಸಾಧನಗಳಾಗಿ ನಾಲ್ಕು ಆಚಾರಗಳನ್ನು ನಿರ್ಮಿಸಿದ್ದಾರೆ.

ಇವುಗಳಲ್ಲಿ ಸಮಯ, ದಕ್ಷಿಣಾಚಾರಗಳು ವೇದೋಕ್ತವೂ ಬ್ರಾಹ್ಮಣಾರ್ಹವಾದುವುಗಳು, ಸಮಷ್ಟಿಯಾಗಿ ಈ ಎರಡೂ ಅಂತರಂಗ, ಬಹಿರಂಗ, ಪೂಜಾಕ್ರಮವೆಂತಲೂ, ಕೌಳ, ವಾಮಾಚಾರಗಳು, ಶೂದ್ರಾದಿಗಳನ್ನುದ್ದೇಶಿಸಿ

ಉತ್ಪನ್ನವಾಗಿದೆ ಎಂತಲೂ, ವೇದಬಾಹ್ಯವೆಂತಲೂ, ಈ ಎರಡು ಆಚಾರನವರಿಗೆ ಅಂತರಂಗ ಬಹಿರಂಗ ಪೂಜಾದಿಗಳು ವ್ಯತ್ಯಾಸವಾಗಿ ನಿರ್ಮಿಸಲ್ಪಟ್ಟವೆ.

ಇದಕ್ಕೆ ಸನಕ, ಸನಂದನ- ಸನತ್ಕುಮಾರ, ಸನತ್ಸುಜಾತ, ವಶಿಷ್ಠರು, ವೇದಗಳಲ್ಲಿ ಸಂಕ್ಷೇಪವಾಗಿ ಹೇಳಿದ ಸಮಯ ದಕ್ಷಿಣಾಚಾರಗಳನ್ನು ವಿಶದೀಕರಿಸಿ ಅವರವರ ನಾಮಾಂಕಿತಗಳಿಂದ ಪಂಚ ಸಂಹಿತೆಗಳನ್ನು ರಚಿಸಿದ್ದಾರೆ.

ವಾಮಕೌಳಾಚಾರಗಳನ್ನು ವಿಶದೀಕರಿಸಿ ದತ್ತಾತ್ರೇಯ ಪರಶುರಾಮ ಕಪಿಲ, ದೂರ್ವಾಸಾದಿಗಳು ಕುಲಾರ್ಣವ, ಕಾಳೀ ತಂತ್ರಾದ್ಯನೇಕ ಗ್ರಂಥಗಳನ್ನು ರಚಿಸಿರುತ್ತಾರೆ.

ಆದ್ದರಿಂದ ಸಮಯ ದಕ್ಷಿಣಾಚಾರದವರಿಗೆ ಶ್ರೀ ಚಕ್ರಾರ್ಚನೆಗೋಸ್ಕರ ಕಲ್ಪಸೂತ್ರವನ್ನು ಸಂಹಿತೆಗಳನ್ನನುಸರಿಸಿ ಋಷಿಗಳು ರಚಿಸಿದರು. ಪರಶುರಾಮರು ಸೂತ್ರಗಳನ್ನು ರಚಿಸಿದರು.

ಅವುಗಳನ್ನನುಸರಿಸಿ ಅವರವರು ವ್ಯತ್ಯಾಸವಾಗದಂತೆ ಅಂತರಂಗ ಬಹಿರಂಗ ಪೂಜಾಕಲಾಪಗಳನ್ನು ನಡೆಸಿಕೊಂಡು ಬಂದರು. ಕೆಲವು ಕಾಲದ ಮೇಲೆ ಹಿಂದೆ ದಧೀಚಿ, ಗೌತಮರು ಮೊದಲಾದ ಮಹರ್ಷಿಗಳು ಕಾರಣಾಂತರಗಳಿಂದ ಕೆಲವು ಜನ ಬ್ರಾಹ್ಮಣರಿಗೆ ವೇದ ಬಾಹ್ಯರಾಗುವಂತೆಯೂ ನರಕವಾಸವನ್ನು ಅನುಭವಿಸುವಂತೆಯೂ ಶಾಪವನ್ನು ಕೊಟ್ಟರು. ಅವರು ಶಾಪ ವಿಮೋಚನೆಗಾಗಿ ಪ್ರಾರ್ಥಿಸಲಾಗಿ ಮಹರ್ಷಿಗಳು ದಯಾಳುಗಳಾಗಿ ಸೋಪಾನಕ್ರಮವಾಗಿ ಮುಕ್ತಿಯನ್ನು ಹೊಂದುವಂತೆಯೂ ಕಲಿಯುಗದಲ್ಲಿ ಬ್ರಾಹ್ಮಣ ಜನ್ಮವನ್ನು ಹೊಂದಿ ವೇದ ಬಾಹ್ಯರಾಗಿ ಕೌಳ ವಾಮಾಚಾರಪರರಾಗಿದ್ದು ಕ್ರಮವಾಗಿ ಉದ್ಧಾರವನ್ನು ಹೊಂದುವಂತೆ ಅನುಗ್ರಹಿಸಿದರು. ಆದ್ದರಿಂದ ಕಲಿಯುಗದಲ್ಲಿ ಕೆಲವು ಬ್ರಾಹ್ಮಣರು ತಮ್ಮ ತಮ್ಮ ಧರ್ಮಗಳನ್ನು ಆಚಾರ ಭೇದಗಳನ್ನು ವಿಚಾರಿಸದೇ ವೇದಬಾಹ್ಯರಾಗಿ ಶೂದ್ರಾರ್ಹವಾದ ಕೌಳವಾಮಾಚಾರಪರರಾಗಿದ್ದರಿಂದ ನಮ್ಮ ಪೂರ್ವಾಚಾರ್ಯರು, ಗೌಡಪಾದ, ಶ್ರೀ ಶಂಕರ ಭಗವತ್ಪಾದ, ಶ್ರೀ ವಿದ್ಯಾರಣ್ಯರು "ಶ್ರೀ ವಿದ್ಯ" ಇಹಪರ ಸಾಧನಗಳಲ್ಲಿ ಅಗ್ರಗಣ್ಯವೆಂತಲೂ

ತಮ್ಮ ಇಷ್ಟ ದೇವತೆಯೆಂತಲೂ ಚಾತುರ್ವರ್ಣದವರಿಗೂ ನಾಲ್ಕು ಆಚಾರಗಳನ್ನು ವಿವರಿಸಿದರು.

ಅದರಲ್ಲಿ ಶ್ರೀ ವಿದ್ಯಾರಣ್ಯರು ಬ್ರಾಹ್ಮಣರು. ಈ ಆಚಾರ ವಿಭಾಗವನ್ನು ತಿಳಿದುಕೊಂಡು (ಬ್ರಾಹ್ಮಣರು) ಸದಾಚಾರಪರರಾಗಬೇಕೆನ್ನುವ ಆಶೋತ್ತರಗಳಿಂದ ಈ ಗ್ರಂಥವನ್ನು ರಚಿಸಿದರು.

ಇದಕ್ಕೆ ಲೋಕದಲ್ಲಿ ಕೌಳ ವಾಮಾಚಾರ ತಂತ್ರ ಮಾರ್ಗಗಳೂ, ಆಯಾ ವಚನಗಳೂ, ಪ್ರಚುರವಾಗಿದ್ದದ್ದರಿಂದಲೂ, ಸಮಯ ದಕ್ಷಿಣಾಚಾರ ನಿಬಂಧನ ಸಂಹಿತೆಗಳು, ಗುಪ್ತವಾಗಿದ್ದದ್ದರಿಂದಲೂ, ಬ್ರಾಹ್ಮಣರು ವೇದ ವಿರುದ್ಧ ಧರ್ಮಗಳಲ್ಲಿ ಭ್ರಮೆಯನ್ನು ಹೊಂದದೇ, ಇರಲು, ಪ್ರಮಾಣ ಗ್ರಂಥವಾಗಿ ಗ್ರಹಿಸುವರೆಂತ ಈ ಗ್ರಂಥವನ್ನು ರಚಿಸಿದರು.

ಇದು ಸಂಸ್ಕೃತದಲ್ಲಿದ್ದು ಕರ್ಣಾಟಕ ವ್ಯಾಖ್ಯಾನವನ್ನು ಬರೆಯಬೇಕೆಂಬ ಕುತೂಹಲವು ಬಹುಕಾಲದಿಂದ ಇದ್ದದ್ದರಿಂದ ಇದರ ಮೂಲಗ್ರಂಥವನ್ನು ಬಹು ಪ್ರಯತ್ನದಿಂದ ಸಂಪಾದಿಸಿ ಕರ್ಣಾಟಕ ವ್ಯಾಖ್ಯಾನವನ್ನು ಬರೆ (ಯಲ್ಪಟ್ಟದೆ) ದಿರುವೆನು.

ಮುಂದೆ ಶ್ರೀ ಪರದೇವತಾನುಗ್ರಹವಿದ್ದಲ್ಲಿ ಶ್ರೀ ಲಲಿತಾ ಸಹಸ್ರನಾಮಗಳಿಗೂ, ಮಾತೃಕಾಚಕ್ರವಿವೇಕ, ಸುಭಗೋದಯಗಳಿಗೆ ಕರ್ಣಾಟಕ ವಾಖ್ಯಾನವು ರಚಿಸಲ್ಪಡುವುದು,

ಪ್ರಾಜ್ಞರು ಅನ್ಯಾಭಿಪ್ರಾಯವನ್ನು ಹೊಂದದೆ ಸುಮಾರ್ಗವರ್ತರಾಗಿ ನಿತ್ಯ ಸುಖವನ್ನು ಹೊಂದುವರಾಗಲೆಂದು ಶ್ರೀ ಪರದೇವತೆಯನ್ನು ಪ್ರಾರ್ಥಿಸುತ್ತೇನೆ.

ಇತಿ, ವಿದ್ವಜ್ಜನ ವಿಧೇಯ
ಶ್ರೀ ಕೌಂಡಿಣ್ಯ
**(ಲಂಕಾ ಶ್ರೀನಿವಾಸ)**

★

ಶ್ರೀ

ಶ್ರೀರಸ್ತು

ಶ್ರೀ ಗಣೇಶಾಯನಮಃ

ಶ್ರೀ ಪರಾಂಬಾಯನಮಃ

# ಸದಾಚಾರ ದೀಪಿಕಾ

**ಓಂ**

ನೌಮಿ ತತ್ಪರಮಂ ಬ್ರಹ್ಮ ಸಚ್ಚಿದಾನಂದ ಮದ್ವಯಮ್ ।
ಯಸ್ಯಸ್ಮರಣ ಮಾತ್ರೇಣ ಮಾಯಾ ಜಾಲಂ ವಿಲೀಯತೇ ॥

ತಾ॥ ಶ್ರೀ ವಿದ್ಯಾ ಸ್ವರೂಪವಾದ ಬ್ರಹ್ಮ ವಿದ್ಯೆಯನ್ನು ಆದಿಯಲ್ಲಿ ಪರಮೇಶ್ವರನು ಕಾಮೇಶ್ವರೀ ರೂಪವಾಗಿದ್ದು ಸ್ವಾಂಶಭೂತವಾದ ಪರಾಶಕ್ತಿ ಸ್ವರೂಪವಾದ ಶ್ರೀ ಕಾಮೇಶ್ವರೀ ದೇವಿಗೆ ಉಪದೇಶವನ್ನು ಕೊಟ್ಟನು. ಪರದೇವತೆ ಲೋಕದಲ್ಲಿ ಅನುಗ್ರಹ ಬುದ್ಧಿಯಿಂದ ಜ್ಯೇಷ್ಠ, ಮಧ್ಯ, ಬಾಲಕರಿಗೆ ಮಹೇಶ್ವರಾದಿ ಪುರುಷತ್ರಯವನ್ನು ಉಪದೇಶಿಸಿದರು. ಗುರು ಪರಂಪರೆಯಿಂದ ಶ್ರೀ ಶ್ರೀ ಗೌಡ ಪಾದಾಚಾರ್ಯರಿಗೆ ಲಭಿಸಿ ಅವರು ತಮ್ಮ ಇಷ್ಟ ದೇವತಾ ಪ್ರೀತಿಗೋಸ್ಕರ "ಸುಭಗೋದಯ" ಗ್ರಂಥವನ್ನು ರಚಿಸಿದ್ದಾರೆ. ಅವರ ಪ್ರಶಿಷ್ಯರಾದ ಶ್ರೀ ಶ್ರೀ ಶಂಕರಾಚಾರ್ಯರು "ಸೌಂದರ್ಯಲಹರಿ"ಯನ್ನು ರಚಿಸಿದರು. ಅವರಿಗೆ ಏಕಾದಶ ಶಿಷ್ಯ ಪರಂಪರೆಯಲ್ಲಿ ಅವತರಿಸಿದ ಜಗದ್ಗುರು ಪದವಿ ವಿರಾಜಿತರಾದ ಶ್ರೀ ಶ್ರೀ ವಿದ್ಯಾರಣ್ಯ ಯತೀಂದ್ರರು. ಈ ಬ್ರಹ್ಮ ವಿದ್ಯಾಚರಣೆಯಲ್ಲಿ ಈ ಕಲಿಕಾಲ ಮಹಿಮೆಯಿಂದ ಕೌಳ ವಾಮಾದಿ ದುರಾಚಾರಗಳು ವೈದೀಕರಲ್ಲಿ ಪ್ರಬಲವಾಗುತ್ತಾ ಇರೋಣದ್ದರಿಂದ ತನ್ನಿವಾರಣಾರ್ಥವಾಗಿ "ಸದಾಚಾರ ದೀಪಿಕ ಎನ್ನತಕ್ಕ ಈ ಗ್ರಂಥವನ್ನು ರಚಿಸಲು ಉದ್ಯುಕ್ತರಾಗಿ ಪರಮಾತನನ್ನು ಸ್ಮರಿಸುತ್ತಾ ಇದ್ದಾರೆ. ಹೇಗೆಂದರೆ—

ಯಾವ ಪರಬ್ರಹ್ಮ ಸ್ಮರಣೆಯಿಂದ ಮಾಯಾ ಸಮುದಾಯವು ಲಯ ವಾಗುತ್ತದೆಯೋ ಯಾವುದು ಏಕಾಕಾರವಾಗಿರುತ್ತವೆಯೋ ಅಂಥಾ ಪರ ಮಾತ್ಮನನ್ನು ಕುರಿತು ನಮಸ್ಕಾರವನ್ನು ಮಾಡುತ್ತಾ ಇದ್ದೇವೆ. ಲೋಕದಲ್ಲಿ ರತಕ್ಕ ಜನಗಳು ಮಾಯೆಯಿಂದ ಮೋಹಿತರಾಗಿ ಬ್ರಹ್ಮಜ್ಞಾನವನ್ನು ಮರೆತು ಇರೋಣದ್ದರಿಂದ, ದುರಾಚಾರಗಳಲ್ಲಿ ಪ್ರವೃತ್ತಿ ಉಂಟಾಗಿರುತ್ತದೆ. ಬ್ರಹ್ಮ ವಸ್ತು ಸ್ಮರಣೆಯಿಂದ ಮಾಯೆ ನಶಿಸುವುದು. ಆ ಮಾಯಾ ನಿವೃತ್ತಿಯಿಂದ ಸಕಲ ಶ್ರೇಯಸ್ಸು ಲಭಿಸುತ್ತದೆಯೆಂದು ಅಭಿಪ್ರಾಯವು.

ಗ|| ವಿಷಯಾಸಕ್ತ ಚಿತ್ತಾನಾಂ ಪೂರ್ವಾಚಾರ್ಯೈಸ್ಸಂತೋಷಾಯ ಕಾಮ್ಯಂ ಕರ್ಮ ಪ್ರಕೀರ್ತಿತಮೇತದ್ಧಿತಾವಹಂ ನ ಭವತಿ. ಕಿಂಚ, ಕಾಮ್ಯ ಕರ್ಮ ಪ್ರವೃತ್ತಾನಾಂ ಫಲಮಪಿ ತಾವನ್ಮಾತ್ರಂ ಭವತಿ. ನಿಷ್ಕಾಮೋಪಾಸಕಾಂ ಸರ್ವಾಭೀಷ್ಟ ಸಿದ್ಧಯೋ ಭವಂತಿ ||

ತಾ|| ಪೂರ್ವ ಕಾಲದಲ್ಲಿ ಮಹರ್ಷಿಗಳಿಂದ ವಿಷಯ ಸುಖಗಳನ್ನು (ಗ್ರಾಮ್ಯ ಸುಖಗಳನ್ನು) ಕೋರತಕ್ಕ ಜನಗಳ ಪ್ರೀತಿಗೋಸ್ಕರ ಕಾಮ್ಯ ಕರ್ಮಗಳು ಏರ್ಪಡಿ ಸಲ್ಪಟ್ಟವೆ. ಆದಾಗ್ಯೂ ಅವು ಶ್ರೇಯಸ್ಕರಗಳಾದದ್ದಲ್ಲವು. ಅದೂ ಅಲ್ಲದೇ ಕಾಮ್ಯ ಕರ್ಮಗಳಲ್ಲಿ ಪ್ರವೇಶಿಸಿದವರಿಗೆ ಫಲಗಳೂ ಸಹಾ ಅಷ್ಟರಲ್ಲಿಯೇ ಇರು ತ್ತವೆ. ಯಾವ ಕೋರಿಕೆಯಿಂದ (ಕರ್ಮಗಳನ್ನು) ಮಾಡಿದವರಿಗೆ ಆ ಕೋರಿ ಕೆಯು ಸಿದ್ಧಿಸುವುದು ಮಾತ್ರವೆಂತ ಅರ್ಥವು.

ನಿಷ್ಕಾಮದಿಂದ ದೇವತೋಪಾಸನೆ ಮಾಡಿದವರಿಗೆ ಸಕಲ ಕೋರಿಕೆ ಗಳೂ ಸಿದ್ಧಿಸುತ್ತವೆ.

ಗ|| "ಆತ್ಮಲಾಭಾಯ ವೇದೇಕರ್ಮೋಪಾಸನಬೋಧ" ಇತಿ ಕಾಂಡತ್ರಯಂ ಪ್ರೋಕ್ತಂ ||

ತಾ|| ವೇದದಲ್ಲಿ ಬ್ರಹ್ಮಜ್ಞಾನಕ್ಕೋಸ್ಕರ (ಸ್ವಸ್ವರೂಪ ಜ್ಞಾನಕ್ಕೋಸ್ಕರ) ಕರ್ಮ ಕಾಂಡ, ಉಪಾಸನಕಾಂಡ, ಬೋಧ (ತತ್ವಬೋಧ) ಜ್ಞಾನ ಕಾಂಡ ಹೇಳಲ್ಪ ಟ್ಟಿರುತ್ತವೆ.

"ತತ್ರ ಕರ್ಮಕಾಂಡಂ ಜ್ಯೋತಿಷ್ಟೋಮೇನ ಸ್ವರ್ಗ ಕಾಮೋಯಜತೇ ತ್ಯಾದಿ" "ಉಪಾಸನ ಕಾಂಡಂ ಸೂರ್ಯೋ ಬ್ರಹ್ಮೇತ್ಯುಪಾಸೀತ| ಯೋಹವೈ ಜ್ಯೇಷ್ಠಂಚ ಶ್ರೇಷ್ಠಂಚ ವೇದ ಇತ್ಯಾದಿ | ಇದಂ ಕಾಂಡದ್ವಯಂ ಜ್ಞಾನಸ್ಯ ಸಾಧನಮ್ | ತೃತೀಯಂ ಜ್ಞಾನಕಾಡಂ ಅಯಮಾತ್ಮಾ ಬ್ರಹ್ಮೇತ್ಯಾದಿ || ತತ್ ಸಾಧ್ಯಂ ಫಲಭೂತಮತೋ ಆತ್ಮಲಾಭಂ ಪುಂಭಿಃ ಪ್ರಯತಿತವ್ಯಮ್||

ತಾ|| ಆ ಕಾಂಡತ್ರಯಗಳಲ್ಲಿ ಕರ್ಮಕಾಂಡವೆನ್ನತಕ್ಕದ್ದು ಸ್ವರ್ಗವನ್ನು ಕೋರತಕ್ಕವರು ಜ್ಯೋತಿಷ್ಟೋಮಾದಿಗಳಿಂದ ಯಜ್ಞವನ್ನು ಮಾಡತಕ್ಕ ವಂಥಾವವುಗಳು. ಉಪಾಸನಾಕಾಂಡವು ಜ್ಯೇಷ್ಠನಾದ ಈ ಸೂರ್ಯನು ಪರಬ್ರಹ್ಮ ಸ್ವರೂಪನೆಂದು ತಿಳಿದು ಉಪಾಸನೆ ಮಾಡಬೇಕಾದಂಥಾದ್ದು. ಬೋಧಕಾಂಡವು ಸಾಕ್ಷೀ ಸ್ವರೂಪವಾಗಿ ತನ್ನಲ್ಲಿಯೇ ಇರತಕ್ಕ ಪ್ರತ್ಯಗಾತ್ಮವೇ ಬ್ರಹ್ಮ ಸ್ವರೂಪ ವೆಂದು ಮಹಾ ವಾಕ್ಯಗಳು ಹೇಳುತ್ತಿರುತ್ತವೆ. ಈ ಪ್ರಕಾರವಾಗಿ ಕಾಂಡ ತ್ರಯಗಳು ವೇದಗಳಲ್ಲಿ ಹೇಳಲ್ಪಟ್ಟಿರುತ್ತದೆ ಅದರಲ್ಲಿ ಕರ್ಮೋಪಾಸನೆಗಳು ಬ್ರಹ ಜ್ಞಾನಕ್ಕೆ ಸಾಧನೆಗಳು. ಕರ್ಮದ್ವಾರಾ ಚಿತ್ತ ಶುದ್ಧಿ, ತದ್ವಾರಾ, ಜ್ಞಾನೋ ದಯವು ಈ ರೀತಿ ಬೋಧಕಾಂಡ (ಜ್ಞಾನಕಾಂಡ) ಫಲದಾಯಕವಾಗಿರೋಣ ದ್ದರಿಂದ ಅಜ್ಞಾನದಿಂದ ಮರೆತಿರತಕ್ಕ ಆತ್ಮಲಾಭವು (ಸ್ವರೂಪ ಜ್ಞಾನವು) ಬ್ರಹ್ಮಜ್ಞಾನಕ್ಕೋಸ್ಕರ ಪುರುಷರಿಂದ ಪ್ರಯತ್ನಿಸಲ್ಪಡಬೇಕಾದ್ದು. ಕರ್ಮೋ ಪಾಸನೆಗಳು ಸಾಧನೆಗಳಾಗಿಯೂ, ಜ್ಞಾನಕಾಂಡವು ಸಾಧ್ಯವಾಗಿಯೂ ಇವೆ ಯೆಂದು ಭಾವವು,

"ವೇದೋಕ್ತಂ ಕರ್ಮೋಪಾಸನಂಚ ಕರ್ತವ್ಯಂ ತೇನ ಶುದ್ಧಾಂತಃ ಕರಣೋ ಜ್ಞಾನಂ ಲಭತೇ" ತಥಾಚ ನಿಬಂಧೇ |

ತಾ|| ವೇದಗಳಲ್ಲಿ ಹೇಳಿರತಕ್ಕ ಕರ್ಮೋಪಾಸನೆಗಳು ಮಾಡತಕ್ಕವು ಗಳು. ಅದರಿಂದ ನಿರ್ಮಲವಾದ ಮನಸ್ಸುಳ್ಳವರಾಗಿ ಜ್ಞಾನವನ್ನು ಹೊಂದುವ ರಾಗುವರು. ಇದಕ್ಕೆ ಪ್ರಮಾಣಗಳು.

ಶ್ಲೋ|| ವಿಷಯಾಸಕ್ತ ಚಿತ್ತಾನಾಂ ಸಂತೋಷಾಯ ಪ್ರಕಾಶಿತಂ | ಪೂರ್ವಾ ಚಾರ್ಯೋದಿತಂ ಕಾಮ್ಯಂ ಕರ್ಮಸ್ಯೈತದ್ಧಿತಾವಹಮ್ | ಕಾಮ್ಯ ಕರ್ಮ

ಪ್ರವೃತ್ತಾನಾಂ ತಾವನ್ಮಾತ್ರಂ ಭವೇತ್ಫಲಮ್ । ನಿಷ್ಕರ್ಮ ಯಜತಾಂ ದೇವಮುಖಿಲಾಽಭೀಷ್ಟಸಿದ್ಧಯಃ ॥ ವೇದೇಕಾಂಡತ್ರಯಂ ಪ್ರೋಕ್ತಂ ಕರ್ಮೋಪಾಸನ ಬೋಽಧನಮ್ । ಸಾಧನಂ ಕಾಂಡ ಯುಗ್ಮೋಕ್ತಂ ತೃತೀಯೇ ಸಾಧ್ಯ ಮಿರಿತಂ । ತಸ್ಮಾದ್ವೇದೋದಿತಂ ಕುರ್ಯಾದು ಪಾಸೀತ ಚ ದೇವತಾಃ । ಶುದ್ಧಾನ್ತಃ ಕರಣಸ್ತೇನ ಲಭತೇ ಜ್ಞಾನ ಮುತ್ತಮಮ್ ॥ ಇತಿ ॥ ಅತಃ ಚಿತ್ತ ಶುದ್ಧಯೇ ಕರ್ಮೋಪಾಸಂ ಚ ಕರ್ತವ್ಯ ಮಿತ್ಯುಕ್ತಂ ॥

ತಾ॥ ಈ ವಚನಗಳ ತಾತ್ಪರ್ಯವನ್ನು ಹಿಂದೆ ಹೇಳಲ್ಪಟ್ಟಿರುತ್ತದೆ, ಅದ ಕ್ಕೋಸ್ಕರ ಚಿತ್ತ ಶುದ್ಧಿಗಾಗಿ ನಿಷ್ಕಾಮದಿಂದ ಕರ್ಮೋಪಾಸನೆಗಳನ್ನು ಮಾಡ ತಕ್ಕದ್ದು,

ಗ॥ ತತ್ರೋಪಾಸನಾಕಾಂಡ ಪ್ರವೃತ್ತಾನಾಂ ವೈದಿಕಾನಾಂ ಮಧ್ಯೇ ಕೇ ಚಿದಾಚಾರ ಪರಿಜ್ಞಾನಾ ಭಾವಾತ್ಕೇಚಿತ್ಸಾಮಾನ್ಯಾಚಾರ ಪರಿಜ್ಞಾನಿನ ಆಚಾರೇಷು ಕೋವಾ ಮುಖ್ಯಾಚಾರ ಇತಿ ಸಿದ್ಧಾಂತ ಜ್ಞಾನಾಭಾವಾತ್ಕೇ ಚಿಜ್ಞಾತ್ವಾ ವೈಷಯಿಕ ಭೋಗಲಿಪ್ಸಯಾ ತತ್ರ ತತ್ರ ಪ್ರವೃತ್ತಾಸ್ಸಂತೋ ಇತೋಪ್ಯುತ್ಕೃಷ್ಟ ಸಿದ್ಧಾನ್ತೋಪರೋ ನಾಸ್ತೀತಿ ಸ್ವಯಂ ಭ್ರಷ್ಟಾಃ ಪರಾನಪಿ ವಂಚಯಿತುಂ ಧಾರ್ಷ್ಟ್ಯ ವಾಕ್ಯಾನಿ ಜಲ್ಪಂತಃಕೌಳಾದಿಷು ಪ್ರವೃತ್ತಾಃ ॥

ತಾ॥ ಆ ಕಾಂಡತ್ರಯಗಳಲ್ಲಿ ಉಪಾಸನಾ ಕಾಂಡವನ್ನು ಪ್ರವೇಶಿಸಿದ (ಅನುಸರಿಸಿದ) ವೈದೀಕರುಗಳಲ್ಲಿ ಕೆಲವು ಜನಗಳು ಆಚಾರ ಜ್ಞಾನವಿಲ್ಲದೇ ಮತ್ತೆ ಕೆಲವರು ಸಾಮಾನ್ಯ ಜ್ಞಾನ ಉಳ್ಳವರಾಗಿ ಆಚಾರಗಳಲ್ಲಿ ಯಾವುವು ಮುಖ್ಯವಾದುವುಗಳೋ ತಿಳಿಯದೇ, ಇನ್ನೂ ಕೆಲವರು ಆಚಾರ ಭೇದಗಳನ್ನು ತಿಳಿದವರಾದಾಗ್ಯೂ, ಇಂದ್ರಿಯ ಚಾಪಲ್ಯಗಳಿಂದ ಭೋಗಗಳಲ್ಲಿ ಆಸಕ್ತಿಯುಳ್ಳ ವರಾಗಿ, ಕೌಳವಾಮಾದ್ಯಾಚಾರಗಳಲ್ಲಿ ಪ್ರವೇಶಿಸಿ ಇವಕ್ಕಿಂತಲೂ ಬೇರೆ ಉತ್ಕೃ ಷ್ಟವಾದ ಸಿದ್ಧಾಂತವಿಲ್ಲವೆಂದು ತಿಳಿದು ತಾವೂ ಭ್ರಷ್ಟರಾಗಿ ಇತರರನ್ನೂ ವಂಚಿಸಲು (ದುರ್ಬೋಧ) ದುರ್ಭಾಷೆಯನ್ನು ನುಡಿಯುತ್ತಾ ಕೌಳಾದಿ ಮತ ಗಳಲ್ಲಿ ಪ್ರವೃತ್ತಿಯುಳ್ಳವರಾಗಿರುತ್ತಾರೆ.

ಗ॥ "ಏತೇಭ್ರಷ್ಟಾ ಅವೈದಿಕಾ ಏವೇತ್ಯಗ್ರೇ ವಕ್ಷ್ಯಂತೇ । ವಾಮಾದ್ಯಾಚಾರ ಪ್ರವೃತ್ತಾನಾ ಮುಪಾಸಕಾನಾಂ ಸಕಲ ಮಂತ್ರಾನುಷ್ಠಾನಾಧಿಕಾರೋ ನಾಸ್ತಿ" ॥

ತಾ॥ ಈ ಭ್ರಷ್ಟರು ಅವೈದಿಕರು ವೇದಬಾಹ್ಯರು ಎನ್ನುವ ವಿಚಾರ ಮುಂದೆ ಹೇಳಲ್ಪಡುವರು. ವಾಮಾದ್ಯಾಚಾರಗಳುಳ್ಳವರಿಗೆ ಸಕಲ ಮಂತ್ರಾನುಷ್ಠಾನಾಧಿಕಾರವಿಲ್ಲ,

ಶ್ಲೋ॥ ವಿನಾಪೀತ್ವಾಸುರಾಂ ಭುಕ್ತ್ವಾ ಮಾಂಸಂಗತ್ವಾ ರಜ
ಸ್ವಲಾಂ। ಯೋಜಪೇದ್ದಕ್ಷಿಣಾಂ ಕಾಳೀಂ ತಸ್ಯ
ದುಃಖಂ ಪದೇ ಪದೇ॥ ಇತಿಶ್ಯಾಮ ರಹಸ್ಯೇ॥
ಮಧು ಮಾಂಸಂ ವಿನಾದೇವೀ ಕುಲ ಪೂಜಾಂ ಸಮಾಚರೇತ್।
ಜನ್ಮಾಂತರ ಸಹಸ್ರಸ್ಯ ಸುಕೃತಂ ತಸ್ಯನಶ್ಯತಿ॥ ಇತಿ ವಿಶೇಷ ವಚನಾತ್॥

ತಾ॥ ಸುರಾಪಾನವು, ಮಾಂಸಭಕ್ಷಣವು, ರಜಸ್ವಲಾ ಸ್ತ್ರೀ ಸಂಭೋಗವು ಇಲ್ಲದೇ ದಕ್ಷಿಣ ಕಾಳೀ ಮಂತ್ರೋಪಾಸನೆಯನ್ನು ಮಾಡಿದವರಿಗೆ ಪದೇ ಪದೇ ದುಃಖವು ಸಂಭವಿಸುತ್ತದೆ ಎಂದು "ಶ್ಯಾಮಾರಹಸ್ಯ" ವೆಂಬ ಗ್ರಂಥದಲ್ಲಿ ಹೇಳಲ್ಪಟ್ಟಿರುತ್ತದೆ. ಮದ್ಯ ಮಾಂಸಗಳಿಲ್ಲದೆ ಕುಲ ಪೂಜೆಯನ್ನು ಮಾಡಿದ್ದಾದರೆ ಅವರಿಗೆ ಸಹಸ್ರ ಜನ್ಮಗಳಲ್ಲಿ ಮಾಡಿದ ಪುಣ್ಯವು ನಶಿಸುತ್ತದೆಯೆಂದು ನಿಯಮವು ಇದು ಅವರಿಗೆ ಪ್ರಮಾಣ ವಚನಗಳಾಗಿ ರೋಣದ್ದರಿಂದ.

ಗ॥ "ಕಾಳ್ಯಾದಿ ತಂತ್ರಾಣಾವಾಮಕೌಲ ಮಾರ್ಗೇಣೋಪಾ ಸ್ಯತ್ವೇನವ್ಯವಸ್ಥಾ
ನಿರೂಪಣಾದನ್ಯತ್ರಾ ಕರಣೇ ಪ್ರತ್ಯವಾಯ ಸ್ಮರಣಾತ್ತಂತ್ರೇಷು ವಾಮ
ಕೌಲ ದಕ್ಷಿಣಾ ಚಾರೈರುಪಾಸ್ಯ ದೇವತಾ ಮಂತ್ರ ನಿರ್ಣಯಾಚ್ಚ
ವೈದಿಕೈ ರಂಗತ್ವೇನ ಶ್ಯಾಮಾದಿ ಮಂತ್ರಾಗ್ರಾಹ್ಯಾಃ ॥"

ತಾ॥ ಕಾಳೀ ಮೊದಲಾದ ತಂತ್ರಗಳಲ್ಲಿ ಆಯಾ ಮಂತ್ರಗಳು ವಾಮ ಕೌಳ ಮಾರ್ಗಗಳಲ್ಲಿ ಉಪಾಶಿಸಬೇಕೆಂತಲೂ, ಬೇರೆ ಬೇರೆ ಮಾರ್ಗಗಳಲ್ಲಿ ಉಪಾಶಿಸಿದಲ್ಲಿ ಪ್ರತ್ಯವಾಯುವು ನಿರ್ಣಯವಾಗಿರೋಣದ್ದರಿಂದ ವಾಮ, ಕೌಳ, ದಕ್ಷಿಣ ಮಾರ್ಗಗಳಲ್ಲಿ ಉಪಾಸಿಸಬೇಕಾದ ಮಂತ್ರ ನಿಯಮಗಳು ಇರೋಣದ್ದರಿಂದ

( ಉಂಟಾಗಿರೋಣದ್ದರಿಂದ) ವೈದೀಕರಿಂದ ಶ್ಯಾಮಾ, ವಾರಾಹಿ, ಮೊದಲಾದ ಮಂತ್ರಗಳು ಶ್ರೀ ವಿದ್ಯಾಂಗಗಳಾಗಿ ಉಪಾಸಿಸಲ್ಪಡಬೇಕೆಂತ ಭಾವವು.

ಗ॥ " ತಥಾಚ ಭೈರವತಂತ್ರೇ "॥ ಶ್ಲೋ॥ ಕಾಳೀ, ತಾರಾ, ಛಿನ್ನ ಮಸ್ತಾ ಮಾತಂಗೀ ಸುಮುಖೀತಥಾ। ಪ್ರಚಂಡ ಚಂಡೀ ವಾರಾಹೀ ನಸ್ಫೂಜ್ಯಾ ದಕ್ಷಿಣೇನತು॥ಇತಿ॥ "ಸ್ವತಂತ್ರತಂತ್ರೇ "॥ "ಯಸ್ತ್ವಾಚಾರ ವಿಹೀನಸ್ಸ ನ್ನ್ಯತ್ಕ್ರ ಮೇಣಜಪೇನ್ಮನುಂ। ನತಾಂ ಸಿದ್ಧಿಮವಾಪ್ನೋತಿ ಸ್ಯಾಲಸೋ ರೋಗವಾರ್ಭವೇದಿತಿ "॥

ತಾ॥ ಕಾಳೀ, ತಾರಾ ಮೊದಲಾದ ಮಂತ್ರಗಳನ್ನು ದಕ್ಷಿಣಾಚಾರದಿಂದ ಉಪಾಸಿಸ ಕೂಡದೆಂತಲೂ, ಯಾವ ಮಂತ್ರಕ್ಕೆ ಯಾವ ಆಚಾರವೋ, ಅದನ್ನು ಬಿಟ್ಟು ಬಿಟ್ಟು ವ್ಯತ್ಯಾಸಮಾಡಿದಲ್ಲಿ ಆಲಸ್ಯಉಳ್ಳವರೂ, ರೋಗಿಗಳೂ ಆಗುವರೆಂತಲೂ, ಮೊದಲಾದ ನಿಬಂಧನೆಗಳು ತಂತ್ರಗಳಲ್ಲಿ ಹೇಳಲ್ಪಟ್ಟಿವೆ.

"ಏವಮಾಚಾರ ವಿಹೀನಸ್ಯ ಕರ್ಮನೈಷ್ಫಲ್ಯ ಶ್ರವಣಾದಾಚಾರಾ ನಿರೂಪ್ಯತೇ"॥

ತಾ॥ ತಂತ್ರಗಳಲ್ಲಿ ಆಯಾ ಆಚಾರಗಳಿಂದ ಪೂಜೆ ಮಾಡಿದಾಗ ಆಯಾ ಕರ್ಮಗಳು, ಉಪಾಸನೆಗಳು ವ್ಯರ್ಥವೆಂದು ಹೇಳಿದ್ದರಿಂದ, ಆಯಾ ಆಚಾರಗಳ ವ್ಯವಸ್ಥೆಗಳನ್ನು ಈ ಕೆಳಗೆ ಹೇಳಲ್ಪಡುತ್ತದೆ.

"ಸಮಯಾಚಾರೋ ದಕ್ಷಿಣಾಚಾರಃ ಕೌಳಾಚಾರೋವಾ ಮಾಚಾರ ಇತ್ಯಾಚಾರಾಶ್ಚತ್ವಾರಃ। ತತ್ರ ಸಮಯ ದಕ್ಷಿಣೌವೈದಿಕೌ। ಕೌಳವಾ ಮಾಂವವೈದಿಕಾ"॥

ತಾ॥ ಸಮಯಾಚಾರವು, ದಕ್ಷಿಣಾಚಾರವು, ಕೌಳಾಚಾರವು ವಾಮಾಚಾರಗಳೆಂತ ಆಚಾರಗಳು ನಾಲ್ಕು, ಅದರಲ್ಲಿ ಸಮಯ ದಕ್ಷಿಣಾಚಾರಗಳು ವೈದಿಕವೂ, ವೇದ ಸಮ್ಮತವೆಂತಲೂ ಕೌಳವಾಮಾಚಾರಗಳು ವೇದ ಬಾಹ್ಯ ಬಾಹ್ಯವೆಂತಲೂ, ಸಿದ್ಧಾಂತವು.

" ಸಮಯಾಚಾರ ಲಕ್ಷಣಂತು ವಸಿಷ್ಠ ಸಂಹಿತಾಯಾಂ "

ಶ್ಲೋ॥ ಸಮಯೋವೇದ ಏವಾತ್ರತಮುಕ್ತೋ ವೈದಿಕ ಸ್ಮೃತಃ।
ರತಿರಾಂತರ ಪೂಜಾಯಾಂ ಬಾಹ್ಯೇವಾ ವೈದಿಕೇನತು॥

ಶ್ಲೋ॥ ಸ್ನಾನಸಂಧ್ಯಾ ವಿಧಾನಂತು ಶ್ರುತಿ ಸ್ಮೃತ್ಯುಕ್ತ ಮಾರ್ಗತಃ।
ಶುಭಾಗ ಮೋಕ್ತವಿಧಿನಾ ಚಕ್ರೇ ಪೂಜಾದಿಕಂತಥಾ॥
ಪುಷ್ಪಂ ಜಲಂ ಫಲಂ ಪ್ರೋಕ್ತಂ ದ್ರವ್ಯಂ ಪೂಜಾವಿಧೌ ಸದಾ।
ಸಾಲಿಗ್ರಾಮೇ ಘಟೇಯುಂತ್ರೇ ಪೂಜಾಂ ಕುರ್ಯಾದ್ವಿಚಕ್ಷಣಃ।
ಹೋಮಾದಿಕಂ ವೈದಿಕಾಗ್ನೌ ಸಮಯಾಚಾರ ಇತ್ಯಯಮ್॥

ತಾ॥ ವಶಿಷ್ಠ ಸಂಹಿತೆಯಲ್ಲಿ ಹೇಳಲ್ಪಟ್ಟಿರತಕ್ಕ ಸಮಯಾಚಾರ ಲಕ್ಷಣವು :— ಅಂತರ್ಯಾಗದಲ್ಲಿ ಆಸಕ್ತಿಯು ಬಾಹ್ಯದಲ್ಲಿ ಶ್ರೀ ಚಕ್ರಾರ್ಚನೆಯನ್ನು ವೈದಿಕ ಮಾರ್ಗಾನುಸಾರವಾಗಿ ಶುಭಾಗಮ ಪಂಚಕಗಳಲ್ಲಿ ಹೇಳಿರತಕ್ಕ ರೀತಿ ಪೂಜಾ ಕಲಾಪವು, ಜಲವು, ಪುಷ್ಪಗಳು, ಫಲಗಳು ಇವುಗಳು ದ್ರವ್ಯಗಳೆಂತಲೂ, ಸಾಲಿಗ್ರಾಮಕ್ಕಾಗಲೀ, ಘಟಕ್ಕಾಗಲೀ, ಶ್ರೀಚಕ್ರಕ್ಕಾಗಲೀ ಪೂಜೆ ಮಾಡುವುದೂ, ವೈದಿಕಾಗ್ನಿಯಲ್ಲಿ ಹೋಮವೂ, ಇದು ಸಮಯಾಚಾರ. ವೇದ ಮಾರ್ಗ ಸಮ್ಮತವಾದದ್ದು.

" ದಕ್ಷಿಣಾಚಾರಾದೀನಾಂತುಲಕ್ಷಣಂ ರುದ್ರಯಾಮಳೇ "
ಶ್ಲೋ॥ ಪ್ರಭಾತೇ ಸ್ನಾನ ಸಂಧ್ಯಾದಿ ಮಧ್ಯಾಹ್ನೇ ಜಪಮೀಶ್ವರೀ।
ಔರ್ಣಮಾಸನ ಮಾತ್ಮಾರ್ಥಂ ಭಕ್ಷ್ಯಂ ಪಾಯಸಶರ್ಕರಾಃ॥
ಮಾಲಾರುದ್ರಾಕ್ಷಸಂಭೂತಾ ಪಾತ್ರಂ ಪಾಷಾಣ ಸಂಭವಂ।
ಭೋಗಂ ಸ್ವಕೀಯ್ಯೆ ಕಾಂತಾಭಿಃ ದಕ್ಷಿಣಾಚಾರ ಇತ್ಯಯಂ॥

ತಾ॥ ರುದ್ರಯಾಮಿಳದಲ್ಲಿ ಹೇಳಿರತಕ್ಕ ದಕ್ಷಿಣಾಚಾರ ಲಕ್ಷಣವು :— ಪ್ರಾತಃಕಾಲದಲ್ಲಿ ಸ್ನಾನಸಂಧ್ಯಾದಿಗಳನ್ನು, ಮಧ್ಯಾಹ್ನ ಕಾಲದಲ್ಲಿ ಜಪವನ್ನು ಮಾಡತಕ್ಕದ್ದು, ರೇಷ್ಮೆವಸ್ತ್ರವು ಆಸನವು, ರುದ್ರಾಕ್ಷಮಾಲಿಕೆಯು, ಪಾಯಸ ಶರ್ಕರಾದಿಗಳು ಭಕ್ಷ್ಯಗಳು ಶಿಲಾಮಯ:ಪಾತ್ರೆಯು, ಸ್ವಭಾರ್ಯಾ ಸಂಭೋಗವು, ಇತ್ಯಾದಿಗಳು ದಕ್ಷಿಣಾಚಾರಾರ್ಹವು. ಬಾಹ್ಯ ಪೂಜೆಯಲ್ಲಿ ವೇದವಿರುದ್ಧವಾಗದೇ ಇರತಕ್ಕವುಗಳು ದಕ್ಷಿಣವೆಂತ ಭಾವವು.

ಶ್ಲೋ॥ ವಾಮಾಚಾರ ಪ್ರವಕ್ಷ್ಯಾಮಿ ಶ್ರೀ ವಿದ್ಯಾಸಾಧನಂ ಶಿವೇ।
ಮಾಲಾ ನೃದಂತ ಸಂಭೂತಾಪಾತ್ರಂಚಾಪಿಕಪಾಲಕಂ॥
ದ್ರವ್ಯಮಾಸವ ಮಾತ್ಮಾರ್ಥಂ ಭಕ್ಷ್ಯಂಮಾಂಸಾದಿಕಂ ಶಿವೇ।
ಚರ್ವಣಂ ಬಾಲಮತ್ಸ್ಯಾನಾಂ ಮುದ್ರಾವೀಣಾರವಃ ಕಥಾ॥
ಮೈಥುನಂ ಪರಕಾಂತಾಭಿ ಸ್ಸರ್ವವರ್ಣ ಸಮಾನತಾ।
ವಾಮಾಚಾರ ಇತಿ ಪ್ರೋಕ್ತಸ್ತವ ಶೈಲ ವರಾತ್ಮಜೇ॥ಇತಿ॥

ತಾ॥ ಪರಮೇಶ್ವರನು ಪಾರ್ವತಿದೇವಿಗೆ ವಾಮಾಚಾರ ಲಕ್ಷಣವನ್ನು ಹೇಳುತ್ತಾನೆ. ಹೇಗೆಂದರೆ :— ಮೃತಿಹೊಂದಿದ ಮನುಷ್ಯ ದಂತಗಳು ಜಪ ಮಾಲಿಕೆಯಾಗಿಯೂ, ನರ ಕಪಾಲವು ಪೂಜೆಗೆ ಪಾತ್ರೆಯಾಗಿ ಉಪಯೋಗಿಸುವಿಕೆಯೂ, ಸುರಾದ್ರವ್ಯವು ತರ್ಪಣವಾಗಿ ಉಪಯೋಗಿಸುವಿಕೆಯೂ, ಆತ್ಮಾರ್ಥವಾಗಿ ಮಾಂಸವನ್ನು ಭಕ್ಷಣ ದ್ರವ್ಯವಾಗಿಯೂ, ಬಾಲಮತ್ಸ್ಯಗಳನ್ನು ಉಪದಂಶವಾಗಿಯೂ, (ನಂಜಿಕೊಳ್ಳುವ ಪದಾರ್ಥವು) ಪರಕಾಂತೆಯರಲ್ಲಿ ಸಂಭೋಗವೂ, ಸರ್ವವರ್ಣ ಸಮಾನತ್ವವೂ, ಇವು ವಾಮಾಚಾರ ಧರ್ಮಗಳೆಂತ ಹೇಳಿದ್ದಾರೆ.

"ಕುಲಾಚಾರ ಲಕ್ಷಣಂತು ಕುಲಾರ್ಣವೇ"

ಶ್ಲೋ॥ ಕುಲಸ್ತ್ರಿಯಂ ಶಿವೇ ಜ್ಞಾತ್ವಾ ನತ್ವಾ ನತ್ವಾ ಮಹೇಶ್ವರೀ।
ಹಠಾದಾನೀಯ ಸಂಪೂಜ್ಯತಯಾ ಭೋಗಂ ವಿಧಾಯ ಚ॥
ರೇತ ಸಾತರ್ಪಯೇದ್ದೇವೀಂ ಮಹಾತ್ರಿಪುರ ಸುಂದರೀಂ।
ಕಾಮೇಶ್ವರಂಚ ವಿಧಿನಾ ಜಪಂ ಕುರ್ಯಾದ್ವಿಶೇಷತಃ॥
ತತ್ಪೂರ್ವಕಂ ಚರೇದ್ಧೋಮಂ ಕುಲಕಾಂತಾಂ ವಿಭೂಷಯೇತ್।
ಮಧು ಮಾಂಸಾದಿಭಿರ್ದೇವಿ ಸಂತರ್ಪ್ಯ ಕುಲಯೋಷಿತಂ॥
ಕುಲೀನಂ ಸಾಧಕಂ ಚೈವತಥಾ ಕುಲಗುರುಂ ಶಿವೇ।
ಪ್ರತ್ಯಕ್ಷಂ ದೇವತಾರೂಪಂ ಧ್ಯಾತ್ವಾ ಭೋಗಂ ಚರೇತ್ತಥಾ॥
ಪ್ರತ್ಯಹಂವೈ ಚರೇದೇವಂ ಕುಲಾಚಾರ ಇತಿಸ್ಮೃತಃ॥
ಪ್ರಸಂಗ ವಶಾತ್ಕುಲ ಕಾಂತಾ ಲಕ್ಷಣಂ ತತ್ರೈವ।
ಗಣಿಕಾ ಶೌಂಡಿಕೀ ಚೈವ ಕೈವರ್ತೀ ರಜಕೀತಥಾ।
ತಕ್ರಕಾರೀಚ ಕರ್ಮಾರೀ ಮಾತಂಗೀ ಪುಂಶ್ಚಲೀತಥಾ"॥ಇತಿ॥

ತಾ|| ಕುಲಾರ್ಣವೆನ್ನತಕ್ಕ ಕೌಳಗ್ರಂಥದಲ್ಲಿ ಹೇಳಿದ ಕೌಳಾಚಾರಕ್ಕೆ ಕುಲ ಪೂಜೆಗೆ ಯೋಗ್ಯರಾದ ಸ್ತ್ರೀಯರನ್ನು ತೋರಿಸುತ್ತಾ ಇದ್ದಾರೆ. ಕೆಳಗೆ ಉದಾಹರಿಸಿರುವ ಸ್ತ್ರೀಯರನ್ನು ಕುಲಪೂಜೆಗೆ ಯೋಗ್ಯರಾಗಿ ತಿಳಿದೂ ಅಂಥಾ ಸ್ತ್ರೀಯರಿಗೆ ನಮಸ್ಕರಿಸಿ, ಯಾವಾಗತಟಸ್ಥರಾದರೆ ಆ ಕೂಡಲೇ ಆ ಸ್ತ್ರೀಯರು ಗಳಿಗೆ ಪೂಜೆಯನ್ನು ಮಾಡಿ, ತಕ್ಷಣವೇ ಅವಳನ್ನು ಸಂಭೋಗಿಸಿ, ರೇತಸ್ಸಿನಿಂದ (ಅವಳ) ಯೋನಿ ಕುಂಡಲದಲ್ಲಿ ತ್ರಿಪುರ ಸುಂದರೀದೇವಿಯನ್ನು ಭಾವಿಸಿ ತರ್ಪಣವನ್ನು ಮಾಡಬೇಕು. ಕೌಳಿಕನನ್ನು ಕಾಮೇಶ್ವರನನ್ನುದ್ದೇಶಿಸಿ ಪೂಜಿಸಬೇಕು. ಅವರನ್ನು ಹತ್ತಿರ ಇಟ್ಟುಕೊಂಡು ವಿಶೇಷ ಪೂಜೆಯನ್ನು ಮಾಡಬೇಕು. ಅವರ ಜತೆಯಲ್ಲಿ ಹೋಮಾದಿಗಳನ್ನು ಮಾಡಬೇಕು. ಕುಲ ಸ್ತ್ರೀಯನ್ನು, ಕುಲಪುರುಷನನ್ನು, ಕುಲಗುರುವನ್ನು, ಮದ್ಯಮಾಂಸಾದಿಗಳಿಂದ ಪೂರ್ತಿಯಾಗಿ ಸಂತೋಷಪಡಿಸಿ ವಸ್ತ್ರಾಭರಣಗಳನ್ನು ಸಮರ್ಪಿಸಬೇಕು. ಪ್ರತ್ಯಕ್ಷವಾಗಿ ತಿಪುರ ಸುಂದರೀದೇವಿ, ಕುಲಸ್ತ್ರೀರೂಪವಾಗಿರುತ್ತಾಳೆಂತ ಭಾವಿಸಿ ಆ ಕುಲಸ್ತ್ರೀಯಳನ್ನು ಸಂಭೋಗಿಸಬೇಕು. ಪ್ರತಿದಿನವೂ ಈ ರೀತಿ ನಡೆಯುತಕ್ಕದ್ದು ಕೌಳಾಚಾರನೆಂತ ಹೇಳಲ್ಪಟ್ಟಿರುತ್ತದೆ.

ಕುಲಪೂಜಾರ್ಹರಾದ ಸ್ತ್ರೀಯರು:-- ಗಣಿಕಾ | ವೇಶ್ಯಾಸ್ತ್ರೀ ಶೌಂಡಿಕಿ-ಈಡಿಗರವಳು (ಸುರಾವಿಕ್ರಯಸ್ತ್ರೀ) ಕೈವರ್ತಿ-ಜಾರಿಲಾಯವಳು (ಮತ್ಸ್ಯ ವಿಕ್ರಯಸ್ತ್ರೀ, ಮೀನುಮಾರುವಳು ಬೆಸ್ತರವಳು) ರಜಕೀ – ಅಗಸರವಳು ತಕ್ರಕಾರಿ - ಗೊಲ್ಲರ ಹೆಂಗಸು ಕರ್ಮಾರೀ – ಅಕ್ಕಸಾಲೆಯವಳು (ಲೋಹ ಕಾರಕಸ್ತ್ರೀ) ಮಾತಂಗೀ–ಚಂಡಾಲಸ್ತ್ರೀ. ಪೂಂಶ್ಚಲೀ– ವ್ಯಭಿಚಾರಸ್ತ್ರೀ, ಇವರುಗಳು ಸಾಕ್ಷಾತ್ ಪ್ರಕೃತಿರೂಪರಾದ್ದರಿಂದ ಕುಲಪೂಜೆಗೆ ಯೊಗ್ಯರು. ಅಸಂಭವದಲ್ಲಿ ಪರಸ್ತ್ರೀಯರು, ಪೂರ್ವವಯಸ್ಸುಳ್ಳವರು. ಗ್ರಹಿಸಲ್ಪಡುವರು.

"ಅತ್ರೋಚ್ಯತೇ ಅಭ್ಯಂತರಾ ಬಾಹ್ಯಾ ಚೇತಿ ಪೂಜಾದ್ವಿವಿಧಾ |
ದಹಾರಾಕಾಶಾವಕಾಶೇ ಚಕ್ರಂ ವಿಭಾವ್ಯ ಕ್ರಿಯಮಾಣಾ ಚಾಭ್ಯಂತರಾ
ಸಮಯ ಇತ್ಯುಚ್ಯತೇ ಆಂತರ ಪೂಜಾರತಿಸ್ಸಮಯ ಇತಿವಚನಾತ್"||

ತಾ|| ಇಲ್ಲಿ ವೈದಿಕ ಮಾರ್ಗಾನುಸಾರವಾಗಿ ಪೂಜಾಭೇದವನ್ನು ತೋರಿ ಸುತ್ತಾರೆ. ಅಂತರಂಗ, ಬಾಹ್ಯವೆಂದು ಪೂಜೆ ಎರಡು ವಿಧಗಳು. ಹೃದಯ ಕಮಲದಲ್ಲಿ ಶ್ರೀ ಚಕ್ರವನ್ನು ಭಾವಿಸಿ ಮಾಡಿದ ಪೂಜೆಯು ಅಂತರಂಗವೆಂತಲೂ, ಅದೇ ಸಮಯಾಚಾರವೆಂತಲೂ, ಅಂತರಂಗ ಪೂಜಾಸಕ್ತೆಯೇ ಸಮಯವೆಂತ ವಚನಗಳಿಂದ ತಿಳಿಯಲ್ಪಡುತ್ತದೆ.

"ಬಾಹ್ಯಾಪಿದ್ವಿವಿಧಾ ವೈದಿಕೀ ತಾಂತ್ರಿಕೀಚೇತಿ | ತತ್ರವೇ ದೋಕ್ತ ಮಂತ್ರೈರ್ದೀಕ್ಷಿತೈರ್ವೈದಿಕ ವಿಧಾನೇನ ಸ್ನಾನ ಸಂಧ್ಯಾ ಜಪಕ್ಷೋಡ ಶಾದ್ಯ ಪಚಾರಾದಿಭಿಃ ಕ್ರಿಯಮಾಣಾ ಪೂಜಾವೈದಿಕೀ ಏತಸ್ಯಾ ಏವದಕ್ಷಿಣಾಚಾರ ಇತಿವ್ಯವಹಾರಃ"||

ತಾ|| ಬಾಹ್ಯ ಪೂಜೆಯಲ್ಲಿ ವೈದಿಕವೆಂತಲೂ ತಾಂತ್ರಿಕವೆಂತಲೂ ಎರಡು ವಿಧಗಳುಂಟು. ಅವುಗಳಲ್ಲಿ ವೈದಿಕ ಮಂತ್ರಗಳಿಂದ ದೀಕ್ಷೆಯನ್ನು ಹೊಂದಿ ದವರು ವೈದಿಕ ವಿಧಿಯಿಂದಲೇ ಸ್ನಾನ ಸಂಧ್ಯಾ, ಜಪ, ಪೂಜಾದಿಗಳನ್ನು ಮಾಡತಕ್ಕದ್ದು. ಇದೇ ದಕ್ಷಿಣಾಚಾರವೆಂತ ವ್ಯವಹರಿಸಲ್ಪಡುತ್ತಿದೆ.

"ತ್ರಂತೋಕ್ತವರ್ತ್ಮನಾ ದೀಕ್ಷಿತೈಸ್ತಾಂತ್ರಿಕ ವಿಧಿನಾ ಸ್ನಾನ ಸಂಧಾಜಪ ಪ್ರತ್ಯಕ್ಷ ಪಂಚಮಕಾರಾಧಿಭಿಃ ಕ್ರಿಯಮಾಣಾ ಪೂಜಾತಾಂತ್ರಿಕ ಇತ್ಯುಚ್ಯತೇ ಸೈವ ಕೌಳವಾಮಪದೈರ್ಪ್ಯ ವಹ್ರೀಯತೆ"||

ಸಾ|| ತಂತ್ರ ಮಾರ್ಗದಿಂದ ದೀಕ್ಷೆಯನ್ನು ಹೊಂದಿದವರು ತಂತ್ರಗಳಲ್ಲಿ ಹೇಳಿರತಕ್ಕ ವಿಧಿಪ್ರಕಾರವಾಗಿ ಸ್ನಾನ ಸಂಧ್ಯಾ ಜಪಗಳನ್ನು ಪ್ರತ್ಯಕ್ಷವಾಗಿ ಮಕಾರ ಪಂಚಕಗಳಿಂದ ಮಾಡಿದ ಪೂಜೆಯು ತಾಂತ್ರಿಕವೆಂತ ಹೇಳಲ್ಪಡು ತ್ತದೆ. ಇದೆ, ಕೌಳಾಚಾರವೆಂತಲೂ, ವಾಮಾಚಾರವೆಂತಲೂ, ವ್ಯವಹರಿಸಲ್ಪ ಡುತ್ತದೆ. ಮಕಾರ ಪಂಚಕವು ಮುಂದೆ ವಿವರಿಸಲ್ಪಡುತ್ತದೆ.

" ಏವಂ ಪೂಜಾದಿ ಭೇದಮಜ್ಞಾತ್ವಾ ವೈದಿಕ ಸ್ತಾಂತ್ರಿಕೀಂವಾ
ತಾಂತ್ರಿಕೋ ವೈದಿಕೀಂವಾ ಪೂಜಾಂ ಕರೋತಿ ಸಾಧೋಯಾತಿ"||

ತಾ|| ಈಪೂಜಾಭೇದಗಳನ್ನು ತಿಳಿದುಕೊಳ್ಳದೇ ವೈದಿಕ ಮಾರ್ಗದಿಂದ

ದೀಕ್ಷೆಯನ್ನು ಹೊಂದಿದನು ತಂತ್ರರೀತ್ಯಾ ಪ್ರವರ್ತಿಸಿದನೂ, ತಾಂತ್ರಿಕನು ವೈದಿಕ ಮಾರ್ಗದಲ್ಲಿ ಪ್ರವರ್ತಿಸಿದನೂ, ಉಭಯರೂ ಅಧೋಗತಿಯನ್ನು ಹೊಂದುವರು.

"ತಥಾಚೋಕ್ತಂ ದೇವೀಗೀತಾಯಾಂ॥ ಶ್ಲೋ॥ ದ್ವಿವಿಧಾಪುನು ಪೂಜಾ ಸ್ಯಾ ದ್ಬಾ ಹ್ಯಾ ಚಾ ಭ್ಯಂತರಾಪಿಚ। ಬಾಹ್ಯಾಪಿದ್ವಿವಿಧಾಪ್ರೋಕ್ತಾ ವೈದಿಕೀ ತಾಂತ್ರಿಕೀತಥಾ ವೈದಿಕೀ ವೈದಿಕೈಃಕುರ್ಯಾ ದ್ವೇವ ದಿಕ್ಷಾ ಸಮನ್ವಿತೈಃ॥ ತಂತ್ರೋಕ್ತದೀಕ್ಷಾವದ್ಭಿಸ್ತು ತಂತ್ರಿಕೀ ಸಂಶ್ರಿತಾ ಭವೇತ್।ಇತ್ಥಂಪೂಜಾರಹಸ್ಯಂ ಚನಜ್ಞಾತ್ವಾ ವಿಪರೀತಕಂ। ಕರೋತಿಯೋ ನರೋಮೂಢಃ ಸಪತತ್ಯೇವ ಸರ್ವಥಾ॥ಇತಿ॥

ತಾ॥ ಈ ವಚನಗಳ ತಾತ್ಪರ್ಯವು ಹಿಂದೆ ಹೇಳಲ್ಪಟ್ಟಿರುತ್ತದೆ.

"ತಂತ್ರೋಕ್ತ ದೀಕ್ಷಾವದ್ಭಿರಿತ್ಯುಕ್ತೇನ ತಾಂತ್ರಿಕ ದೀಕ್ಷಾಯಾ ಮಧಿ ಕಾರಿಣ ಶ್ಯೂದ್ರಾದಯ ಏವ ನತುಬ್ರಾಹ್ಮಣಾಃ॥

"ತಥಾಚೋಕ್ತಂ ಕೌರ್ಮ್ಯೇ, ದ್ವಾದಶಾಧ್ಯಾಯೇ"॥ ಶ್ಲೋ॥ ಶಾಪಾದ್ಗೌತಮಾದೀನಾಂ ಪಾಪಾದ್ವಾ ಮಹತೋನರಾಃ। ಯೇಗತಾ ವೇದಬಾಹ್ಯತ್ವಂ ಯೇಚ ಸಂಕೀರ್ಣ ಜಾತಯಃ। ತೇಧಿಕ್ರಿಯಂತೇ ತಂತ್ರಾದೌಸ್ತ್ರೀ ಶೂದ್ರಾಶ್ಚಯಥಾತಥೇತಿ"॥

ತಾ॥ ತಂತ್ರೋಕ್ತ ದೀಕ್ಷೆಯುಳ್ಳವರೆಂತ ಹೇಳಲ್ಪಡೋಣದ್ದರಿಂದ ತಾಂತ್ರಿಕ ದೀಕ್ಷೆಯಲ್ಲಿ ಅಧಿಕಾರ ಉಳ್ಳವರು ಶೂದ್ರಾದಿಗಳೆಂದು ಗ್ರಹಿಸಬೇಕು. ಬ್ರಾಹ್ಮಣರಿಗೆ ತಂತ್ರಗಳಲ್ಲಿ ಅಧಿಕಾರವೇ ಇಲ್ಲ. ಯಾವ ಬ್ರಾಹ್ಮಣರು ಗೌತಮಾದಿ ಋಷಿಗಳ ಶಾಪವನ್ನು ಹೊಂದಿದ್ದಾರೋ (ಹೊಂದಿದವರೋ) ಯಾರು ವರ್ಣ ಸಂಕರವನ್ನು ಹೊಂದಿದವರೋ, ಯಾರು ಮಹಾಪಾಪಗಳನ್ನು ಮಾಡಿ ಬಹಿಷ್ಕರಿಸಲ್ಪಟ್ಟಿರುತ್ತಾರೋ ಅವರು ತಂತ್ರ ಮಾರ್ಗದಲ್ಲಿ ಅಧಿಕಾರಿಗಳೆಂತಲೂ, ಸ್ತ್ರೀ ಶೂದ್ರರಿಗೆ ಹೇಗೆ ವೇದಾಧಿಕಾರವಿಲ್ಲವೋ, ಇವರಿಗೆ ಆ ಪ್ರಕಾರವೇ ವೇದಾಧಿಕಾರವಿಲ್ಲವೆಂದು, ಕೂರ್ಮ ಪುರಾಣದಲ್ಲಿ ಹನ್ನೆರಡನೇ ಅಧ್ಯಾಯದಲ್ಲಿ ಹೇಳಲ್ಪಟ್ಟಿರುತ್ತದೆ.

ಗ|| ಅತಶೂದ್ರಾದ್ಯಾಚರಣೀಯಮ ತಂತ್ರೋಕ್ತ ದೀಕ್ಷಾಕರ್ಮ ಬ್ರಾಹ್ಮಣೋವಾ ಬ್ರಾಹ್ಮಣಾಚರಣೀಯ ವೈದಿಕ ದೀಕ್ಷಾಕರ್ಮಶೂದ್ರೋವಾ ಆಚರೇದ್ಯದಿ ಸಪತತೀತ್ಯುಕ್ತಂ| ಕಿಂಚ ವಿಪರೀತಕರಣಂತು ದುರಾಚಾರತ್ವಾದ್ದುರಾಚಾರವಾನ್ಪುರುಷೋ ಲೋಕೇ ನಿಂದಿತೋ ದುಃಖಭಾಗೀಭವತಿ. ತಥಾಚೋಕ್ತಂ ಸ್ಮೃತ್ಯಂತರೇ-ಶ್ಲೋ.|| ದುರಾಚಾರೋಹಿಪುರುಷೋ ಲೋಕೇ ಭವತಿ ನಿಂದಿತಃ| ದುಃಖ ಭಾಗೀಚಸತತಂ ವ್ಯಾಧಿನಾ ವ್ಯಾಪ್ತ ಏವಚೇತಿ||

ತಾ|| ಶೂದ್ರಾರ್ಹವಾದ ತಂತ್ರ ಮಾರ್ಗದಲ್ಲಿ ಬ್ರಾಹ್ಮಣನು ಪ್ರವೇಶಿಸಿದರೂ, ಶೂದ್ರನು ವೇದ ಮಾರ್ಗದಲ್ಲಿ ಪ್ರವೇಶಿಸಿದರೂ, ವೈಪರೀತ್ಯವನ್ನು ಹೊಂದಿ, ಲೋಕನಿಂದಿತನೂ, ದುರಾಚಾರದಲ್ಲಿ ಪ್ರವರ್ತಿಸಿದವನೂ ಆಗುವನು. ಮತ್ತು ಅಂಥವರು ಲೋಕನಿಂದಿತರೂ, ಪದೇ ಪದೇ ದುಃಖವಂತರೂ, ರೋಗ ಪೀಡಿತರೂ, ಆಗುವರೆಂತ ಸ್ಮೃತಿಪ್ರಮಾಣವು.

ಗ|| ನನು ದುರಾಚಾರ ತ್ಯಾಗೇರ್ಥ ಕಾಮಾವಪಿತ್ಯಕ್ತೌಸ್ಯಾತಾಂ| ನಹಿಸದಾಚಾರ ಸಕ್ತಸ್ಯಾರ್ಥಕಾಮ ಸಂಪಾದನಂ ಸಂಭವತಿ| ತಥಾಚ ಪುರುಷಾರ್ಥ ಚತುಷ್ಟಯೆ ಧರ್ಮ ಮೋಕ್ಷರೂಪಾರ್ಥ ದ್ವಯಮೇವ ಸಂಪಾದಿತಂಸ್ಯಾತ್ತಥಾಚ ಪುರುಷಾರ್ಥ ಚತುಷ್ಟಯಾವಾಪ್ತಿ ಸ್ಸದಾಚಾರಿಣಾಂ ನಸಂಭವತೀತಿ ವಚನವಿರೋಧ ಸ್ಸ್ಯಾದಿತಿಚೇದ್ಧರ್ಮ ವರ್ಜಿತಾ ವರ್ಥಕಾಮೌ ಪರಿತ್ಯಜೇತ್ ಪ್ರಾಣಿಪೀಡಾಕರ ಲೋಕ ವಿದ್ವಿಷ್ಟಗವಾಲಂಭಾದಿಕಮಪಿತ್ಯಜೇತ್| ಕುತಸ್ಸನಿತ್ಯೋ ಧರ್ಮಃ ಯದಕರಣೇ ಪ್ರತ್ಯವಾಯಃ ಸ್ಯಾತ್| ಕಿಂತ್ವಭ್ಯುದಯಾರ್ಥಃ| ಸತ್ವಭ್ಯುದಯೋ ಬಹುಭಿರನ್ಯಸಾಧನೈ ಶ್ಶಾಸ್ತ್ರೇಷೂಕ್ತಮೇವೇತಿ ನತ್ವಭ್ಯುದಯಾರ್ಥಂ ಪ್ರಾಣಿ ದುಃಖಕರಂ ಲೋಕವಿದ್ವಿಷ್ಟ ಧರ್ಮಮಾಚರೇತ್|| ತಥಾಚ ಸ್ಮೃತಿಃ||

ಶ್ಲೋ|| ಪರಿತ್ಯಜೇದರ್ಥ ಕಾಮೌಯೌಸ್ಯಾತಾಂ ಧರ್ಮವರ್ಜಿತೌ |
ಧರ್ಮಮಪ್ಯಶು ಭೋದರ್ಕಂ ಲೋಕ ವಿದ್ವಿಷ್ಟಮೇವಚ ||
ಮಧುಪರ್ಕೆ ಗವಾಲಂಭೋ ಲೋಕ ವಿದ್ವಿಷ್ಟಮೇವಚ |
ಸಚನ್ನೈವ ಪ್ರಕರ್ತವ್ಯೋ ಯತಸ್ಸನಿಯತೋ ನಹಿ ||ಇತಿ||

ತಾ॥ ಇಲ್ಲಿ ಧರ್ಮ ನಿಶ್ಚಯಕ್ಕಾಗಿ ಪೂರ್ವ ಪಕ್ಷವನ್ನು ಹೇಳುತ್ತಾರೆ:—

ದುರಾಚಾರವನ್ನು ಬ್ರಾಹ್ಮಣರು ಬಿಟ್ಟದ್ದಾದರೆ ನಾಲ್ಕು ಪುರುಷಾರ್ಥಗಳಲ್ಲಿ, ಅರ್ಥ ಕಾಮಗಳನ್ನು ಬಿಡಬೇಕೆಂತಲೂ, ಸದಾಚಾರದಲ್ಲಿ ಅರ್ಥ ಕಾಮ, ಪ್ರಾಪ್ತಿ ಇಲ್ಲವೇ ಇರೋಣದ್ದರಿಂದ, ನಾಲ್ಕು ಪುರುಷಾರ್ಥಗಳಲ್ಲಿ ಧರ್ಮ, ಮೋಕ್ಷಗಳು ಮಾತ್ರವೇ ಸಂಪಾದಿಸಲ್ಪಡುತ್ತದೆ ಎಂತಲೂ ಹೇಳಿದ್ದಾದರೆ. ಸದಾಚಾರರಿಗೂ ಪುರುಷಾರ್ಥ ಚತುಷ್ಟಯವು ಸಂಭವಿಸುತ್ತದೆಂಬ ವಚನವು, ಪ್ರಮಾಣಗಳಿಂದ, ದುರಾಚಾರವು ಕೂಡದೆಂತಲೂ, ಧರ್ಮ ವರ್ಜಿತವಾದ ಅರ್ಥ, ಕಾಮಗಳನ್ನು, ತನ್ನ ಲಾಭಕ್ಕೋಸ್ಕರ ಪರಿತ್ಯಜಿಸಬೇಕು. ಲೋಕದಲ್ಲಿ ನಿಂದಿತವೂ, ಪ್ರಾಣಿ, ಹಿಂಸೆಯೂ ಆದ ಗವಾಲಂಭವು (ಗೋಹತ್ಯೆ) ಮೊದಲಾದುವುಗಳನ್ನು ಬಿಡಬೇಕು.

ಏನು ಆ ರೀತಿ ಮಾಡತಕ್ಕದ್ದು ಶಾಸ್ತ್ರ ಸಿದ್ಧವಲ್ಲವೇ ಮತ್ತು ವಿಧಿ ಪ್ರಕಾರವಾಗಿ ಮಾಡತಕ್ಕದ್ದು ಕ್ಷೇಮಕರವಲ್ಲವೇ, ಎಂತ (ಹೇಳಿದ್ದಾದರೆ) ಅಂವದ್ದಾದರೆ, ಕ್ಷೇಮವನ್ನು ಹೊಂದಲು ಲೋಕದಲ್ಲಿ ಅನೇಕ ಸಾಧನಗಳಿರೋಣದ್ದರಿಂದ, ಪ್ರಾಣಿ ಹಿಂಸಾಕರವೂ, ಲೋಕ ನಿಂದ್ಯವೂ ಆದ, ಗೋಹತ್ಯೆ ಮೊದಲಾದುವುಗಳನ್ನು ಬಿಡತಕ್ಕದ್ದು. ಇದಕ್ಕೆ ಸ್ಮೃತಿ ಪ್ರಮಾಣವಾಗಿರುತ್ತದೆ.

ಅಧರ್ಮದಿಂದ ಕೂಡಿದ ಅರ್ಥ, ಕಾಮಗಳನ್ನು ಬಿಡಬೇಕು. ಹಿಂಸಾಕರವೂ, ಲೋಕ ನಿಂದ್ಯವೂ ಆದ ಧರ್ಮವನ್ನು ಬಿಡಬೇಕು. ಮಧುಪರ್ಕವೆನ್ನುವ ಉಪಚಾರದಲ್ಲಿ ಹಿಂಸಾಕರವೂ, ಲೋಕ ನಿಂದ್ಯವೂ ಆದ, ಗೋಹತ್ಯೆಯನ್ನು ಬಿಡತಕ್ಕದ್ದು. ಆ ರೀತಿ ಮಾಡದೇ ಇರಲು ಸಾಧ್ಯವೇ ಇಲ್ಲವೆನ್ನುವ ಸಂದರ್ಭದಲ್ಲಿ, ಆ ಕಾರ್ಯವನ್ನು ಮಾಡದೇ ಬಿಟ್ಟುಬಿಡಬೇಕು.

ಗ॥ ನನು ಧರ್ಮಸ್ಯಾ ವಶ್ಯಕರ್ತವ್ಯತಾಯಾಂ ಪ್ರತಿಪಾದಿತಾಯಾಂ ಶಾಸ್ತ್ರಕಾರೈರ್ಧರ್ಮಸ್ಯಾ ನೇಕಥಾ ಪ್ರತಿಪಾದಿತತ್ವಾತ್ತನ್ನಿಶ್ಚಯಸ್ಯಾ ಸಂಭವೇನ। ಕಥಂ ತನ್ನಿಶ್ಚಯಂ ವಿನಾಧರ್ಮಃ ಕರ್ತವ್ಯ ಇತಿ ಚೇತ್ಪರ ಮೇಶ್ವರೇಣ ಶ್ರುತಿ ಸ್ಮೃತಿ ರೂಪಚಕ್ಷುರ್ಭ್ಯಾಂ ದೃಷ್ಟೋ ಧರ್ಮಸ್ಸತ್ಯಃ ॥ ಚಕ್ಷುರ್ವೈಸತ್ಯ ಮಿತಿ ಶ್ರುತೇಃ ॥ ಚಕ್ಷುಷಾದೃಷ್ಟಮೇವ ಮನಸಿ ನಿಶ್ಚಿನೋ ತೀತಿ ಪುರಾಣ ರೂಪ ಹೃದಯೇ ನಿಶ್ಚಿತೋ ಧರ್ಮೋಪಿ ಸತ್ಯಃ ॥

ತಾ|| ಮುಖ್ಯವಾಗಿ ಮಾಡಬೇಕಾದ ಧರ್ಮ ನಿರ್ಣಯಕ್ಕೆ ಶಾಸ್ತ್ರಕಾರರು ಬಹು ವಿಧವಾಗಿ ಹೇಳಿದ್ದರಿಂದ, ಆ ಧರ್ಮ ನಿಶ್ಚಯವು ತಿಳಿಯದೇ ಹೇಗೆ ಆ ಧರ್ಮವನ್ನು ಆಚರಿಸಬೇಕೆಂತ ಕೇಳಿದಲ್ಲಿ, ಶ್ರುತಿ ಸ್ಮೃತಿಗಳು, ಎರಡು ನೇತ್ರ ಗಳು, ಪುರಾಣಗಳು ಹೃದಯವು, ನೇತ್ರಗಳಿಂದ ನೋಡಿದ್ದನ್ನು ಮನಸ್ಸಿನಲ್ಲಿ ನಿಶ್ಚಯಿಸಲ್ಪಡುತ್ತದೆ. ಶ್ರುತಿ ಸ್ಮೃತಿಗಳು ನೇತ್ರಗಳೆಂತ ಶ್ರುತಿ ಪ್ರಮಾಣವು, ಅದರಲ್ಲಿ ಹೇಳಿದ್ದೇ ಪುರಾಣಗಳಲ್ಲಿ ನಿಶ್ಚಯಿಸಿರುವುದು ಸತ್ಯವೆಂದು ಇದಕ್ಕೆ ಪ್ರಮಾಣವು.

ಶ್ಲೋ|| ಸ್ಮೃತಿರಪಿ || ಶ್ರುತಿ ಸ್ಮೃತೀ ಉಭೇ ನೇತ್ರೇ ಪುರಾಣಂ ಹೃದಯಂ ಸ್ಮೃತಂ | ಏತತ್ರಯೋಕ್ತ ಏವಸ್ಯಾದ್ಧರ್ಮೋ ನಾನ್ಯತ್ರ ಕುತ್ರಚಿದಿತಿ | ನನುತ್ರಯಾಣಾಮಪಿ ಕುತ್ರ ಚಿತ್ತಪ್ತ ಮುದ್ರಾದಿ ವಿಧೌ ವಿರೋಧೋ ದೃಶ್ಯತೇ | ತತ್ರಕಿಂ ವರಮಿತಿ ಚೇತ್ಪುರಾಣಾ ಪೇಕ್ಷಯಾ ಶ್ರುತಿ ಸ್ಮೃತೀ ವರಿಷ್ಟೌ | ಪುರಾಣ ಸ್ಮೃತ್ಯೋಃ ಪರಸ್ಪರ ವಿರೋಧೇ ಸ್ಮೃತಿಃ ಪ್ರಬಲಾ ಪುರಾಣಾ ಪೇಕ್ಷಯಾ ಸ್ಮೃತೇರ್ವೇದ ಮೂಲಕತ್ವಾತ್ | ಷೋಡಶೀ ಗ್ರಹಣಾ ಗ್ರಹಣಾದಿಷು | ಸ್ಮೃತಿ ಶ್ರುತ್ಯೋಃ ಪರಸ್ಪರ ವಿರೋಧೇ ತತ್ರ ಧರ್ಮದ್ವಯಮಪಿ ಸತ್ಯಂ || ಸ್ಮೃತ್ಯೋರ್ವಿರೋಧೇ ಭಿನ್ನ ವಿಷಯ ಕಲ್ಪನಯಾ ವಿರೋಧಃ ಪರಿಹರಣೀಯಃ ||ಶ್ಲೋ|| ತಥಾಚಸ್ಮೃತಯಃ|| ವಿರೋಧೋಯತ್ರ ಚ ಭವೇತ್ರಯಾಣಾಂ ಚ ಪರಸ್ಪರಂ | ಶ್ರುತಿಸ್ತತ್ರ ಪ್ರಮಾಣಂ ಸ್ಯಾದ್ದ್ವಯೋ ರ್ದ್ವೈಧೇ ಸ್ಮೃತಿರ್ವರಾ | ಶ್ರುತೇರ್ದ್ವೈಧಂ ಭವೇದ್ಯತ್ರ ತತ್ರ ಧರ್ಮಾ ಉಭಾವಪಿ | ಸ್ಮೃತಿ ದ್ವೈಧಂತು ಯತ್ರ ಸ್ಯಾದ್ವಿಷಯಃ ಕಲ್ಪ್ಯತಾಂ ಪೃಥಗಿತಿ ||

ತಾ|| ಶ್ರುತಿ ಸ್ಮೃತಿ ಪುರಾಣಗಳಲ್ಲಿ ಹೇಳತಕ್ಕದ್ದೇ ಧರ್ಮವೆಂತ ಹೇಳಿದ ರಲ್ಲವೇ (ಹೇಳಿದ್ದಾರಲ್ಲವೇ), ಒಂದಾನೊಂದು ಕಾಲದಲ್ಲಿ (ಒಂದು ಸಮಯ ದಲ್ಲಿ) ತಪ್ತ ಮುದ್ರಾದಿ ಸ್ಥಳಗಳಲ್ಲಿ ಮೂರು ವಿಚಾರಗಳಿಗೂ (ಮೂರಕ್ಕೂ) ವಿರೋಧವು ಕಾಣಿಸುತ್ತಲ್ಲವೇ ? ಆ ಸ್ಥಳದಲ್ಲಿ ಯಾವುದು ಶ್ರೇಷ್ಠವೆಂತ ಕೇಳಿ ದರೆ, ಪುರಾಣಾಪೇಕ್ಷಯಾ, ಶ್ರುತಿ ಸ್ಮೃತಿಗಳೂ ಶ್ರೇಷ್ಠವಾದುವುಗಳು, ಪುರಾಣ ಸ್ಮೃತಿಗಳಲ್ಲಿ ಸ್ಮೃತಿ ಪ್ರಧಾನವು, (ಸ್ಮೃತಿ ವೇದ ಮೂಲ ಉಳ್ಳದ್ದಾದ್ದರಿಂದ)

ಶ್ರುತಿ ಸ್ಮೃತಿಗಳಲ್ಲಿ ಷೋಡಶೀ ಗ್ರಹಣಾ ಗ್ರಹಣಗಳನ್ನು ಕುರಿತು, ಶ್ರುತಿ ಸ್ಮೃತಿಗಳಿಗೆ ಪರಸ್ಪರ ವಿರೋಧ ಉಂಟಾದಾಗ್ಯೂ, ಎರಡೂ ಧರ್ಮಗಳಾಗಿಯೇ ಇರುತ್ತವೆ. ಸ್ಮೃತಿಗಳಲ್ಲಿಯೇ ವಿರೋಧ ಉಂಟಾದಾಗ ಬೇರೆ ಬೇರೆ ವಿಷಯ ಗಳನ್ನು ಗ್ರಹಿಸತಕ್ಕದ್ದು. ಮೇಲೆ ಹೇಳಲ್ಪಟ್ಟ ಅಂಶಗಳಿಗೆ ಸ್ಮೃತಿ ಪ್ರಮಾಣ ಗಳು ಇರುತ್ತವೆ.

ಗ॥ ನನು ಯಥಾ ಸ್ಮೃತೀನಾಂ ವೇದ ಮೂಲಕತ್ವಾತ್ಪ್ರಮಾಣ್ಯಂ ತಥಾ ಪುರಾಣಾ ನಾ ಮಪಿ ವೇದ ಮೂಲಕತ್ವಾ ದೇವ ಪ್ರಾಮಾಣ್ಯಂ ಸ್ಮೃತಿ ಸಮಾನಮೇವ ಕಿಂ ನಸ್ಯಾದಿತಿಚೇನ್ನ । ನ ಕೇವಲಂ ಪುರಾಣಾ ನಿ ವೇದ ಮೂಲಕಾನಿ ಕಿಂತು ತಂತ್ರ ಮೂಲಕಾನ್ಯಪಿ ಸಂತಿ । ತಥಾ ಚ ಪುರಾಣಾಪೇಕ್ಷ ಯಾ ಕೇವಲ ವೇದ ಮೂಲಕತ್ವಂ ಸ್ಮೃತಿ ನಾಮು ವ್ಯಾಹತ ಮೇವ ॥ ತದು ಕ್ತಂ ಸ್ಕಾಂದೇ ಸೂತ ಸಂಹಿತಾಯಾಂ ಚ ॥ಶ್ಲೋ॥ ಕ್ವ ಚಿತ್ಕದಾ ಚಿತ್ತಂತ್ರಾರ್ಥ ಕಟಾಕ್ಷೇಣ ಮುನೀಶ್ವರಾಃ । ಸನ್ತಿತಾನಿ ಪುರಾಣಾನಿ ಸೋಂಶೋ ಗ್ರಾಹ್ಯೋ ನವೈದಿ ಕೈರಿತಿ ॥

ತಾ॥ ಆ ಪಕ್ಷದಲ್ಲಿ ಯಾವ ರೀತಿ ಸ್ಮೃತಿಗಳು ವೇದ ಮೂಲವಾಗಿ ಪ್ರಮಾಣಗಳಾಗಿರುತ್ತವೆಯೋ. ಆ ರೀತಿಯೇ ಪುರಾಣಗಳೂ ಸಹಾ ವೇದ ಮೂಲವೇ ಆಗಿರೋಣದ್ದರಿಂದ ಯಾತಕ್ಕಾಗಿ ಪ್ರಮಾಣವಾಗುವುದಿಲ್ಲವೆಂದರೆ, ಪ್ರಮಾಣವಾಗುವುದಿಲ್ಲ. ಕಾರಣ:-ಪುರಾಣಗಳು ಕೇವಲ ವೇದ ಮೂಲಕವೇ ಅಲ್ಲದೇ, ತಂತ್ರ ಮೂಲವು ಕೂಡಾ ಹೌದು. ಆದ್ದರಿಂದ ಪುರಾಣಾಪೇಕ್ಷೆಯಾ, ಸ್ಮೃತಿಗೆ ವೇದ ಮೂಲಕತ್ವವು ನಿರ್ಬಾಧಕವಾಗಿರುತ್ತದೆ. ಇದಕ್ಕೆ ಸ್ಕಾಂದ ಪುರಾಣದಲ್ಲಿ ಸೂತ ಸಂಹಿತಾ ಪ್ರಮಾಣವು, ಅಲ್ಲಲ್ಲಿ ಸ್ವಲ್ಪ, ಮಹರ್ಷಿಗಳು, ತಂತ್ರಾರ್ಥಗಳಲ್ಲಿ ಅನುಗ್ರಹ ಬುದ್ಧಿಯಿಂದ ಪುರಾಣಗಳಲ್ಲಿ ರಚಿದರು. ಆ ಪುರಾಣಾಂಶಗಳನ್ನು ವೈದಿಕರು ಗ್ರಹಿಸತಕ್ಕವುಗಳಲ್ಲವೆಂತ ಭಾವವು,

ಗ॥ ನನು ತಂತ್ರಾಣಾಮಪಿ ಸಾಕ್ಷಾದೀಶ್ವರ ಪ್ರಣೀತತ್ವಾತ್ಪ್ರಾಮಾಣ್ಯಂ ॥ ಕಿಂತು ವೇದ ಮೂಲಕತ್ವಾ ದೇವ ॥ ತಥಾ ಚ ಬ್ರಾಹ್ಮಣಸ್ಯ ಪಂಚಮು ಕಾರ ತಪ್ತ ಮುದ್ರಾಧಾರಣಾದಿ ಪ್ರತಿಪಾದಿತ ತಂತ್ರಸ್ಯ ವೇದ ವಿರುದ್ಧ ತ್ವಾನ್ನಕೃತ್ಸ್ನತಃ ಪ್ರಾಮಾಣ್ಯಂ ವೇದಾ ವಿರುದ್ಧ್ಯಂಶ ಏವ ಪ್ರಾಮಾ

ಣ್ಯಂ ಯಚ್ಛ್ರುತಿ ವಿರುದ್ಧಂ ತಥಾ ಚ ಯಸ್ಯ ಯತ್ರಾಧಿಕಾರಸ್ತತ್ರೈನ ವಿಷಯಿ ಕ ತಪ್ತ ಮುದ್ರಾಧಾರಣಾದಿ ಪ್ರತಿಪಾದಿಕ ತಂತ್ರಾಣಾಂ। ಗೌತಮ ದಧೀಚ್ಯಾದಿ ಶಾಪದಗ್ಧ ಬ್ರಾಹ್ಮಣ ವಿಷಯಕತ್ವಂ। ಅನೇನ ಚಾಧಿಕಾರಿ ಭೇದೇನ ಸರ್ವೇ ಷಾಂತಂತ್ರಾಣಾಂ ಪ್ರಾಮಾಣ್ಯಂ ಸಮರ್ಥಿತಮ್। ತಸ್ಮಾದ್ವೈದಿಕೋ ವೇದೋಕ್ತ ಮೇವ ಧರ್ಮಂ ಕುರ್ಯಾದನ್ಯಥಾ ಭ್ರಷ್ಟೋ ಭವತಿ। ಏತತ್ಸರ್ವಮಭಿ ಪ್ರೇತ್ಯೋಕ್ತಂ ಶಿವೇನ ಮಹಾಕಾಳ ಸಂಹಿತಾದಿಷು ॥

ಶ್ಲೋ॥ ವೇದಾವಿರೋಧಿ ಚೇತ್ತಂತ್ರಂತತ್ಪ್ರಮಾಣಂ ನ ಸಂಶಯಃ।
ಪ್ರತ್ಯಕ್ಷ ಶೃತಿರುದ್ಧಂಯತ್ಪ್ರಮಾಣಂ ನ ಭವೇನ್ನ ಚ ॥
ಸರ್ವಥಾ ವೇದಯೋ ವಾ ಸೌ ಧರ್ಮ ಮಾರ್ಗ ಪ್ರಮಾಣಕಃ।
ತೇನಾವಿರುದ್ಧಂ ಯತ್ಕಿಂಚಿ ತತ್ಪ್ರಮಾಣಂ ನಚಾನ್ಯಥಾ ॥
ವೇದಾ ವಿರೋಧಿಯೋಂಶಸ್ತು ಸೈವಗ್ರಾಹ್ಯೋ ದ್ವಿಜೋತ್ತಮೈಃ ॥

ತಾ॥ ಹಾಗಾದರೆ ಬ್ರಾಹ್ಮಣರಿಗೆ ಮಕಾರ ಪಂಚಕವು ತಪ್ತ ಮುದ್ರಾಧಾರಣಾದಿಗಳು ಪ್ರತಿಪಾದಿಸತಕ್ಕ ತಂತ್ರಗಳಿಗೆ ವೇದವಿರುದ್ಧವಾದ್ದರಿಂದ ಸಮಷ್ಟಿಯಾಗಿಪ್ರಮಾಣವಾಗಲಾರದು. ತಂತ್ರಗಳಲ್ಲಿ ವೇದ ಸಮ್ಮತವಾದ ಅಂಶಗಳನ್ನೇ ಗ್ರಹಿಸತಕ್ಕದ್ದು. ಯಾವುದು ವೇದ ವಿರುದ್ಧವೋ ಅದು ವೈದಿಕನಿಗೆ ಪ್ರಮಾಣವಾಗುವುದಿಲ್ಲ. ಅದರಿಂದ ತಂತ್ರಾರ್ಥಗಳನ್ನು ಪ್ರತಿಪಾದಿಸತಕ್ಕ ಪುರಾಣಗಳು ಪ್ರತ್ಯಕ್ಷವಾಗಿ ಶೃತಿ ವಿರೋಧಗಳಾದ್ದರಿಂದ ಪ್ರಮಾಣಗಳಾಗುವುದಿಲ್ಲ, ತಂತ್ರಗಳು ಅನೇಕಾಧಿಕಾರಿಗಳನ್ನು ಉದ್ದೇಶಿಸಿ ನಿರ್ಮಾಣವಾಗಿರೋಣದ್ದರಿಂದ ವೈದಿಕರಿಂದ ಗ್ರಹಿಸಲ್ಪಡಲು ಅನರ್ಹವು.

ಯಾರು ಯಾವುದಕ್ಕೆ ಅಧಿಕಾರಿಗಳೋ ಅವರು ಅದನ್ನು ಅವಲಂಬಿಸಬೇಕು, ಬ್ರಾಹ್ಮಣರನ್ನು ಕುರಿತು ತಪ್ತ ಮುದ್ರಾಧಾರಣಾದಿಕಗಳನ್ನು ಪ್ರತಿಪಾದಿಸತಕ್ಕ ತಂತ್ರಗಳು. ಗೌತಮ, ದಧೀಚಿ ಮೊದಲಾದ ಋಷಿಗಳ ಶಾಪದಗ್ಧರಾದ ಬ್ರಾಹ್ಮಣರಿಗಾಗಿ ಗ್ರಹಿಸತಕ್ಕದ್ದು. ಈ ರೀತಿ ತಂತ್ರಗಳಿಗೆ ಅಧಿಕಾರಿಗಳನ್ನು ನಿರ್ಮಿಸಲ್ಪಟ್ಟಿರುತ್ತದೆ. ಆದ್ದರಿಂದ ವೈದಿಕ ಬ್ರಾಹ್ಮಣರು ವೈದಿಕ ಧರ್ಮವನ್ನೇ ಆಚರಿಸಬೇಕು. ಇವಕ್ಕೆ ವ್ಯತಿರಿಕ್ತವಾಗಿ ನಡೆದಿದ್ದಾದರೆ ಭ್ರಷ್ಟರಾಗುತ್ತಾರೆ.

ಇವೆಲ್ಲವನ್ನೂ ತಿಳಿದು "ಮಹಾಕಾಳ" ಸಂಹಿತಾದಿಗಳಲ್ಲಿ ಈಶ್ವರನಿಂದ ಈ ಪ್ರಕಾರ ಹೇಳಲ್ಪಟ್ಟಿರುತ್ತದೆ.

ವೇದಗಳಿಗೆ ವಿರೋಧವಾಗಿಲ್ಲದ ತಂತ್ರಗಳನ್ನು ಪ್ರಮಾಣವಾಗಿ ಗ್ರಹಿಸಬೇಕು. ಪ್ರತ್ಯಕ್ಷವಾಗಿ, ವೇದವಿರುದ್ಧವಾದ ತಂತ್ರಗಳನ್ನು ಪ್ರಮಾಣವಾಗಿ ಗ್ರಹಿಸಕೂಡದು, ತಂತ್ರಗಳಲ್ಲಿ ಯಾವ ಯಾವ ಅಂಶಗಳು ವೇದವಿರುದ್ಧವೋ ಅವುಗಳನ್ನು ಬಿಟ್ಟು ವೇದ ಸಮ್ಮತವಾದುದನ್ನು ಬ್ರಾಹ್ಮಣನು ಗ್ರಹಿಸಬೇಕು. ಈ ತಂತ್ರಗಳಲ್ಲಿ ಅನೇಕಾಧಿಕಾರಿಗಳು ಇರೋಣವದ್ದರಿಂದ ಅನೇಕ ವಿಷಯಗಳು ಅವರವರಿಗೋಸ್ಕರ ಹೇಳಲ್ಪಟ್ಟಿರುತ್ತವೆ.

ಮೂ॥ ಸೂತ ಸಂಹಿತಾಯಾಂ ತಂತ್ರಂ ಪ್ರಕೃತ್ಯ ॥

ಶ್ಲೋ॥ ಯೋವೇದ ಧರ್ಮಮುಜ್ಝಿತ್ಯ ವರ್ತತೇನ್ಯ ಪ್ರಮಾಣತಃ ।
ಕುಂಡಾನಿತಸ್ಯ ಶಿಕ್ಷಾರ್ಥಂ ಯಮಲೋಕೇವಸಂತಿಹಿ ॥
ತಸ್ಮಾತ್ಸರ್ವ ಪ್ರಯತ್ನೇನ ವೇದೋಕ್ತಂ ಧರ್ಮಮಾಶ್ರಯೇತ್ ।
ಸ್ಮೃತಿಃ ಪುರಾಣ ಮನ್ಯದ್ವಾತಂತ್ರಂ ವಾ ಶಾಸ್ತ್ರಮೇವ ಚ ॥
ತನ್ಮೂಲತ್ವೇ ಪ್ರಮಾಣಂ ಸ್ಯಾನ್ನಾನ್ಯಥಾತು ಕದಾಚನ ।
ದಧೀಚಿ ಗೌತಮಾದೀ ನಾಂ ಶಾಪದಗ್ಧಾ ದ್ವಿಜಾಶ್ರಯೇ ॥
ಕಾಮಾಚಾರಾಃ ಪಾಶುಪತಾಸ್ತಥಾ ವೈಲಿಂಗಧಾರಿಣಃ ॥
ತಪ್ತ ಮುದ್ರಾಂಕಿತಾ ಯೇ ಚ ವೈಖಾನ ಸಮತಾನುಗಾಃ ॥
ತೇ ಸರ್ವೇ ನಿರಯಂ ಯಾಂತಿ ವೇದ ಮಾರ್ಗ ಬಹಿಷ್ಕೃತಾಃ ।
ವೇದೋಕ್ತ ಮೇವ ಸದ್ಧರ್ಮಂ ತಸ್ಮಾತ್ಕುರ್ಯಾನ್ನರಸ್ಸದಾ ॥ಇತಿ॥

ತಾ॥ ಸೂತ ಸಂಹಿತೆಯ ವಚನಗಳ ತಾತ್ಪರ್ಯವು :-ಯಾರು ವೇದ ಮಾರ್ಗವನ್ನು ಬಿಟ್ಟು ತಂತ್ರ ಮಾರ್ಗವನ್ನು ಅನುಸರಿಸುವರೋ ಅವರಿಗೆ ಯಮ ಲೋಕದಲ್ಲಿ ಶಿಕ್ಷೆಗಾಗಿ ಕುಂಡಗಳು ಸಿದ್ಧವಾಗಿರುತ್ತವೆ. ಆದ್ದರಿಂದ ಸರ್ವ ವಿಧದಲ್ಲಿಯೂ ವೇದ ಮಾರ್ಗದಿಂದಲೇ ನಡೆಯಬೇಕು. ಸ್ಮೃತಿ, ಪುರಾಣಗಳು, ತಂತ್ರಗಳು ಎಲ್ಲವೂ ವೇದ ಸಮ್ಮತವಾದವುಗಳು, ಮತ್ತು ಪ್ರಮಾಣಗಳಾಗಿರುತ್ತವೆ. ವೇದ ವಿರುದ್ಧವಾದುವುಗಳನ್ನು ಬಿಡಬೇಕು. ದಧೀಚಿ, ಗೌತಮರು ಮೊದಲಾದ ಋಷಿಗಳು ಕೆಲವು ಬ್ರಾಹ್ಮಣರನ್ನು ಶಪಿಸಿದ್ದಾರೆ. ಆ ಶಾಪದಗ್ಧ

ಬ್ರಾಹ್ಮಣರು ಕಾಮಾಚಾರಪರರು, ಪಾಶುಪತ ದೀಕ್ಷಾಪರರು, ತಪ್ತ ಮುದ್ರಾ ಧಾರರು, ಲಿಂಗ ಧಾರಿಗಳೂ, ವೈಖಾನಸರು, ಮೊದಲಾದ ಈ ಮತಗಳನ್ನು ಅವಲಂಬಿಸಿ, ವೇದ ವಿರುಧ್ಧಾಚರಣೆಯುಳ್ಳವರಾಗಿರುವರು. ಇವರೆಲ್ಲರೂ ನರಕವನ್ನು ಹೊಂದತಕ್ಕದ್ದು ವೇದ ವಿಹಿತವೇ. ಶ್ರೇಷ್ಠವಾದ ಧರ್ಮವನ್ನು ಸರ್ವದಾ ಆಚರಿಸಬೇಕು.

ಮೂ॥ ನನು ಬ್ರಾಹ್ಮಣ ವಿಷಯಿಕ ತಪ್ತ ಮುದ್ರಣಾದಿ ಪ್ರತಿಪಾದಿಕ ತಂತ್ರಾಣಾಂ ಗೌತಮ ಶಾಪದಗ್ಧ ಬ್ರಾಹ್ಮಣ ವಿಷಯಕತ್ವಮೇವ ನಾನ್ಯೇಷಾಮಿತಿ ಕಥಂ ಸಂಗಚ್ಛತ ಇತಿ ಚೇದ್ಬೃಹನ್ನಾರದೀಯ ಸ್ಕಾಂದ ದೇವೀ ಭಾಗವತಾದಿಷು ಸಾಕಥಾಪ್ರಸಿದ್ಧಾರ್ಥ । ತಥಾಪಿ ಶ್ರೋತೃ ಪರಿಜ್ಞಾನಾರ್ಥಂ ದಿಜ್ಮಾತ್ರಮುಚ್ಯತೇ ॥

ತಾ॥ ಅಯ್ಯಾ, ಬ್ರಾಹ್ಮಣರನ್ನು ಕುರಿತು ತಪ್ತ ಮುದ್ರಾಧಾರಣಾದಿಗಳನ್ನು ಪ್ರತಿಪಾದಿಸತಕ್ಕ ತಂತ್ರಗಳು. ಗೌತಮ ಶಾಪ ದಗ್ಧ ಬ್ರಾಹ್ಮಣರನ್ನುದ್ದೇಶಿಸಿ ಹೇಳಿದ್ದೇ ಹೊರ್ತು ಇತರರನ್ನುದ್ದೇಶಿಸಿ ಹೇಳಿದ್ದಲ್ಲವೆಂತ ಹೇಳಲು ಪ್ರಮಾಣವೇನೆಂದರೆ ;- ಬೃಹನ್ನಾರದೀಯ, ಸ್ಕಾಂದವು, ದೇವೀ ಭಾಗವತ ಮೊದಲಾದ ಗ್ರಂಥಗಳಲ್ಲಿ ಆ ಕಥೆಗಳು ಪ್ರಸಿದ್ಧವಾಗಿರುತ್ತದೆ. ಆದಾಗ್ಯೂ ಇಲ್ಲಿ ಸತ್ಪುರಷರು ತಿಳಿಯಲು ಸ್ವಲ್ಪವಾಗಿ ಹೇಳಲ್ಪಡುತ್ತದೆ.

ಮೂ॥ ಪುರಾ ಕಿಲ ಪಂಚದಶ ವರ್ಷ ಪರ್ಯಂತಂ ದುರ್ಭಿಕ್ಷೇ ಜಾತೇ ಬ್ರಾಹ್ಮಣಾದಯೋನ್ನಮಲಭಮಾನಾದುರ್ಭಿಕ್ಷಂ ಗೌತಮಾಶ್ರಮಂ ಕೃತ್ವಾಗತವಂತಃ । ತಾನ್ ಗೌತಮೋನ್ನಾದಿಭಿರ್ದುರ್ಭಿಕ್ಷ ನಿವೃತ್ತಿ ಪರ್ಯಂತಂ ಪ್ರಪೋಷ ॥ ತತೋಕೇಚಿದ್ಬ್ರಾಹ್ಮಣಾ ಗೌತಮ ಕೀರ್ತಿ ಮಸಹ ಮಾನಾತಸ್ಯ ಕಮಪಿ ಕಲಂಕಂ ದತ್ವಾ ಸ್ವದೇಶಾನ್ಗಂತು ಕಾಮಾಮಾಯ ಯಾತ್ರೈರ್ಜರತೀ ಗೌರ್ನಿರ್ಮಿತಾ ಸಾಚ ಗೌತಮಸ್ಯ ಹೋಮಶಾಲಾಂಗತಾ । ಮುನೇರ್ಹುಂಕಾರಶಬ್ದೈರ್ನಿವಾರಿತಾ ಮೃತಾ ಚ ॥ ತತೋ ಬ್ರಾಹ್ಮಣಾ ಅನೇನಗೌರ್ಹತೇತಿ ಪ್ರಜಲ್ಪುಃ । ಹೋಮ ಸಮಾಪ್ತ್ಯನಂತರಂ ಗೌತಮೋ ವಿಸ್ಮಿತೋ ಭೂತ್ವಾ ಗೋಹತ್ಯ ಕಾರಣಂ ಜಿಜ್ಞಾಸುರ್ಧ್ಯಾತ್ವಾ ದೃಷ್ಟ್ವಾ ಬ್ರಾಹ್ಮಣೈಸ್ತತ್ಕರ್ಮ ಕೃತಮಿತಿ ಜ್ಞಾತ್ವಾತಾನ್ಶಶಾಪ ॥

ತಾ|| ಪೂರ್ವ ಕಾಲದಲ್ಲಿ ಒಂದು ಸಮಯದಲ್ಲಿ ೧೫ ಹದಿನೈದು ವರ್ಷಗಳು ದುರ್ಭಿಕ್ಷವು ಬಂದು ಬ್ರಾಹ್ಮಣಾದಿ ಪ್ರಜೆಗಳು ಅನ್ನವಿಲ್ಲದವರಾಗಿ, ಗೌತಮಾ ಶ್ರಮವು ಸುಭಿಕ್ಷವಾಗಿದೆಂಬುದು ತಿಳಿದು ಆ ಬ್ರಾಹ್ಮಣರು ಅಲ್ಲಿಗೆ ಹೋದರು. ಗೌತಮರು ಅವರನ್ನು ಸುಭಿಕ್ಷ ಪರ್ಯಂತವೂ ಅನ್ನಾಹಾರಗಳಿಂದ ಪೋಷಿಸಿದರು. ಅವರಲ್ಲಿ ಕೆಲವು ಜನ ಬ್ರಾಹ್ಮಣರು ಗೌತಮರ ಕೀರ್ತಿಯನ್ನು ಸಹಿಸಲಾರದೇ, ಆತನಿಗೆ ಇಲ್ಲದ ದೋಷವನ್ನು ಆರೋಪಿಸಿ, ತಮ್ಮ ದೇಶಗಳಿಗೆ ಹೊರಡಲು ಪ್ರಯತ್ನರಾಗಿ, ಮಾಯೆಯಿಂದ, ಮುದಿ ಗೋವನ್ನು ಕಲ್ಪಿಸಿದರು. ಆ ಗೋವು ಗೌತಮರ ತಪೋವನದಲ್ಲಿರುವ ಹೋಮ ಶಾಲೆಗೆ ಹೋಗಲು ಆತನ ಹೂಂ ಕಾರ ಶಬ್ದವನ್ನು ಕೇಳಿ ಮೃತಿಯನ್ನು ಹೊಂದಿತು. ಅದನ್ನು ನೋಡಿ ಬ್ರಾಹ್ಮ ಣರು, ಗೌತಮರು, ಗೋಹತ್ಯೆಯನ್ನು ಮಾಡಿದರೆಂತ, ಕೇ, ಕೇ ಹಾಕುತ್ತಾ ನಿಂದಿಸತೊಡಗಿದರು ಹೋಮ ಸಮಾಪ್ತಿ ಆದ ನಂತರ ಗೌತಮರು ದಿವ್ಯ ಜ್ಞಾನದಿಂದ, ಗೋಹತ್ಯಕಾರಣವನ್ನು ತಿಳಿದುಕೊಂಡು, ಬ್ರಾಹ್ಮಣರಿಂದ ಈ ಕೆಲಸವು ಕೃತ್ರಿಮದಿಂದ ಉಂಟಾದ್ದೆಂತ ತಿಳಿದು ಆಗ್ರಹ ಉಳ್ಳವರಾಗಿ ಈ ರೀತಿ ಶಾಪವನ್ನು ಕೊಟ್ಟರು.

"ಕಥಮಿತಿಚೇತಿ ||ಶ್ಲೋ|| ಭವಿಷ್ಯಥ ತ್ರಯಿ ಬಾಹ್ಯಾ ಮಹಾ ಪಾತಕಿ ನಸ್ತಥಾಃ | ಶ್ರೌತಸ್ಮಾರ್ತ ಸದಾಚಾರೇಜ್ಞಾನ ಮಾರ್ಗೇ ತಥೈವ ಚ || ಭವತಾ ನುನ್ಮುಖಾಯೂಯಂ ಸರ್ವಥಾ ಬ್ರಾಹ್ಮಣಾಧಮಾಃ|| ಅನುನ್ಮುಖಾಸ್ತ್ಯಾಗಿನೋ ಭವತೇತ್ಯರ್ಥಃ ||

ತಾ|| ಆ ಶಾಪಗಳು ಯಾವುವೆಂದರೆ;-ಅಯ್ಯಾ, ನೀವು ವೇದ ಬಾಹ್ಯರು, ಪಾಪಿಗಳಾದವರು, ಶ್ರೌತಸ್ಮಾರ್ತ ಕರ್ಮಗಳಲ್ಲಿ ಶಕ್ತಿ ಇಲ್ಲದವರು, ಜ್ಞಾನ ವಿಹೀ ನರೂ, ಬ್ರಾಹ್ಮಣರಲ್ಲಿ ಕೇವಲ ಅಧಮರೂ ಆಗುವಿರಿ. ಮತ್ತು

ಶ್ಲೋ|| ಅದ್ವೈತ ಜ್ಞಾನ ನಿಷ್ಟಾಯಾಂ ಶಾಂತಿದಾಂತ್ಯಾದಿ ಸಾಧನೇ |
ಭವತಾಸುನ್ಮುಖಾಯೂಯಂ ಭವೇಯುರ್ಬ್ರಾಹ್ಮಣಾಧಮಾಃ ||

ತಾ|| ಅದ್ವೈತ ಜ್ಞಾನ ನಿಷ್ಟಾರಹಿತರೂ, ಅಂತರಿಂದ್ರಿಯ ಮತ್ತು ಬಹಿ ರಿಂದ್ರಿಯ ನಿಗ್ರಹವಿಲ್ಲದವರೂ, ಬ್ರಾಹ್ಮಣರಿಂದ ಬಹಿಷ್ಕರಿಸಲ್ಪಟ್ಟವರೂ ಆಗು ವಿರಿ. ಮತ್ತು

ಶ್ಲೋ॥ ಕಾಪಾಲಿಕ ಮತಾಸಕ್ತಾ ಬೌದ್ಧಶಾಸ್ತ್ರರತಾಸ್ಸದಾ ।
ಪಾಷಂಡಾಚಾರ ನಿರತಾಭವೇಯುರ್ಬ್ರಾಹ್ಮಣಾಧಮಾಃ ॥

ತಾ॥ ಕಾಪಾಲಿಕ ಮತದಲ್ಲಿಯೂ, ಬೌದ್ಧ, ಜೈನ ಶಾಸ್ತ್ರಗಳಲ್ಲಿಯೂ, ಆ ಆಸಕ್ತಿಯುಳ್ಳವರಾಗಿ, ಪಾಷಂಡಾಚಾರವು. ಪಾಶುಪತದೀಕ್ಷೆಯುಳ್ಳವರೂ ಆಗುವಿರಿ. ಮತ್ತು.

ಶ್ಲೋ॥ ಪಾಂಚರಾತ್ರೇ ಕಾಮಶಾಸ್ತ್ರೇ ತಥಾ ಕಾಪಾಲಿಕೇಮತೇ ।
ಬೌದ್ಧೇ ಶ್ರದ್ಧಾಯುತಾ ಯೂಯಂ ಭವತ ಬ್ರಾಹ್ಮಣಾಧಮಾಃ ॥

ತಾ॥ ಪಾಂಚರಾತ್ರವು, (ವೈಷ್ಣವ ತಂತ್ರವು) ಕಾಮ ಶಾಸ್ತ್ರವು (ಕಳಾ ಶಾಸ್ತ್ರವು) ಅಥವ ಸ್ವೇಚ್ಛಾಚಾರ ಉಳ್ಳವರೂ, ಕಾಪಾಲಿಕರೂ, ಬೌದ್ಧಾಚಾರ (ನಿರತರೂ) ದಲ್ಲಿ ಆಸಕ್ತಿ ಉಳ್ಳವರೂ ಆಗುವಿರಿ. ಮತ್ತು

ಶ್ಲೋ॥ ಯುಷ್ಮಾಕಂ ವಂಶಜಾತಶ್ಚ ಸ್ತ್ರಿಯಶ್ಚ ಪುರುಷಾಂತಥಾ ।
ಮದ್ದತ್ತ ಶಾಪದಗ್ಧಾಸ್ತೇ ಭವಿಷ್ಯಂತಿ ಭವತ್ಸಮಾಃ ॥

ತಾ॥ ನಿಮ್ಮ ವಂಶಗಳಲ್ಲಿ ಹುಟ್ಟಿದ ಸ್ತ್ರೀ ಪುರುಷರೂಸಹಾ ನನ್ನ ಶಾಪದಿಂದ ದಗ್ಧರಾಗಿ ನಿಮ್ಮ ಸಮಾನರಾಗಲಿ, ಹಾಗೂ ಬ್ರಾಹ್ಮಣರಿಂದ ಬಹಿಷ್ಕರಿಸಲ್ಪಡುವರಾಗುವಿರಿ.

"ಏವಂ ಶಾಪದಗ್ಧಾ ಬ್ರಾಹ್ಮಣಾಃ ಪಶ್ಚಾತ್ತಪ್ತಾ ಶಾಪಮೋಕ್ಷಣಾರ್ಥ ಮುನಿಂ ಪ್ರಾರ್ಥಯಾಮಾಸುಃ । ತತೋಮುನಿಸ್ಸರ್ತ್ವ ದೃಷ್ಟ್ವಾ ಕೃಷ್ಣಾವತಾರ ಪರ್ಯಂತಂ ಸ್ಥಿತಿಃ ಕುಂಭೀ ಪಾಕೇ ಭವೇದನಂತರಂ ಕಲಿಯುಗೇ ಯುಷ್ಮಾಕಂ ಜನ್ಮ ಭವೇತ್ । ಮದುಕ್ತಮೇ ತತ್ಸರ್ವ ಮನ್ಯಥಾ ನ ಭವೇದಿತ್ಯುಕ್ತರ್ವಾ । ತದನಂತರ ಮುಕ್ತ ಪ್ರಕಾರೇಣ ತೇಷಾಂ ಜನ್ಮಾದಿಕಮಭವದಿತ್ಯುಕ್ತಮ್ ॥

ತಾ॥ ಈ ರೀತಿಯಿಂದ ಬ್ರಾಹ್ಮಣರು ಗೌತಮ ಮುನಿ ಶಾಪದಿಂದ ದಗ್ಧರಾಗಿ ಪಶ್ಚಾತ್ತಾಪವನ್ನು ಹೊಂದಿ ಪುನಃ, ಆ ಮುನೀಶ್ವರನನ್ನು ಶಾಪ ವಿಮೋಚನಾರ್ಥಕ್ಕಾಗಿ ಪ್ರಾರ್ಥಿಸಲು, ಕೃಷ್ಣಾವತಾರ ಪರ್ಯಂತವೂ ನೀವುಗಳು ಕುಂಭೀ ಪಾಕ ನರಕ ಯಾತನೆಯನ್ನು ಅನುಭವಿಸಿ, ತದನಂತರ ಕಲಿಯುಗದಲ್ಲಿ, ಜನ್ಮಿಸಿ. ನನ್ನ ಶಾಪವನ್ನು ಅನುಭವಿಸಬೇಕು. ನನ್ನ ವಾಕ್ಯವು ಅನ್ಯಥಾ ಪರಿಣಮಿಸುವುದಿಲ್ಲವೆಂತ ಆ ಮುನೀಶ್ವರನು ಹೇಳಿದನು. ಅನಂತರದಲ್ಲಿ, ಆ ಶಾಪದಗ್ಧ ಬ್ರಾಹ್ಮಣರು ಕಲಿಯುಗದಲ್ಲಿ ಜನ್ಮಿಸಿದರು. ಅವರು ಯಾರೆಂದರೆ.

"ಯಥಾ"॥ ಏತಸ್ಮಾತ್ಕಾರಣಾದ್ರಾಜನ್ಗತೇ ಕೃಷ್ಣೇತು ಧಾಮನಿ ।
ಕಲೌಯುಗೇ ಪ್ರವೃತ್ತೇತು ಕುಂಭೀ ಪಾಕಾತ್ತು ನಿರ್ಗತಾಃ ॥
ಭುವಿಜಾತಾ ಬ್ರಾಹ್ಮಣಾಶ್ಚ ಶಾಪದಗ್ಧಾಃ ಪುರಾತುಯೇ ।
ತಪ್ತ ಮುದ್ರಾಂಕಿತಾಃ ಕೇಚಿತ್ಕಾಮಾಚಾರರತಾಃ ಪರೇ ॥
ಕಾಪಾಲಿಕಾಃ ಕೌಳಿಕಾಶ್ಚ ಬೌದ್ಧಾ ಜೈನಾಸ್ತಥಾಪರೇ ।
ಪಂಡಿತಾ ಅಪಿತೇ ಸರ್ವೇ ದುರಾಚಾರ ಪ್ರವರ್ತಕಾಃ ॥
ಲಂಪಟಾಃ ಪರದಾರೇಷು ದುರಾಚಾರ ಪರಾಯಣಾಃ ।
ಕುಂಭೀಪಾಕಂ ಪುನಸ್ಸರ್ವೇ ಯಾ ಸ್ಯಂತಿ ನಿಜಕರ್ಮಭಿ ॥ಇತಿ॥

ತಾ॥ ಆ ಶಾಪದಗ್ಧ ಬ್ರಾಹ್ಮಣರ ಜನ್ಮಗಳು ಎಂಥವುಗಳೆಂದರೆ, ಕ್ರಮವಾಗಿ ಕೃಷ್ಣಾವತಾರವಾದ ಮೇಲೆ. ಕಲಿಯುಗ ಪ್ರವೇಶವಾದ ಕೂಡಲೇ ಆ ಬಾತ್ಮಣರು, ಕುಂಭೀಪಾಕ ನರಕದಿಂದ ಹೊರ ಬಿದ್ದು ಬಂದು, ಭೂಲೋಕದಲ್ಲಿ, ಕೆಲವರು, ತಪ್ತ ಮುದ್ರಾಧಾರಣೆಯುಳ್ಳ ವೈಷ್ಣವರಾಗಿಯೂ, ಕೆಲವರು, ಪಾಷಂಡರಾಗಿಯೂ (ಲಿಂಗಧಾರಿಗಳಾಗಿಯೂ)ಕೆಲವರು ಬೌದ್ಧ ಜೈನ ಮತಸ್ಥರುಗಳಾಗಿಯೂ, ಮತ್ತೆ ಕೆಲವರು, ಕಾಪಾಲಿಕರು, ಕೌಳಾಚಾರವಂತರು, ವಾಮಾಚಾರವಂತರೂ, ವೇದದಲ್ಲಿ ಅಸೂಯೆಯುಳ್ಳವರು, ಶ್ರೌತಸ್ಮಾರ್ತ ಕರ್ಮವರ್ಜಿತರು, ಬ್ರಹ್ಮಜ್ಞಾನ ಶೂನ್ಯ ಉಳ್ಳವರಾಗಿಯೂ ಜನ್ಮಸಿದರು. ಇವರುಗಳು ಪಂಡಿತರುಗಳಾದಾಗ್ಯೂ, ದುರಾಚಾರಾಸಕ್ತರೂ, ಪರಸ್ತ್ರೀಲಂಪಟರೂ, ಆಗಿ ಪುನಃ ಪುನಃ ಕುಂಭೀ ಪಾಕದಲ್ಲಿ (ಅವರು ಮಾಡಿದ) ಕರ್ಮಫಲವನ್ನು ಅನುಭವಿಸುವುದಕ್ಕಾಗಿ ಹೋಗುತ್ತಾರೆ.

ತಸ್ಮಾದನೇ ಕಾಧಿಕಾರಿಣ ಉದ್ದಿಶ್ಯರ ಚಿತೇಷು ತಂತ್ರೇಷು। ಪುರಾಣೇಷು ಸ್ಮೃತಿಷು ಸಂಹಿತಾಸುವಾ।ಯತ್ರಯತ್ರಯಾನಿವಚನಾನಿ। ತಪ್ತ ಮುದ್ರಾಲಿಂಗ ಧಾರಣ ಮಕಾರಪಂಚಕಪೂಜಾ ದೀನಿ ಬ್ರಾಹ್ಮಣೈಃ ಕರಣೀಯಾ ನೀತ್ಯುಚ್ಯಂತೇ ತತ್ರ ತತ್ರ ತಾನಿ ತಾನಿ ವಚನಾನಿ ಗೌತಮ ಶಾಪದಗ್ಧ ಬ್ರಾಹ್ಮಣ ವಿಷಯಿ ಕಾನೀತಿ ಜ್ಞೇಯಾನಿ ॥

ತಾ॥ ಆದ್ದರಿಂದ ಅನೇಕ ಭೇದಗಳುಳ್ಳ ಅಧಿಕಾರಿಗಳೆಲ್ಲರನ್ನೂ ಉದ್ದೇಶಿಸಿರಚಿಸಲ್ಪಟ್ಟಿರತಕ್ಕ ತಂತ್ರಗಳಲ್ಲಿಯೂ, ಪುರಾಣಗಳಲ್ಲಿಯೂ ಸ್ಮೃತಿ, ಸಂಹಿತೆಗಳಲ್ಲಿಯೂ, ಎಲ್ಲೆಲ್ಲಿ ಯಾವವಚನಗಳು, ತಪ್ತ ಮುದ್ರಾಧಾರಣಾದಿಗಳನ್ನು ಮಾಡ ಬಹುದೆಂತ ಹೇಳಲ್ಪಟ್ಟಿರುತ್ತವೆಯೋ,!ಅವೆಲ್ಲವೂ ಶಾಪದಗ್ಧ ಬ್ರಾಹ್ಮಣರ ವಿಷಯವೆಂತ ಗ್ರಹಿಸಬೇಕು.

"ಏವಂಚೇ ದುಪಾಸನಾಕಾಂಡ ಪ್ರವೃತ್ತಾನಾಂ ವೈದಿಕಾನಾಂ। ಕೃತ್ಸ್ನಸ್ಯ ತಂತ್ರಾದ್ಯರ್ಥಸ್ಯಾಗ್ರಾಹ್ಯತ್ವಾ ದ್ದೇವತಾ ಪ್ರೀತಿಜನಕ ಸಾಂಗೋಪಾಸನ ಪುರುಷಾರ್ಥಾವಾ ಪ್ತಿರೇವನ ಸ್ಯಾದಿತಿ ಚೇದುಚ್ಯತೇ:—"

ತಾ॥ ಆಪಕ್ಷದಲ್ಲಿ ಉಪಾಸನಾಕಾಂಡದಲ್ಲಿ ಪ್ರವರ್ತಿಯುಳ್ಳ ವೈದೀಕರಿಗೆ ತಂತ್ರಗಳನ್ನು ಪೂರ್ಣವಾಗಿ ಗ್ರಹಿಸಕೂಡದೆಂತ ನುಡಿದ ಪಕ್ಷದಲ್ಲಿ ದೇವತಾ ಪ್ರೀತಿಯನ್ನುಂಟು ಮಾಡಲು, ಪೂಜಾ ಪೂರ್ತಿಯು, ಪುರುಷಾರ್ಥಾವ್ಯಾಪ್ತಿಯೂ, ಇಲ್ಲದೇ ಹೋಗುತ್ತದೆಂತ ಯೋಚಿಸಿದಲ್ಲಿ ಇದಕ್ಕೆ ಸಮಾಧಾನವು ಹೇಳುತ್ತಾ ಇದ್ದೇವೆ.

ಸಂತು ವೇದಾನುಯಾಯಿಾನಿ ಶೈವ ತಂತ್ರಾಣ್ಯಷ್ಟಾ ವಿಂಶತಿಃ। ಕಾಮಿಕಾದೀನಿ ವೈದಿಕಾನಿ ನಿಗಮಪದವಾಚ್ಯಾನಿ ಪರಮೇಶ್ವರ ಮುಖೋದ್ಭೂತತ್ವಾತ್ ಆಜ್ಞಾರೂಪಾಣಿ ಸಂಹಿತಾ ಇತ್ಯುಚ್ಯಂತೇ॥ ಪುನರಧೋಭಾಗಾದುತ್ಪನ್ನಾನಿ ವೇದ ವಿರುದ್ಧಾನಿ ಮಹಾ ಮಾಯಾದೀನಿ। ತೇಷಾಮಾಗಮಇತಿ ಸಂಜ್ಞಾ॥ ಶ್ಲೋ॥ ಆಗತಂಶಿವವಕ್ರೇಭ್ಯೋಗ ತಂತು ಗಿರಿಜಾ ಮುಖೇ। ಮತಂತು ವಾಸುದೇವಸ್ಯತಸ್ಮಾದಾಗಮ ಮುಚ್ಯತೇ॥ ಇತಿ ನಿರುಕ್ತಿ:॥

ತಾ॥ ನಿಗಮಗಳೆಂಬ ಸಂಜ್ಞೆಯುಳ್ಳ (ವೇದಸಮ್ಮತವಾದುವುಗಳು) ಶಿವ ಇಪ್ಪತ್ತೆಂಟು ಸಂಹಿತೆಗಳು ಇರುತ್ತವೆ. (ಕಾಮಿಕಾದಿಗಳು) ಅವು ವೈದಿಕಸಮ್ಮತವಾದುವುಗಳು; ಮತ್ತು ಪರಮೇಶ್ವರ ಮುಖದಿಂದ ಹುಟ್ಟಿದವುಗಳು ಈಶ್ವರಾಜ್ಞಾಸ್ವರೂಪಗಳಾದ್ದರಿಂದ ಇವಕ್ಕೆ ಸಂಹಿತೆಗಳೆಂದು ಹೆಸರುಂಟಾಗಿರುತ್ತದೆ. ತರುವಾಯ ಅಧೋಭಾಗದಿಂದ ವೇದವಿರುದ್ಧವಾದ, "ಮಹಾಮಾಯಾ" ಮೊದಲಾದುವುಗಳು ಹುಟ್ಟಿದವು. ಅವುಗಳಿಗೆ "ಆಗಮಗಳೆ"ಂಬ ಸಂಜ್ಞೆ ಉಂಟಾಯಿತು. ಈಶ್ವರ ಮುಖಗಳಿಂದ ಹುಟ್ಟಿ, ಪಾರ್ವತಿ ಮುಖವನ್ನು

ಹೊಂದಿರತಕ್ಕದ್ದು, ವಿಷ್ಣು ಮತವನ್ನು ಪ್ರತಿಪಾದಿಸೋಣವ್ವರಿಂದ "ಆಗಮ" ವೆಂದು, ಮೂರು ಅಕ್ಷರಗಳನ್ನು ಹೊಂದಿರುವುದು. ಸಾರ್ಥಕ ಉಳ್ಳದ್ದು. (ಸಿದ್ಧಾಕ್ಷೇಪಣೆ)(ಸಂಹಿತಾನಾಂ ಪಾದಾಶ್ಚತ್ವಾರಃ)ಕ್ರಿಯಾ-ಚರ್ಯಾ-ಯೋಗ-ಜ್ಞಾನಾತ್ಮಕಾಃ। ತತ್ರ ಕ್ರಿಯಾಚರ್ಯಾಭ್ಯಾಂ ಸಮಗ್ರ ಮುಪಾ ಸನಾಕರ್ಮಸ್ವರೂಪಂ ಪ್ರತಿ ಪಾದಿತಂ। ಯೋಗೇನಹಠಾದಿಯೋಗೋಕ್ತಿಃ। ಜ್ಞಾನಪಾದೇವಿಶೇಷಜ್ಞಾನಂ ಪ್ರತಿ ಪಾದಿತಂ॥

ತಾ॥ ಹಿಂದೆಹೇಳಿದ ಇಪ್ಪತ್ತೆಂಟು ಸಂಹಿತೆಗಳಲ್ಲಿ ಕ್ರಿಯಾ, ಚರ್ಯ, ಯೋಗ, ಜ್ಞಾನ ವೆಂದು ನಾಲ್ಕು (ಪಾದಗಳು) ಭಾಗಗಳುಂಟು. ಅವರಲ್ಲಿ, ಕ್ರಿಯಾ. ಚರ್ಯಗಳನ್ನು ಕುರಿತು, ಉಪಾಸನಾ ಕಾಂಡಗಳು ಹೇಳಲ್ಪಟ್ಟಿವೆ. ಯೋಗ ಪಾದದಲ್ಲಿ ಹಟಯೋಗಾದಿಗಳು ಹೇಳಲ್ಪಟ್ಟಿವೆ. ಜ್ಞಾನ ಪಾದದಲ್ಲಿ, ವಿಶೇಷ ಜ್ಞಾನವು (ತುರೀಯತುರ್ಯಾತೀತಗಳು) ಹೇಳಲ್ಪಟ್ಟಿವೆ. ಇವುಗಳೆಲ್ಲವೂ ವೇದ ಸಮ್ಮತವಾದವುಗಳು.

ಅವುಗಳ ವಿವರಗಳನ್ನು ತೋರಿಸುತ್ತಾ ಇದಾರೆ :—

"ತಾಸ್ತು" ಶ್ಲೋ॥ ಕಾಮಿಕಂ ಯೋಗಜಂ ಚಿಂತ್ಯಂ ಕಾರಣಂತ್ವಜಿತಂತಥಾ।
ದೀಪ್ತಂಸೂಕ್ಷ್ಮಂ ಸಹಸ್ರಂಚ ಅಂಶು ಮಾನ್ಯಂಪ್ರಭೇದಕ :॥
ವಿಜಯಂ ಚೈವ ನಿಶ್ವಾಸಂಸ್ವಾಯಂಭುವಮದಾಸಿಲಂ।
ವೈರೋಚನಂ ವಾಸವಂಚ ಮಕುಟಂ ವಿಮುಲಂತಥಾ॥
ಚಂದ್ರಜ್ಞಾನಂಚ ಬಿಂಬಂಚ ಪ್ರೋದ್ಗೀತಂ ಲಲಿತಂ ತಥಾ॥
ಸಿದ್ಧಸಂತಾನ ಶರ್ವೋಕ್ತಿಃ ಪಾರಮೇಶ್ವರಮೇವಚ॥
ಕಿರಣಂವಾತುಲಂ ಚೈತಾ ಅಷ್ಟಾವಿಂಶತಿ ಸಂಖ್ಯಕಾಃ।
ಸದಾಶಿವಮುಖೇಭ್ಯಸ್ತಾಸ್ಸಮ್ಭೂತಾಸ್ಸಂ ಹಿತಾಶ್ರಯಾಃ॥ (ಇತಿ)

ತಾ॥ ಮೇಲೆ ಹೇಳಲ್ಪಟ್ಟ ಕಾಮಿಕಾದಿ ಮೊದಲಾದ ೨೮ ಇಪ್ಪತ್ತೆಂಟು ಪರಮೇಶ್ವರನ ಐದು ಮುಖಗಳಿಂದ ಹುಟ್ಟಿ ಸಂಹಿತೆಗಳೆಂದು ಹೆಸರಾಗಿರುತ್ತದೆ.

(ಸ್ಕಾಂದೇ) ಯೇಭ್ಯೋಯೇ ಭೋಮುಖೇಭ್ಯೋಯಾಯಾಸ್ಸಂಹಿತಾಸ್ಸಮುದ್ಭೂತಾಸ್ತತ್ತದ್ವಿಭಾಗೋಭಿ ಹಿತಃ॥ ಯಥಾ॥ ಸದ್ಯೋ ಜಾತಮುಖೋ

ದ್ಭೂತಾಃ ಪಂಚಾದ್ಯಾಃ॥ ಕಾಮಿಕಾದಯಃ। ವಾಮದೇವಮುಖಾ ಜ್ಜಾತಾ ದೀಪ್ತಾದ್ಯಾಃ ಪಂಚಸಂಹಿತಾಃ ಅಘೋರವಕ್ತ್ರಾದುದ್ಭೂತಾಃ ಪಂಚಾ ಪಿವಿಜಯಾದಯಃ। ಪುವಕ್ತ್ರಾದಪಿ ಸಂಭೂತಾಪಂಚವೈರೋ ಚನಾದಯಃ॥ ಈಶಾನವದನಾಜ್ಜಾತಾಃ ಪ್ರೋದ್ಗೀತಾದ್ಯಷ್ಟ ಸಂಹಿತಾಃ। ಊರ್ಧ್ವಸ್ರೋತೋ ಭವಾಹ್ಯೇತೇ ನಾಭ್ಯಥ ಸ್ರೋತಸಃ ಪರಾಃ॥ ॥ಇತಿ॥ ಏವಂಪರಮೇಶ್ವರೇಣ ವೇದಾವಿರುದ್ಧಕಾಮಿಕಾದಿ। ತಂತ್ರೈರ್ವೈದಿಕಾ ನಾಂಸಾಂಗೋಪಾಸನಾಭಿಹಿತಾ॥

ತಾ॥ ಮೇಲೆ ಹೇಳಲ್ಪಟ್ಟ ಪ್ರಕಾರವಾಗಿ ಕಾಮಿಕಾದಿ ಸಂಹಿತೆಗಳು ವೈದಿಕರಿಗೋಸ್ಕರ ಪರಮೇಶ್ವರನಿಂದ ಹೇಳಲ್ಪಟ್ಟವೆ. ಅವುಗಳಲ್ಲಿ ವೇದಸಮ್ಮ ತವಾಗಿ ಶ್ರೀ ವಿದ್ಯೋಪಾಸನಾ ಪೂಜಾಕ್ರಮಾದಿಗಳು ವಿವರಿಸಲ್ಪಟ್ಟವೆ. ಅವು. ನಾಭಿಯಿಂದ ಊರ್ಧ್ವಕಾಯದಲ್ಲಿ ಹುಟ್ಟಿರುತ್ತವೆ.

ಮೂ॥ ವೇದ ವಿರುದ್ಧ ಮಹಾಮಾಯಾದಿ ತಂತ್ರೈರವೈದಿಕಾನಾಂ ಮುಪಾಸ ನಾಭಿಹಿತಾ। ಕುಲಾರ್ಣವ ಕುಲೇಶ್ವರೀ ಭುವನೇಶ್ವರ್ಯಾದಿ ತಂತ್ರೇಷು ವೈದಿಕಾನಧಿ ಕೃತ್ಯ॥ (ಸವ್ಯಮಾರ್ಗೇಣಾನುಷ್ಠಾನ ಕಲಾಪ ಸ್ಸೂಚಿತಃ) ಅವೈದಿಕಾನಧಿಕೃತ್ಯ ಅಪಸವ್ಯ ಮಾರ್ಗ್ಗೇಣ ವಾಮಾಚಾರೋ ನಿರೂ ಪಿತಃ॥ ಅತಏವ ಕುಲಾರ್ಣವಾದಿ ತಂತ್ರಾಣಿ ಮಿಶ್ರಾಣೀತ್ಯುಚ್ಯಂತೇ। ಮಿಶ್ರೇ ಷು ವೈದಿಕಾಂಶ ಏವ ಬಾಹ್ಯಾನುಷ್ಠಾನ ಪರೈರ್ವೈದಿಕೈರ್ಗ್ರಾಹ್ಯಾ। ಅಂತರಾರಾಧನ-ಪರೈರ್ವಶಿಷ್ಟ-ಸನಕ-ಸನಂದನ-ಸನತ್ಕುಮಾರ-ಸನತ್ಸು ಜಾತೈಃ ಪಂಚಭಿರ್ಮುನಿಭಿಃ ಪ್ರದರ್ಶಿತ ಶುಭಾಗಮ ಪಂಚಕ ಪ್ರಕಾರೇಣ ಸರ್ವೋಪ್ಯಾಂತರಾನುಷ್ಠಾನ ಕಲಾಪೋ ವಿಧೇಯಃ॥ ತೈರ್ಮಿಶ್ರಕಂ ಕೌಳ ಮಾರ್ಗಂ ಚ ಪರಿತ್ಯಾಜ್ಯಂ॥

ತಾ॥ ವೇದ ಬಾಹ್ಯರಿಂದ ಶೂದ್ರಾದಿಗಳಿಗೆ ವೇದ ವಿರುದ್ಧವಾಗಿರತಕ್ಕ ಮಹಾ ಮಾಯಾದಿ ತಂತ್ರಗಳ ರೀತ್ಯಾ ಪೂಜೋಪಾಸನೆಗಳು ಹೇಳಲ್ಪಟ್ಟವೆ. ಕುಲಾರ್ಣವ, ಕುಲೇಶ್ವರೀ, ಭುವನೇಶ್ವರಾದ್ಯಾ ತಂತ್ರಗಳಲ್ಲಿ ವೈದಿಕರನ್ನುದ್ದೇಶಿಸಿ ಸವ್ಯಮಾರ್ಗವಾಗಿ ಪೂಜಾದ್ಯನುಷ್ಠಾನ ಕಲಾಪಗಳನ್ನು ಸೂಚಿಸಲ್ಪಟ್ಟವೆ. ವೇದ ವಿಹೀನರುದ್ದೇಶಿಸಿ ಅಪ ಸವ್ಯ ಮಾರ್ಗವಾಗಿರತಕ್ಕ ವಾಮಾಚಾರವನ್ನೂ ಸಹ

ತೋರಿಸಲ್ಪಟ್ಟಿದೆ, ಆದ್ದರಿಂದಲೇ ಕುಲಾರ್ಣವವು ಮೊದಲಾದ ತಂತ್ರಗಳು ಮಿಶ್ರವಾದುವುಗಳೆಂತ ಹೇಳಲ್ಪಟ್ಟಿದೆ. ಅಂಥಾ ಮಿಶ್ರ ತಂತ್ರಗಳಲ್ಲಿರತಕ್ಕ ಸವ್ಯಮಾರ್ಗವನ್ನು ಮಾತ್ರವೇ ಬಾಹ್ಯ ಪೂಜೆಯಲ್ಲಿ ವೈದಿಕರು ಗ್ರಹಿಸಬೇಕು. ಅಂತರ್ಯಾಗ ಪರ (ರು)ರಿಗೆ ವಶಿಷ್ಠ, ಸನಕ, ಸನಂದನ, ಸನತ್ಕುಮಾರ, ಸನತ್ಸುಜಾತರು, ಈ ಐದು ಋಷಿಗಳೂ ಐದು ಸಂಹಿತೆಗಳನ್ನು ರಚಿಸಿದರು. ಅವು ಶುಭಾಗಮ ಪಂಚಕವೆಂದು ಪ್ರಸಿದ್ಧಿಯಾಗಿದೆ, ಅವರಲ್ಲಿ ಅಂತರ್ಯಾಗ ಪ್ರಕಾರವೆಲ್ಲವೂ ಹೇಳಲ್ಪಟ್ಟಿದೆ. ಆ ಪ್ರಕಾರವೇ ಆಚರಿಸಬೇಕು. ಅಂತರ್ಯಾಗ ಪರರು, ಮಿಶ್ರಕವೂ, ಕೌಳವೂ ಸಹ ಬಿಡಬೇಕು.

ಶ್ಲೋ॥ ಮಿಶ್ರಕಂ ಕೌಳಮಾರ್ಗಂ ಚ ಪರಿತ್ಯಾಜ್ಯಂ ಹಿ ಶಾಂಕರೀ ॥ಇತಿವಚನಾತ್॥
ತಸ್ಮಾತ್ಸಮಯಿನಾಂ ಶುಭಾಗಮ ಪಂಚಕೇಧಿಕಾರಃ । ಬಾಹ್ಯ ಪೂಜಾರತಾನಾಂ ವೈದಿಕಾನಾಂ ಅಂತರ್ಯಾಗ ಬಹಿರ್ಯಾಗೌ ಗೃಹಸ್ಥಸ್ಸರ್ವದಾಚರೇತ್॥ ಇತಿ ವಚನಾದಾಂತರ ಪೂಜಾಂ ವಿನಾಬಾಹ್ಯ ಪೂಜಾಯಾ ಮನಧಿಕಾರಾತ್ತೇಷಾಂ ಶುಭಾಗಮ ಪಂಚಕೇ ಕಾಮಿಕಾದ್ಯಷ್ಟಾವಿಂಶತಿ ಸಂಹಿತಾ ಸುಚಾಧಿಕಾರಃ । ಕುಲಾರ್ಣವಾದಿ ಮಿಶ್ರ ತಂತ್ರೇಷು ವೈದಿಕಾಂಶೇಷ್ವಧಿಕಾರಃ। ಏವಮಧಿಕಾರ ಭೇದ ಮಜಾನಂತ ಅವಿಾವಾಂ ಸಕಾಸ್ತ್ರೇಷು ಪ್ರವಿಷ್ಟಾ ಶ್ಚೇದ್ಭ್ರಷ್ಟಾ ಭವೇಯುಃ ॥

ತಾ॥ "ಅಯ ಮಾತ್ಮಾಬ್ರಹ್ಮಾ" ಎಂದು ಮೊದಲಾದ ಮಹಾ ವಾಕ್ಯಾರ್ಥಾನು ಸಂಧಾನವು, ಸಹಸ್ರಾರದಲ್ಲಿ ದೇವತಾತ್ಮಗಳಿಗೆ ಐಕ್ಯಾನು ಸಂಧಾನವು, ಜೀವೇಶ್ವರಲಯ ಭಾವನೆಯು, ಹೃದಯ ಕಮಲದಲ್ಲಿ ಶ್ರೀ ಪರದೇವತೆಯನ್ನು ಸಗುಣವು, ಕರಚರಣಾದ್ಯಾಕಾರವಾಗಿ ಧ್ಯಾನಿಸಿ, ಮಾನಸಿಕವಾಗಿ ಪೂಜೆ ಮಾಡುವಿಕೆಯು, ವೇದ ಸಮ್ಮತವಾಗಿ, ಬಾಹ್ಯದಲ್ಲಿ ಶ್ರೀ ಚಕ್ರಾರ್ಚನೆಯು ಸಮಯ, ದಕ್ಷಿಣಾಚಾರವೆಂತಲೂ, ಇವು ವೈದಿಕಾರ್ಹವೆಂತಲೂ ಒಂದು ನಿರ್ಣಯವಾಗಿರುತ್ತದೆ. ಆದ್ದರಿಂದ ಸಮಯಾಚಾರಪರರು, ಶುಭಾಗಮ ಪಂಚಕಗಳಲ್ಲಿ ಅಧಿಕಾರಿಗಳು, ಬಾಹ್ಯಪೂಜೆಯಲ್ಲಿ ಆಸಕ್ತಿಯುಳ್ಳ ವೈದಿಕರು ಗೃಹಸ್ಥರು ಅಂತರ್ಯಾಗ, ಬಹಿರ್ಯಾಗಗಳೆರಡನ್ನೂ ಮಾಡಬೇಕು. ಕೇವಲ ಬಾಹ್ಯ ಪೂಜೆಯು, ಕಾಮ್ಯ ಮಾತ್ರವಾದ್ದರಿಂದ, ಅದು ಒಂದನ್ನೇ ಆಚರಿಸ

ಕೂಡದು. ಅವರಿಗೆ ಶುಭಾಗಮ ಪಂಚಕದಲ್ಲಿಯೂ, ಕಾಮಿಕಾದಿ ೨೮ ಸಂಹಿತೆಗಳಲ್ಲಿಯೂ ಅಧಿಕಾರ ಉಂಟು, ಮಿಶ್ರಗಳಾದ ಕುಲಾರ್ಣವಾದಿ ತಂತ್ರಗಳಲ್ಲಿನ ತಕ್ಕ ವೈದಿಕ ಸಮ್ಮತವಾದ ಅಂಶಗಳನ್ನು ಮಾತ್ರವೇ ಗ್ರಹಿಸತಕ್ಕದ್ದು. ಶೂದ್ರಾದಿಗಳನ್ನುದ್ದೇಶಿಸಿ ೬೪ ಚತುಷಷ್ಟಿ ತಂತ್ರಗಳು ಉತ್ಪನ್ನವಾಗಿರುತ್ತವೆ. ಶೂದ್ರಾದಿಗಳು ಅವುಗಳಲ್ಲಿ ಅಧಿಕಾರವನ್ನು ಹೊಂದಿದವರು, ಈ ಪ್ರಕಾರವಾಗಿರತಕ್ಕ ಅಧಿಕಾರ ಭೇದವನ್ನು ತಿಳಿಯದೇ ಅವಿವೇಕಿಗಳಾಗಿ ವೇದವಿರುದ್ಧವಾದ ತಂತ್ರಾಚಾರಗಳಲ್ಲಿ ಪ್ರವೇಶಿಸಿದವರು ಭ್ರಷ್ಟರಾಗುವರು.

"ಅತೋನ ವೈದಿಕಾನಾಂ ಸಾಂಗೋಪಾಸನಾಯಾಃ ಕ್ಷತಿಃ"

ತಾ॥ ವೈದಿಕ ಗೃಹಸ್ಥರು ಮೇಲೆ ಹೇಳಲ್ಪಟ್ಟ ನಿಬಂಧನೆಗಳ ಪ್ರಕಾರವಾಗಿ ಉಪಾಸಿಸಿದಲ್ಲಿ ದೇವತಾ ಸಂತುಷ್ಟಿಗೆ ಲೋಪವಿರುವುದಿಲ್ಲವು. ಇದಕ್ಕೆ ಪ್ರಮಾಣವು :-"ತದುಕ್ತಂ ಪ್ರೋದ್ಗೀತ ಸಂಹಿತಾಯಾಂ"

ಶ್ಲೋ॥ ವೇದಾನುಯಾಯಿ ತಂತ್ರೇಷು ವೈದಿಕಾದಿಷು ಪಾರ್ವತೀ।
ಶುಭಾಗಮೇ ವೈದಿಕಾಶ್ಚ ನಿತ್ಯಮೇವಾಧಿಕಾರಿಣಃ ॥
ಸವ್ಯಾಪಸವ್ಯ ಭೇದೇನ ಮಿಶ್ರ ಮಾರ್ಗೋ ಮಹೇಶ್ವರೀ ।
ಕುಲಾರ್ಣಾದೌ ಮಯಾ ಪ್ರೋಕ್ತ ತಂತ್ರೋ ಚ್ಯಂತೇಧಿಕಾರಿಣಃ ॥
ಸವ್ಯೇತು ವೈದಿಕಾಃ ಪ್ರೋಕ್ತ ತಾತ್ರೋಚ್ಯಂತೇಧಿಕಾರಿಣಃ ॥
ಸವ್ಯೇತು ವೈದಿಕಾಃ ಪ್ರೋಕ್ತಾಹ್ಯಪ ಸವ್ಯೇತ್ವ ವೈದಿಕಾಃ ।
ನಾಭ್ಯಥ ಸ್ರೋತಸೋದ್ಭೂತ ತಂತ್ರೇಷು ನತು ವೈದಿಕಾಃ ॥
ಯತ್ರ ಕುತ್ರಾಪಿ ವಾಧರ್ಮಃ ಶ್ರುತಿರುದ್ಧೋ ಭವೇದ್ಯದಿ ।
ನ ಗ್ರಾಹ್ಯೋ ವೈದಿಕೈರ್ದೇವಿ ಸುರಾಪೋ ಬ್ರಾಹ್ಮಣೋ ಯಥಾ ॥
ಯೋ ವೇದ ಧರ್ಮ ಮುಚ್ಛೃಜ್ಯ ವರ್ತತೇನ್ಯ ಪ್ರಮಾಣತಃ ।
ಕುಂಡಾನಿತಸ್ಯಶಿಕ್ಷಾರ್ಥಂ ಯಮಲೋಕೇವಸಂತಿಹಿ ॥ಇತಿ॥

ಈ ವಚನಗಳ ತಾತ್ಪರ್ಯವನ್ನು ಹಿಂದೆ ಹೇಳಲ್ಪಟ್ಟಿರುತ್ತದೆ.

ಏವಂ ಪರಮೇಶ್ವರೇಣ ವೈದಿಕ ತಾಂತ್ರಿಕ ಯೋರ್ವ್ಯವಸ್ಥಾ ಸಮ್ಯಗುಕ್ತಾಪಿ ಜಿಹ್ವೋಪಸ್ಥಾಪರಾಃ ಕೇಚಿದ ವೈದಿಕ ಮಾರ್ಗಪ್ರವೃತ್ತಾಃ ಸ್ವಯಂ ಭ್ರಷ್ಟಾ ಸ್ಸಂತೋ ಪರಾನಪಿವಂಚಯಿತು ಮೇವಂ ಸಂಗಿರಂತಿ

ತಾ॥ ಈ ಪ್ರಕಾರವಾಗಿ ಪರಮೇಶ್ವರನಿಂದ ವೈದಿಕ, ತಾಂತ್ರಿಕರಿಗೆ, ಬೇರೆ ಬೇರೆಯಾಗಿ (ಪೂರ್ಣವಾಗಿ) ವಿದ್ಯಾದುಗಳು ಹೇಳಲ್ಪಟ್ಟಿದ್ದಾಗ್ಯೂ ಕೆಲವು ವೈದಿಕ ಜನಗಳು ಜಿಹ್ವೋಪಸ್ಥಗಳಲ್ಲಿ ಆಸಕ್ತಿಯುಳ್ಳವರಾಗಿ, ವೇದಬಾಹ್ಯರಿಂದ ಶೂದ್ರಾದಿಗಳ ಧರ್ಮಗಳಲ್ಲಿ ಪ್ರವೇಶಿಸಿ, ತಾವೂ ಭ್ರಷ್ಟರಾಗಿ, ಇತರರನ್ನು ಸಹಾ ವಂಚಿಸಲು ಸಿದ್ಧರಾಗಿ ಈ ರೀತಿ ಬೋಧಿಸುತ್ತಾ ಇರುತ್ತಾರೆ.

## (ಪೂರ್ವಪಕ್ಷಃ)

ಬ್ರಾಹ್ಮಣಾ ಏವಸ್ಮಾರ್ತಾ ವೈಷ್ಣವಾಃ ಪಾಂಚರಾತ್ರಾಃ ಪಾಶುಪತಾಃ ಕಾಪಿಲಾಯಥಾಭವಂತಿತಥೈವ ಕೌಲಾದ್ಯಾ ಅಪಿಬ್ರಾಹ್ಮಣಾ ಏವನತು ಜಾತ್ಯಾ ಭಿನ್ನಾಃ। ಅತಃ ಪರಮೇಶ್ವರೇಣ ಸರ್ವಾಣಿ ತಂತ್ರಾಣಿ ವೇದಾವಿರೋಧೇನ ಬ್ರಾಹ್ಮಣಾ ನಧಿಕೃತ್ಯೈವಪ್ರವೃತ್ತಾನಿ॥ ಯಥಾ॥ ಅಗ್ನಿಷ್ಟೋಮ-ಸೌತ್ರಾಮಣಿ ಪಿತೃಯಾಗಾದೌ॥ ದೇವತಾ ಪ್ರೀತಯೇ ಸೋಮ-ಮಾಂಸ-ಸುರಾಗ್ರಹಣಾದಿಕಂ ಶ್ರುತಿಷು। ಮನ್ವಾದಿ ಸ್ಮೃತಿಷು ಚೋಕ್ತಂ ತಥೈವ ಪರಮೇಶ್ವರೇಣೇಷ್ಟ ದೇವತಾಯಜನಾದೌ ತಂತ್ರೇಷುದೇವತಾ ಪ್ರೀತಿ ಜನಕ ಮಕಾರಪಂಚಕ ಮುಕ್ತಮ್॥ ಅನ್ಯತ್ರ ಮಕಾರಪಂಚಕ ಗ್ರಹಣೇಮಹಾ(ನ್) ದೋಷಶ್ಚೈವೇ ನಾಭಿಹಿತಃ॥ "ತಥಾಚ ಕುಲಾರ್ಣವೇ ಮಕಾರ ಪಂಚಕಂನಾಮ" ॥ಶ್ಲೋ॥ ಮತ್ಸ್ಯಂ ಮಾಂಸಂಚ ಮದ್ಯಂಚ ಮುದ್ರಾಮೈಥುನ ಮೇವಚ। ಮಕಾರಪಂಚಕಂ ಪ್ರೋಕ್ತಂ ಕೌಳತಂತ್ರೇಷು ವಿಸ್ತೃತಂ। ಮತ್ಸ್ಯಂಮಾಂಸಾಸವಾದಿನಾಂ ಮಕಾರ್ಥಾನಾಂ ನಿಷೇವಣಂ। ಯಾಗಕಾಲಂ ವಿನಾನ್ಯತ್ರಮಯಾನಕಥಿತಂ ಪ್ರಿಯೇ। ಯಥಾಕ್ರತುಷು ವಿಪ್ರಾಣಾಂ ಸೋಮಪಾನಂ ನದೂಷಿತಂ। ಮದ್ಯಪಾನಂತಥಾ ಕಾರ್ಯಂ ಸಮಯೇ ಭೋಗಮೋಕ್ಷದಂ। ಅಸಂಸ್ಕೃತಂ ಪಿಬೇನ್ಮದ್ಯಂ ಬಲಾತ್ಕಾರೇಣ ಮೈಥುನಂ। ಸ್ವಪ್ರೀತಯೇ ಹೃತಂ ಮಾಂಸಂ ಸೋಷಯುಂನರಕಂ ವ್ರಜೇತ್ ॥ಇತಿ॥

ತಾ॥ ಭ್ರಷ್ಟರಾದ ವೈದೀಕರು ಬೋಧಿಸುವುದೇನೆಂದರೆ:—ಸ್ಮಾರ್ತರು, ವೈಷ್ಣವರು, ಪಾಂಚರಾತ್ರರು, ಶೈವರು, ಕಪಿಲ ಮತಸ್ಥರು, ಇವರುಗಳೆಲ್ಲರೂ, ಬ್ರಾಹ್ಮಣರಾಗಿಯೇ ಇರುತ್ತಾರೆ. ಜಾತಿಯಲ್ಲಿ ಇವರು ಭೇದವಿಲ್ಲದವರು. ಆದ್ದರಿಂದ ಪರಮೇಶ್ವರನಿಂದ ಎಲ್ಲಾ ತಂತ್ರಗಳೂ, ಬ್ರಾಹ್ಮಣರನ್ನುದ್ದೇಶಿಸಿಯೇ

ಸಿಲ್ಪಿಸಲ್ಪಟ್ಟಿರುತ್ತದೆ. (ಯಾವರೀತಿ ವೈದಿಕರಿಗೆ ಅಗ್ನಿಷ್ಟೋಮದಲ್ಲಿ ಸೋಮ ಪಾನವು, ಸೌತ್ರಾಮಣಿಯೆಂಬ ತಕ್ಕ ಯಾಗದಲ್ಲಿ. ಸುರಾಪಾನವು, ಪಿತೃಕಾರ್ಯಗಳಲ್ಲಿ ಮಾಂಸ ಭಕ್ಷಣವೂ, ಹೇಗೇ ಶ್ರುತಿ ಸ್ಮೃತಿ ವಿಹಿತವಾದುವುಗಳೋ, ಅದೇ ಪ್ರಕಾರವಾಗಿ, ಶಕ್ತಿಪೂಜೆ ಎನ್ನುವ ಯಾಗಕಾಲವಲ್ಲದ ಸಮಯದಲ್ಲಿ ಗ್ರಹಿಸ ಕೂಡದೆಂತ ಶ್ರೀ ಪರಮೇಶ್ವರನಿಂದ ಹೇಳಲ್ಪಟ್ಟದೆ. ಮಕಾರ ಪಂಚಕ ವೆಂದರೆ:—ಮತ್ಸ್ಯ-ಮೀನು, ಮಾಂಸಮದ್ಯವು (ಸುರಾ) ಮುದ್ರಾ, ಮೈಥುನವು, ಸಂಸ್ಕಾರ ವಿಲ್ಲದೇ (ಮಾಡದೇ) ಸುರಾಪಾನವು ಕೂಡದೆಂತಲೂ. ಆತ್ಮಾರ್ಥವಾಗಿ ಮಾಂಸ ಭಕ್ಷಣವು ಕೂಡದೆಂತಲೂ, ಬಲಾತ್ಕಾರವಾಗಿ ಮೈಥುನವು (ಸಂಭೋಗವು) ಕೂಡದೆಂತಲೂ ಇವರುಗಳ ಮತವು. ಆದ್ದರಿಂದ ಮಕಾರ ಪಂಚಕವು, ಯಾಗ ಕಾಲದಲ್ಲಿಯೂ, ಮತ್ತು ಸಕಲ ತಂತ್ರಗಳಲ್ಲಿಯೂ ವಿಹಿತ ವೆಂದು ಹೇಳುತ್ತಾರೆ.

ಅತಃ ಕೌಲಾದಿ ಮಾರ್ಗಾಃ ಪರಮೇಶ್ವರೇಣ ಶ್ರುತ್ಯವಿರೋಧೇನ ಸೂಚಿತಾಃ॥ ತಥಾಶ್ರುತಯೋಪಿ॥ ಇದಂತೇ ಪಾತ್ರಂ ಸನವಿಷಾದಾಚನಾಂ ಪಿಬವಾ ಸೋಮಮೇನಂ ಶತಕ್ರತೋ। ಅಥಾಸ್ಮೈ ಸುರಾಕಂ ಸಮಾದಧಾತಿ॥ ಸ್ವಾದಿಷ್ಟಯಾ ಮದಿಷ್ಟಯಾ ಪವಸ್ವ ॥ ಸೋಮಧಾರಯಾ । ಅತಿಪ್ರೇಹಿ ದಕ್ಷಿಣತೋ ಭವ ಮನ್ಯೋ ವೃತ್ರಾಣಿ ಜಂಘನಾವಭೂರಿ॥ ಇತ್ಯಾದಯೋ ಬಹುಶ್ರುತಯೋ ಸ್ಮಿನ್ನರ್ಥೇ ಪ್ರಮಾಣಭೂತಾಸ್ಸಂತಿ॥

ತಾ॥ ಯಾಗ ಕಾಲದಲ್ಲಿ ಮಕಾರ ಪಂಚಕವನ್ನು ಗ್ರಹಿಸಬೇಕೆಂತ ಹೇಳತಕ್ಕ ವಿಷಯದಲ್ಲಿ (ಅರ್ಥದಲ್ಲಿ) ಅನೇಕ ಶ್ರುತಿಗಳು ಪ್ರಮಾಣಗಳಾಗಿರುತ್ತವೆ. ಆದ್ದರಿಂದ ಪರಮೇಶ್ವರನು ಎಲ್ಲಾ ತಂತ್ರಗಳನ್ನೂ ಬ್ರಾಹ್ಮಣರನ್ನುದ್ದೇಶಿಸಿ ಹೇಳಿದ್ದಾನೆ.

ತಂತ್ರಾಣಾಮಧಿಕಾರಿ ನಿಬಂಧನಸ್ತು ಆಸವಕಲ್ಪಾಸ್ಥಿತಾನ್ ಬ್ರಾಹ್ಮಣಾನುದ್ದಿಶ್ಯೋಕ್ತಂ। ಯಥಾ ಏಕಸ್ಯ ಗ್ರಾಮಸ್ಯ ಬಹವೋ ಮಾರ್ಗಾಸ್ಸಂತಿ। ತೇಷು ರುಚಿವೈಚಿತ್ರ್ಯಾದ್ಯಸ್ಯ ಯಸ್ಮಿನ್ ಮಾರ್ಗೇಭಿರುಚಿಸ್ತಸ್ಮಿನ್ ಮಾರ್ಗೇಣ ಸಂಗಚ್ಛತಿ। ಯಥಾಗ್ನಿಷ್ಟೋಮಾದೌ ಪಶುಹಿಂಸಾ ಸಹ ಮಾನಾಃಶ್ರುತಿ ಚೋದಿತ ಮಪಿಕೇಚಿದ್ಭೂತಾನು ಕಂಪಯಾ ಪಿಷ್ಟಪಶುಂ ಕೃತ್ವಾಯಜಂತಿ।

ತನ್ವ ದತ್ರಾಪಿ ॥ ವೈದೀಕಾನಾಮವೇವ ವಿಹಿತಕರ್ಮಾಚರಣಶೀಲಿನಃ-
ಅತಃ ಕೌಲಾನ್ಯಾ ಅಪಿ ವೈದಿಕಾ ಏವೇತಿ.

ತಾ॥ ತಂತ್ರಗಳಲ್ಲಿ ನಿಬಂಧನೆಗಳು ಯಾತಕ್ಕಾಗಿ ಹುಟ್ಟಿರುತ್ತದೆಯೆಂದ ರೆ:—ಆಸವವನ್ನು ಪ್ರತ್ಯಕ್ಷವಾಗಿ ಗ್ರಹಿಸದೇ ಇರತಕ್ಕವರ ಅಭೀಷ್ಟವನ್ನು ಗ್ರಹಿಸತಕ್ಕದ್ದು. ಅಂದರೆ ಅವರುಗಳು ಆಸವ ಪ್ರತಿಸಿಧಿಯಾಗಿ (ನಡೆಯಬೇಕೆಂತ) ಮಾಡಬೇಕೆಂದು ಭಾವವು. ಯಾವ ರೀತಿ ಪಶು ಹಿಂಸೆಯನ್ನು ಸಹಿಸದೇ ಇರತಕ್ಕವರು ( ಅದ್ವೈತರು ) ಪಿಷ್ಟಪಶುವನ್ನು ಮಾಡಿ ಯಜ್ಞಪೂರ್ತಿಯನ್ನು ಮಾಡುತ್ತಾ ಇದ್ದಾರೋ , ಅದೇ ರೀತಿ ಎಂತ ತಿಳಿಯಬೇಕು, ವೈದಿಕವೆಂದರೆ ವೇದದಲ್ಲಿ ಹೇಳಿದ ಪ್ರಕಾರ ಆಚರಿಸುವರು ಆದ್ದರಿಂದ ಕೌಳಾದಿಗಳು ,ಬ್ರಾಹ್ಮಣರು ವೈದೀಕರೇ ಎಂದು ಹೇಳಿದ್ದಾರೆ.

" ಸವ್ಯಾಪಸವ್ಯ ಮಾರ್ಗವಪಿ ವೈದೀಕ ವಿಷಯೌ ॥ ತತ್ರ ಸವ್ಯ ಮಾರ್ಗೋ ಶೀಘ್ರ ಮುಕ್ತಿದಃ । ಅಪಸವ್ಯ ಮಾರ್ಗಃ ಕಿಂಚಿದ್ವಿಲಂಬಕಾರಕಃ ॥ ತಥಾ ಚೋಕ್ತಂ ಕಾಳಿಕಾ ಪುರಾಣೇ ॥ ಚಿರೇಣ ಲಭತೇ ಮೋಕ್ಷಂ ವಾಮೇನ ತ್ರೈ ಪುರೋನರಃ। ಋಣಶೋಧನಜೈಃ ಪಾಸೈರಾಕ್ರಾಂತತ್ವೇನ ಭೈರವಿ ॥ ಇಹಲೋಕೇ ಸುಖೈಶ್ವರ್ಯ ಯುಕ್ತಸ್ಸ್ವತ್ರ ವಲ್ಲಭಃ ॥ ಕಿಂತುಯಃ ಪೂಜ ಕೋವಾಮಃ ಸೊನ್ಯಸ್ಯಾಃ ಪರಿಲೋಪಕಃ । ಸರ್ವಾಶಾಪೂರಕಂ ಯಸ್ಮಾದಕ್ಷಿಣ ಸ್ತತ ಉತ್ತಮ ॥ ಇತಿ ॥ ಸವ್ಯೋದಕ್ಷಿಣಮಾರ್ಗಃ ॥ ಅಪಸವ್ಯ
ಸ್ತು ವಾಮಃ ॥ ದ್ವಾವಪಿ ವೈದಿಕ ವಿಷಯಾವೇವ ॥

ತಾ ॥ ಸವ್ಯಾಪಸವ್ಯ ಮಾರ್ಗದ್ವಯಗಳೂ , ವೈದೀಕರಿಗೋಸ್ಕರವಾಗಿ ಏರ್ಪಟ್ಟಿರುತ್ತದೆ. ಆವುಗಳಲ್ಲಿ, ಸವ್ಯ ಮಾರ್ಗವು ಶೀಘ್ರ ಮುಕ್ತಿಪ್ರದವು- ಅಪಸವ್ಯವಾದ ವಾಮಮಾರ್ಗದಲ್ಲಿ ಋಣತ್ರಯ ಪಾತಕ ವಿರೋಣದ್ದರಿಂದ ಸ್ವಲ್ಪ ವಿಳಂಬವೇ ( ನಿಧಾನ ) ಹೊರತು ಎರಡು ಮಾರ್ಗಗಳೂ ವೈದಿಕವೆಂತ ಕಾಳಿಕಾದಿ ಪುರಾಣ ವಚನಗಳನ್ನು ಪ್ರಮಾಣವಾಗಿ ಹೇಳುತ್ತಾಇದ್ದಾರೆ. ಸವ್ಯವು ದಕ್ಷಿಣ ಮಾರ್ಗವಾಗಿಯೂ; ಅ ಪ ಸ ವ್ಯ ವು ವಾಮಮಾರ್ಗವಾಗಿಯೂ ಇರುತ್ತವೆ:

" ನ ಚೈವಂ ಸತ್ಯಾನುಷ್ಠಾನತೋಪಿ ಕಲಿನೇ ಮೋಕ್ಷಾಂಶೇತಿ ವಿಲಂಬಿತ ಸಾಧನೇ ಕಥಂ ಶಿಷ್ಟಾನಾಂ ವಾಮ ಮಾರ್ಗೇ ಪ್ರವೃತ್ತಿ ರಿತಿ ವಾಚ್ಯಂ | ಐಹಿಕಾನಾಮುಚ್ಚಾವಚ ಫಲಾನಿಮಿಹೈವಜನ್ಮನಿ ಭೋಗಲಿಪ್ಸಯಾ ಮೋಕ್ಷೇ ಸ್ವಲ್ಪ ವಿಲಂಬಸ್ಯ ಸೋಢವ್ಯತ್ವಾತ್| ಭುಕ್ತಿ ಮುಕ್ತಿ ಪರತ್ವೇನ ವೈಷಯಿಕ ಶಿಷ್ಟಾನಾಂ ವಾಮಮಾರ್ಗೇ ಪ್ರವೃತ್ತಿಃ | ಐಹಿಕ ಭೋಗವಿರಕ್ತ ಶಿಷ್ಟಾನಾಂತು ಮೋಕ್ಷ ವಿಲಂಬಸ್ಯಾ ಸೋಢವ್ಯತ್ವಾದ್ದಕ್ಷಿಣಮಾರ್ಗೇ ಪ್ರವೃತ್ತಿರಿತಿ ವಿವೇಕಃ|| " ಊರ್ಧ್ವಾಧಸ್ಸ್ರೋತೋವಿಭಾಗ ನಿಬಂಧನಂತು ವೈದಿಕೈರ್ನಿಗ ಮಾಗಮೋಕ್ತ ವಿಧಾನೇನ ಶೂದ್ರೈಃ ಕೇವಲಾಗಮೋಕ್ತ ವಿಧಿನಾ ಸರ್ವೋಪ್ಯನುಷ್ಠಾನ ಕಲಾಪೋ ವಿಧೇಯ ಇತಿ ವಿವೇಕಾರ್ಥ ಮುಕ್ತಮ್ || ಅತ ಸರ್ವ ತಂತ್ರೇಷು ವೈದಿಕಾನಾ ಮಧಿಕರೋಸ್ತಿ "

ತಾ|| ವಾಮಾಚಾರವೂ ವೈದೀಕವೇ ಆದಾಗ್ಯೂ ಆಚಾರವು ಕಾಠಿಣ್ಯ ವಾದದ್ದು. ಮೋಕ್ಷವು ವಿಳಂಬವಾದರೆ ಶಿಷ್ಟ ಜನರು ಯಾವರೀತಿ ಪ್ರವೇಶಿ ಸುನರೆಂತ ವಿಚಾರಿಸಕೂಡದು. ವೈದಿಕರಲ್ಲಿ ಕೆಲವು ಜನರು ಮೋಕ್ಷವಿಳಂಬ ನಕ್ಕೆ ಸಹಿಸದೇ ಇರತಕ್ಕವರು ದಕ್ಷಿಣಾಚಾರವನ್ನು ಅವಲಂಬಿಸಿರುವರೆಂತಲೂ ಇನ್ನೂ ಕೆಲವರು ಮೋಕ್ಷವಿಳಂಬನಕ್ಕೆ ಸಹಿಸಿ, ಈ ಜನ್ಮದಲ್ಲಿಯೇ ಸಕಲ ಭೋಗಗಳನ್ನು ಅನುಭವಿಸಬೇಕೆಂತ, ವಾಮಾಚಾರವನ್ನು ಅವಲಂಬಿಸಿರುವ ರೆಂತಲೂ, ಆದ್ದರಿಂದ ವೈದೀಕರಿಗೆ ಸಕಲ ತಂತ್ರಗಳಲ್ಲಿಯೂ ಅಧಿಕಾರವಿರುತ್ತದೆ ಎಂತಲೂ ಅವರ ಮತವು. ಇದೂ ಅಲ್ಲದೇ,

" ಮೋಹಾದ್ದ್ವಿಜಸ್ಸುರಾಂ ಪೀತ್ವಾರೌರವಂ ನರಕಂ ವ್ರಜೇದಿತ್ಯತ್ರ ಶಾಸ್ತ್ರಾರ್ಥಾ ಪರಿಜ್ಞಾನಾದಿತಿ ಮಂತವ್ಯಂ "

ತಾ|| ಬ್ರಾಹ್ಮಣನು ಪ್ರಮಾದವಶದಿಂದಲಾಗಲೀ, ಮೋಹದಿಂದಲಾಗಲಿ ಸುರಾಪಾನವನ್ನು ಮಾಡಿದ್ದಾದರೆ ರೌರವಾದಿನರಕವನ್ನು ಹೊಂದುವನೆಂಬ ವಚನಕ್ಕೆ ಪೂರ್ವ ಪಕ್ಷಕಾರರು ಹೇಳುವುದು ಏನೆಂದರೆ, ಆ ವಚನಗಳಲ್ಲಿ ಶಾಸ್ತ್ರ ಗಳ ಅರ್ಥಜ್ಞಾನವಿಲ್ಲದೇ ಅಂದರೆ, ದೇವೀಯಾಗಕಾಲದಲ್ಲಿ ದೋಷವಿಲ್ಲವೆಂತ ಲೂ, ಇತರತ್ರ ಅಂದರೆ ಸ್ವೇಚ್ಛೆಯಾಗಿ ಸುರಾಪಾನವನ್ನು ಮಾಡಕೂಡದೆಂತ

ಲೂ ಇವರ ಮತವು ಎಂದು ಪೂರ್ವ ಪಕ್ಷವಚನವು. ಮತ್ತು

" ಸ್ನಾನವ ಕಲ್ಪಾನುಕಲ್ಪಯೋ ಸ್ತುಲ್ಯಫಲಂ ಚೇತ್ತ್ರರ್ಹಿ ಅನು ಕಲ್ಪ ಏವ ಶ್ರೇಯಾನಿತಿ ಚೇತ್ತ್ರದ ಭಾವೇನು ಕಲ್ಪಃ॥ ನಿಘಂಟು॥ " ಮುಖ್ಯಸ್ಯಾತ್ ಪ್ರಥಮಃ ಕಲ್ಪೋನು ಕಲ್ಪಂತತೋಧಮ " ॥ ಇತ್ಯಮರಕೋಶಾತ್ , ಅನುಕಲ್ಪೋಧಮಃ ॥ ತದುಕ್ತಂ ಕುಲಾರ್ಣವೇ॥ ಶ್ಲೋ ॥ ಮಧ್ವಾಭಾವೇತು ವಟಕಂ ಜಲೇ ಸಂಲೋಢ್ಯತರ್ಪಯೇತ್। ಗುಡಮಿಶ್ರೇಣತಕ್ರೇಣ ತಥಾಚ ಮಧುಭಾಜಿಸಾ । ಸೌವೀರೇಣಾ ಥವಾಕುರ್ಯ್ಯಾ ದೇತತ್ಕರ್ಮ ನಲೋಪಯೇದಿತಿ ॥ ಪ್ರಮಾದಾದ್ಯದಿ ಲುಪೇತ ದೇವತಾ ಶಾಪಮಾಪ್ನುಯಾದಿತ್ಯಕರಣೇ ಪ್ರಾಯಶ್ಚಿತ್ತ ಶ್ರವಣಾತ್ ॥ " ತಥಾಚ ಭೈರವತಂತ್ರೇ " ।

ಶ್ಲೋ। ಮಧು ಮಾಂಸಂವಿನಾದೇವಿ ಕುಲಪೂಜಾಂ ಸಮಾಚರೇತ್ । ಜನ್ಮಾಂತರ ಸಹಸ್ರಸ್ಯ ಸುಕೃತಂ ತಸ್ಯ ನಶ್ಯತೀತಿ ।। " ಅತೋ ಮುಖ್ಯ ಏವಾಸವಕಲ್ಪಃ ಕಿಂಚ ಮುಖ್ಯ ಕಲ್ಪಾಭಾವೇ ಕರ್ಮ ನೈಷ್ಫಲ್ಯಂಚ॥ " ಕುಲಾರ್ಣವೇ " ॥ ಶ್ಲೋ॥" ಶೈವೇಚ ವೈಷ್ಣವೇ ಶಾಕ್ತೇ ಸೌರೇ ಗಾಣಾಪದರ್ಶನೇ (ದರ್ಶನೆ) ಬೌದ್ಧೇ ಪಾಶುಪದೇ ಸಾಂಖ್ಯೇಮತೇ ಕೌಲಮುಖೇ ತಥಾ ॥ ಸದೃಕ್ಷ ವಾಮಸಿದ್ಧಾಂತೆ ವೈದಿಕ್ಯಾದಿಷು ಪಾರ್ವತಿ (ಪಾರ್ವತಿ) ವಿನಾಳಿ ಪಿಶಿತಾಭ್ಯಾಂತು ಪೂಜಿತಂ ನಿಷ್ಫಲಂ ಭವೇದಿತಿ " ॥ ಏತೇನ ದೇವತಾ ಪೂಜಾದೌ ಸುರಾಯಃ ಪ್ರಾಶಸ್ತ್ಯ ಮುಕ್ತಂ

ತಾ॥ ಮತ್ತು " ಸುರ " ಕ್ಕೆ ( ಮದ್ಯ ) ಪ್ರತಿನಿಧಿಯಾಗಿ ಇತರ ದ್ರವ್ಯ ಗಳಿಂದ ಪೂಜಾ ಕಲಾಪವನ್ನು ನಡೆಸಿದಲ್ಲಿ ಸಮಾನ ಫಲವೆಂತ ಹೇಳಿದರೆ ಮು ಖ್ಯವಾದ ಪದಾರ್ಥವು ಸಿಕ್ಕದಿದ್ದಾಗ (ಅಭಾವದಲ್ಲಿ) ಪ್ರತಿನಿಧಿ ಪದಾರ್ಥವಾದ "ಸುರ" ದಿಂದಲೇ ಪೂಜೆಯನ್ನು ಮಾಡಬಹುದೆಂತಲೂ, "ಸುರ" ಸಿಕ್ಕದಿದ್ದಾಗ ಆಲದಹಣ್ಣಿನ ರಸಾಯನದಿಂದಲಾಗಲೀ, ಬೆಲ್ಲವು ಮಿಶ್ರವಾದ ಮಜ್ಜಿಗೆ ಇಂದ ಲಾಗಲೀ, ಮಧ್ಯ ಭಾಂಡದಲ್ಲಿರತಕ್ಕ ಜಲದಿಂದಾಗಲೀ, ಸೌವೀರವಾಗಲೀ "ಸೋಮ" ವು ಇಡತಕ್ಕ ಪಾತ್ರೆಯಲ್ಲಿಯ ಜಲದಿಂದಲಾಗಲೀ, ಪೂಜೆಯನ್ನು

ಮಾಡಬೇಕೇ ವಿನಹಾ ಕರ್ಮಲೋಪವನ್ನು ಮಾಡಬಾರದೆಂತ " ಕುಲಾರ್ಣವ" ವಚನವು. ಮುಖ್ಯವಾಗಿ ಸುರಾ ಮಾಂಸಾದಿಗಳಿಂದ ಪೂಜೆಯನ್ನು ಮಾಡ ಬೇಕೆಂದು ವಿಧಿಸಿರೋಣವು ವ್ಯರ್ಥವೆಂದು ಇವರುಗಳ ಅಭಿಪ್ರಾಯವು. ಮತ್ತು ದೇವತಾ ಪೂಜಾದಿಗಳಲ್ಲಿ "ಸುರಾ" ಪ್ರಾಶಸ್ತ್ಯವು ಬಹುವಾಗಿ ಹೇಳಲ್ಪಟ್ಟಿ ರುತ್ತದೆ.

" ಅತ ಏವ ದತ್ತಾತ್ರೇಯಾದಿಭಿಃ ಪೀತಃ॥ ತದುಕ್ತಂ ಮುಂದ ಮಾಲಾಯಾಂ॥ ಶ್ಲೋ॥ ದತ್ತಾತ್ರಯೇಣ ಮುನಿನಾ ವಿಶ್ವಾಮಿತ್ರೇಣ ಧೀಮತಾ। ಪರಾಶರೇಣ ಮುನಿನಾನಿಪಿತಾವಾರುಣೀಕಿಲೇತಿ॥ ॥ಕಂಚ॥ ತದುಕ್ತಂ ಕುಲಾರ್ಣವೇ॥ ಬ್ರಹ್ಮ ವಿಷ್ಣು ಮಹೇಶಾದಿ ದೇವತಾ ಮುನಯಂತಥಾ ಕುಲಧರ್ಮ ಪರಾದೇವಿ ಮನುಷ್ಯೇಷು ಚಕಾಕದೇತಿ॥

ತಾ॥ ಆದ್ದರಿಂದ ದತ್ತಾತ್ರೇಯರು, ವಿಶ್ವಾಮಿತ್ರರು, ವಶಿಷ್ಠ ಪರಾಶ ರಾದಿಗಳು. ಬ್ರಹ್ಮ, ವಿಷ್ಣು , ರುದ್ರ ,ಈಶ್ವರರು, ಇವರೆಲ್ಲರೂ ಕೌಳಾಚಾರವಂ ತರಾಗಿ ಇದ್ದಾರೆಂತಲೂ, ಹಾಗೂ, ಸುರಾಪಾನವನ್ನು ಮಾಡಿದವರೆಂತಲೂ, ಹೇಳಲ್ಪಟ್ಟಿರುತ್ತವೆಯಾದ್ದರಿಂದ "ಸ ೭" ಪ್ರಶಸ್ತವೆಂತಲೂ ಮನುಷ್ಯರು ಈ ವಿಚಾರದಲ್ಲಿ ಅಕ್ಷಮ್ಯರೆಂತಲೂ ವಚನಾಭಿಪ್ರಾಯವು.

"ಭವತು" ಪಾನಂ ಕಿಮರ್ಥಮಿತಿಚೇನ್ಮಂತ್ರ ಸ್ಫುರಣಾರ್ಥಂ । ಮನೋ ನಿಶ್ಚಯಾರ್ಥಂ। ಅಜ್ಞಾನ ನಿವೃತ್ಯರ್ಥಂಚ । ತದುಕ್ತಂ ಕುಲಾ ರ್ಣವೇ " ಭವನಾಶ ನಿವೃತ್ಯರ್ಥ ಮಂತ್ರೀಪಾನಂ ಸಮಾಚರೇದೀತಿ। ಶಾಸ್ತ್ರೋಕ್ತ ಸುರಾಪಾನಂ ಮಾಂಸ ಭಕ್ಷಣ ಪರದಾರಾಗಮನಾದಿ ಸ್ವೇಷ್ಟ ಭುಕ್ತಿಶ್ಚಾಸ್ಮಿನ್ಮತೇ ಸಂಭವತಿ ॥ ತದುಕ್ತಂ ರುದ್ರಯಾಮಳೀ ಶ್ಲೋ ॥ ಯತ್ರಾಸ್ತಿ ಮೋಕ್ಷೋನಚತತ್ರ ಭುಕ್ತಿರ್ಯತ್ರಾಸ್ತಿ ಭುಕ್ತೀನ್ನ ಚತತ್ರಮುಕ್ತಿಃ ॥ ಶ್ರೀ ಸುಂದರೀಲಾಲಸ ತತ್ಪರಾಣಾಂ ಭುಕ್ತಿಶ್ಚ ಮುಕ್ತಿಶ್ಚ ಕರಸ್ಥ ಏವ॥ ಭೋಗ ಮೋಕ್ಷಪ್ರದಂ ಕೌಲಮಿತಿಚ। ಅತಸ್ಸರ್ವೈರುಪಾಸಕೈಃ ಕೌಲಮಾರ್ಗಂ ಏವ ವ್ಯಗ್ರಸ್ಸೇವ್ಯಶ್ಚ ನಾನ್ಯ ಇತಿ ವದಂತಿ "

ತಾ॥ ಬ್ರಹ್ಮಾದಿ ದೇವತೆಗಳು ವಶಿಷ್ಠಾದಿ ಋುಷಿಗಳು ಸಮ್ಮತಿಸಿರೋಣ ದ್ದರಿಂದ, ಸುರ, ಶ್ರೇಷ್ಠವಾದದ್ದೆಂತ ಹೇಳಿದ್ದಾರೆ. ಹೌದು "ಸುರ" ಉತ್ತಮ ವಸ್ತುವು ದೇವತಾ ಪ್ರೀತಿ ಆಗಲಿ, ಪಾನವೇತಕ್ಕಾಗಿ ಮಾಡಬೇಕೆಂತ ಕೇಳಿದರೆ ಮಂತ್ರ ಸ್ಪರಣಾರ್ಥವಾಗಿಯೂ, ಮನೋನಿಶ್ಚಯಾರ್ಥವಾಗಿಯೂ ಅಜ್ಞಾನ ನಿವೃತ್ತಿಗೋಸ್ಕರವೂ, ಉಪಾಸಕರು ಸುರಾಪಾನವನ್ನು ಮಾಡಬೇಕೆಂತ ಕುಲಾರ್ನವ ವಚನ ವಿಧಿಶಾಸ್ತ್ರದಲ್ಲಿ ಹೇಳಿರತಕ್ಕ, ಸುರಾಪಾನ, ಮಾಂಸ ಭಕ್ಷಣ , ಪರ ಸ್ತ್ರೀ ಸಂಭೋಗಗಳು, ಶ್ರೀ ವಿದ್ಯೋಪಾಸಕರಿಗೆ ( ಕೌಳರಿಗೆ ) ಉಂಟಾಗಿರೋಣವು (ನಿರ್ಣಯವಾಗಿರೋಣವು) ಕೇವಲ ಭುಕ್ತಿ ಮಾತ್ರವೇ, ಹೊರ್ತು ಮುಕ್ತಿಗಾಗಿ ಅಲ್ಲ. ಹಾಗೂ ಇವರಿಗೆ (ಕೌಳರಿಗೆ) ಯಾವಾಗಲು ಮುಕ್ತಿ ಆಗಲಾರದು, ಕೇವಲ ಮುಕ್ತಿಮಾರ್ಗವಾದ, ಸಮಯ ದಕ್ಷಿಣಾ ಚಾರಗಳಲ್ಲಿ ಭುಕ್ತಿ ಹಾಗೂ ಸ್ವೇಚ್ಛಾ ಚಾರಗಳು ಇಲ್ಲ. ಆದ್ದರಿಂದ ಕೌಳ ಮತದಲ್ಲಿ ಭುಕ್ತಿ ಮುಕ್ತಿ ಎರಡೂ ಇದೆಯೆಂದು ರುದ್ರಯಾಮಳ ವಚನಗಳು ಇರುವುದಾಗಿಯೂ ಆದ್ದರಿಂದಲೇ ಉಪಾಸಕರೆಲ್ಲರೂ ಈ ಕೌಳಮತವನ್ನೇ ಅವಲಂಬಿಸುತ್ತಾ ಇರುವುದಾಗಿಯೂ ಇವರುಗಳು ಹೇಳುತ್ತಾ ಇದ್ದಾರೆ.

ಇದುವರಿವಿಗೂ ವಾಮ, ಕೌಳಚಾರಗಳ ಧರ್ಮಗಳಲ್ಲಿ ಪ್ರವೇಶಿಸಿರತಕ್ಕ ವೈದಿಕ ಬ್ರಾಹ್ಮಣರು ಹೇಳತಕ್ಕ ಪೂರ್ವ ಪಕ್ಷವು, ಅವರ ಅಭಿಪ್ರಾಯಗಳೂ ನಿರೂಪಿಸಲ್ಪಟ್ಟಿರುತ್ತದೆ.

ಇಲ್ಲಿಂದ ಮುಂದೆ ಈ ಕೌಳಾದಿ ಮತಗಳು, ವೈದಿಕವೂ, ಬ್ರಾಹ್ಮಣಾರ್ಹವೂ ಅಲ್ಲವೆಂತ ಗ್ರಂಥ ಕರ್ತರು ನಿರೂಪಿಸುತ್ತಾ ಇದ್ದಾರೆ.

ಅತ್ರೋಚ್ಯತೇ॥ "ಶೈವವೈಷ್ಣವ ಶಾಕ್ತಾದಯೋಪಿ ಬ್ರಾಹ್ಮಣಾಏ ವೇದಿಚೇತ್ಸಂತ್ಯಂ। ಪರಂತು। ತೇಷುಕೇಚಿಲ್ಲಿಂಗಧಾರಣ ಚಕ್ರಾಂಕಣ ಸುರಾಪಾನಾದಿಕಂ ಕರ್ಮಕುರ್ವಂತಿ। ತದವೈದಿಕಂ। ತದಕ್ತು ಮಾಚಾರ್ಯ ಭಗವತ್ಪಾದೈ: ॥ಶ್ಲೋ॥ ಅಚಕ್ರಾಂಕಮಲಿಂಗಾಂಕ ಮಸುರಾ ಮಾಂಸಭಕ್ಷಣಂ। ಅರಕ್ತಮಕಪಾಲಂಚ ಷಡಸ್ಮಾಕಂತು ಸಮ್ಮತ ಮಿತಿ॥ "ವೈಷ್ಣವೇಚಕ್ರಾಂಕಂ। ಶೈವೇಲಿಂಗಾಂಕಂ। ಶಾಕ್ತೇ ಸುರಾಪಾನಂ। ಗಾಣಾಪತ್ಯೇ ಮಾಂಸಭಕ್ಷಣಂ। ಸೌರೇ

ರಕ್ತತರ್ಪಣಂ। ಭೈರವೇಕಪಾಲಧಾರಣಂಚ। ವೇದವಿರುದ್ಧಂ। ಅಯಂ ಧರ್ಮಶ್ಶೂದ್ರಾದೀನಾಮೇವ ನದ್ವಿಜಾತೀನಾಂ। ತಥಾ ಚೋಕ್ತ ಸ್ಮೃತಿಷು ॥ಶ್ಲೋ॥ ತೌರ್ಯತ್ರಿಕಂ ತಪ್ತಮುದ್ರಾ ಲಿಂಗ ಧಾರಣ ಮಾಯುಧಂ। ಏಕ ಜಾತೇರಯಂ ಧರ್ಮೋ ನದ್ವಿಜಾತೇಃ ಕದಾ ಚನ। ಭಕ್ಷಯನ್ಮಾದಕಂ ಮಾಂಸಂಸ ಚಂಡಾಲ ಸಮೋ ದ್ವಿಜಃ। ಪಲಾಂಡು ಭಕ್ಷಣಸ್ಯಾಪಿ ಮಾಂಸಭಕ್ಷಣಚೇರತಿ। ಬ್ರಾಹ್ಮಣೋ ಮದಿರಾಂ ಪೀತ್ವಾ ಬ್ರಾಹ್ಮಣ್ಯಾದೇವಪ್ರೀಯತೇ॥ ಏಷ ಏವಹಿದೋಷ ಸ್ಯಾದ್ಗಾಂಧಾರೀ ಸತ್ರಭಕ್ಷಣೇ। ಧಾರಣಂತು ಕಪಾಲಸ್ಯರಕ್ತೇ ನೈವತು ತರ್ಪಣಂ। ಯಃಕುರ್ಯಾದ್ಬ್ರಾಹ್ಮಣೋ ಲೋಕೇ ಸಭವೇಲ್ಲೋಕದೂಷಕಃ। ಪತಿತಸ್ಯಾಂಟಲಸ್ತಸ್ಯ ಪ್ರಾಯಶ್ಚಿತ್ತಂನ ವಿದ್ಯತೇತಿ॥

ತಾ॥ ಪೂರ್ವಪಕ್ಷ ವಾದಿಗಳು ಹೇಳಿದ ಅಂಶಗಳು ಶಾಸ್ತ್ರ ವಿರುದ್ಧಗ ಳೆಂದು ಸಾದೃಶ್ಯ ಪ್ರಮಾಣಗಳಿಂದ ಖಂಡನೆಮಾಡಿ ತೋರಿಸುತ್ತಾ ಇದ್ದಾರೆ. ಶೈವ, ಶಾಕ್ತ ವೈಷ್ಣವಾದಿಗಳೂ, ಬ್ರಾಹ್ಮಣ (ರೆಂಬುವುದು) ರೆನ್ನುವುದು ನಿಜವೇ ಆಗಲೀ, ಆದರೆ ಅವರು ಗೌತಮಾದಿ ಶಾಪದಗ್ಧ ಬ್ರಾಹ್ಮಣರೆಂದು ತಿಳಿಯಲ್ಪಡುತ್ತದೆ. ಅವರಲ್ಲಿ ಕೆಲವರು, ಲಿಂಗಧಾರಣ, ಚಕ್ರಾಂಕಣ, ಸುರಾ ಪಾನ ಮಾಂಸ ಭಕ್ಷಣಾದಿಗಳನ್ನು ಮಾಡುತ್ತಾ ಇರೋಣದ್ದರಿಂದ, ಅವರು ಮಾಡತಕ್ಕ ಕಾರ್ಯಗಳು ವೇದವಿರುದ್ಧ ವಿಚಾರವಾಗಿರುತ್ತದೆ. ಲೋಕ ಗುರು ಗಳಾದ ಶ್ರೀ ಶಂಕರ ಭಗವತ್ಪಾದಾಚಾರ್ಯರ ಪ್ರಕಾರ ವಿರುದ್ಧವಾದುವುಗಳು, ವೈಷ್ಣವರ ಚಕ್ರಾಂಕಣವು ಶೈವರ ಲಿಂಗಧಾರಣೆಯು, ಗಾಣಾಪತ್ಯರ ಮಾಂಸ ಭಕ್ಷಣವು, ಸೌರಮತ (ದವರ) ಸ್ಥರ ರಕ್ತ ತರ್ಪಣವು. ಇವುಗಳು ವೇದ ವಿರುದ್ಧವಾದುವುಗಳು. ಈ ಧರ್ಮಗಳು ಏಕ ಜಾತಿಯಾದ ಶೂದ್ರರಿಗೆ ವಿಹಿತ ವಾದ ಧರ್ಮವೇ ಹೊರತು ದ್ವಿಜರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ನಿಂದ್ಯ ವಾದದ್ದು. ಮಾಂಸ ಭಕ್ಷಣವನ್ನು ಮಾಡಿದ ಬ್ರಾಹ್ಮಣನು ಚಂಡಾಲನಿಗೆ ಸಮಾನನೆಂತಲೂ, ಬೆಳ್ಳುಳ್ಳಿ ಮತ್ತು ನೀರುಳ್ಳಿ ಎರಡೂ ಮಾಂಸ ಸಮಾನ ದೋಷವುಳ್ಳದ್ದೆಂತಲೂ, ಬ್ರಾಹ್ಮಣನು ಮದ್ಯಪಾನವನ್ನು ಮಾಡಿದಲ್ಲಿ ಬ್ರಾಹ್ಮ

ಣ್ಯವು ಹೋಗುವುದು ಮತ್ತು ಬ್ರಾಹ್ಮಣ ಜಾತಿಯಿಂದ ಬಹಿಷ್ಕರಿಸಲ್ಪಡುತ್ತಾನೆಂತಲೂ ಮತ್ತು ಗಂಜಾ, ಅಫೀಮು ಮೊದಲಾದುವುಗಳನ್ನು ಸೇವಿಸುವಸಿಗೂ ಇದೇ ದೋಷವೂ, ಕಪಾಲ ಧಾರಣೆಯನ್ನೂ, ರಕ್ತವನ್ನು ತರ್ಪಣ ಮಾಡಿದ ಬ್ರಾಹ್ಮಣನು ಲೋಕ ನಿಂದಿತನೂ, ಬಹಿಷ್ಕರಿಸಲ್ಪಟ್ಟವನೂ ಹಾಗೂ ಇವರುಗಳು ಅತ್ಯಂತ ಪಾಪಿಗಳೂ ಆಗುವರು. ಶಾಸ್ತ್ರಗಳಲ್ಲಿ ಇವರುಗಳಿಗೆ ಪ್ರಾಯಶ್ಚಿತ್ತಾದಿಗಳಿಲ್ಲವು. ಚಕ್ರಾಂಕಣವಿಲ್ಲದ ವೈಷ್ಣವವೂ, ಲಿಂಗ ಧಾರಣವಿಲ್ಲದ ಶೈವವೂ, ಸುರಾಪಾನವಿಲ್ಲದ ಶಾಕ್ತವೂ, ಮಾಂಸ ಭಕ್ಷಣೆಯಿಲ್ಲದ ಗಾಣಾಪತ್ಯವೂ, ರಕ್ತ ತರ್ಪಣವಿಲ್ಲದ ಸೌಕರ‍್ಯ ಮತವೂ, ಕಪಾಲಧಾರಣೆಯಿಲ್ಲದ ಭೈರವ ಮತವೂ, ಇವುಗಳನ್ನು ಶ್ರೀ ಭಗವತ್ಪಾದಾಚಾರ್ಯರು ಸ್ಥಾಪಿಸಿದರು. ಇವು ವೇದ ಸಮ್ಮತವಾದುವುಗಳು.

"ಬ್ರಾಹ್ಮಣೇಷುತಪ್ತ ಮುದ್ರಾ ಧಾರಣಾದಿಕಂ ಯೇ ಕುರ್ವಂತಿತೇ ಗೌತಮು ಶಾಪವಗ್ಧ ಬ್ರಾಹ್ಮಣಾ ಇತಿ ಶಾಪಕಥನಾವಸರೇ ಪೂರ್ವ ಮೇವೋಕ್ತಂ ತತ್ರೈವಾವಧಾರ‍್ಯಂ। ಶೈವಾದಿ ಷನ್ಮತೇಷು ವೇದ ವಿರುದ್ಧಾಚಾರಶೀಲಿನೋ ನಾಮುಧಾರಕ ಬ್ರಾಹ್ಮಣಾಏವ ॥ತಥಾಚ॥ ಪಾಠಂ ಪರ್ಯಾಗತೋ ಏಷಾಂ ವೇದಸಂಪರಿ ಬ್ರಂಹ್ವಣಾಂ। ತೇ ಶಿಷ್ಟಬ್ರಾಹ್ಮಣಾ ಜ್ಞೇಯಾಃ ಶ್ರುತಿ ಪ್ರತ್ಯಕ್ಷ ಹೇತವಃ। ಇತಿ ವಶಿಷ್ಠ ಸೂತ್ರೋಕ್ತಂ ತದು ಪಾಸ್ತ್ಯಂ। ಸರ್ವಾಣಿ ತಂತ್ರಾಣಿ ಬ್ರಾಹ್ಮಣಾನಧಿಕೃತ್ಯ ಪರಮೇಶ್ವರೇಣ ನಿರ್ಮಿತ ಮಿತಿಯದುಕ್ತಂ ತದಪ್ಯಳೀಕಂ। ಶ್ರುತಿ ಸ್ಮೃತಿಷು ಸುರಾಪಾನಾದಿಕಸ್ಯ ಪ್ರಾಯಶ್ಚಿತ್ತ ಕಥನಾತ್ ॥ ತಥಾಚಶ್ರುತಿಃ। ಸುರಾಪಾನಾ ತ್ಪೂತೋಭವತಿ ॥ ಮನುರಪಿ॥ ಸುರಾಂಪೀತ್ವಾನ ರೋಮೋಹಾವಗ್ನಿಪರ್ಣಾಂ ಸುರಾಂ ಪಿಬೇತ್॥ ತಯಾಸ್ಯ ಕಾಯೇ ನಿರ್ದಗ್ಧೇ ಮುಚ್ಯತೇ ಕಿಲ್ಬಿಷಾತ್ತತಃ॥ ಯಕ್ಷರಕ್ಷ ಪಿಶಾಚಾನ್ನಂ ಮದ್ಯಂಮಾಸಂ ಸುರಾಸವಂ। ತದ್ಬ್ರಾಹ್ಮಣೇನ ನಾಪ್ತವ್ಯಂ ದೇವಾನಾಮನ್ನತಾಹವಿಃ॥ ಅಮೇಧ್ಯೇವಾಪತೇದ್ಯತ್ತು ವೈದಿಕಂವಾಪ್ಯುದಾಹರೇತ್ ॥ ಅಕಾರ‍್ಯ ಮನ್ಯತ್ಕುರ‍್ಯಾದ್ವಾ

ಬ್ರಾಹ್ಮಣೋಮದಮೋಹಿತಃ ॥ ಯಸ್ಯಕಾಯಗತಂ ಬ್ರಹ್ಮಾ ಸೀಮದ್ಯೇನಾಪ್ಲಾವ್ಯತೇ ಸಕೃತ್ । ತಸ್ಯನಾಸ್ತೀತಿ ಬ್ರಾಹ್ಮಣ್ಯಾಂ ಶೂದ್ರತ್ವಂಚ ಸಗಚ್ಛತೀತಿ ॥

ತಾ॥ ತಪ್ತ ಮುದ್ರಾಧಾರಣೆ, ಲಿಂಗಧಾರಣೆ, ಸುರಾಪಾನಾದಿಕಗಳನ್ನು ಮಾಡಿದವರು ಬ್ರಾಹ್ಮಣರೇ ಅಂದರೆ; ಅವರು ಗೌತಮ ಶಾಪದಗ್ಧ ಬ್ರಾಹ್ಮಣ ರೆಂದು ಹಿಂದೆ ಹೇಳಲ್ಪಟ್ಟಿರುತ್ತದೆ. ಶೈವಾದಿ ಆರು ಮತಗಳಲ್ಲಿಯೂ ವೇದ ವಿರುದ್ಧಾಚಾರ ಉಳ್ಳವರು, ನಾಮ ಮಾತ್ರ ಬ್ರಾಹ್ಮಣರೆಂದು ತಿಳಿಯುತ್ತದೆ. ವಂಶಪರಂಪರೆಯಾಗಿ ವೇದ ವಿಹಿತಾಚಾರ ನಿಷ್ಠರೂ, ವೇದದಲ್ಲಿ ಹೇಳಿವ ಧರ್ಮವನ್ನು (ಅನುಷ್ಠಿಸುವರು) ಉಳ್ಳವರೂ, ಶಿಷ್ಟಜನರೆಂತ, ವಶಿಷ್ಠ ಸಂಹಿತೆ ಯಿಂದ ತಿಳಿಯುತ್ತದೆ. ಆದ್ದರಿಂದ ಕೌಳಾದ್ಯಾಚಾರಗಳು ಬ್ರಾಹ್ಮಣರನ್ನು ಕುರಿತು ಉತ್ಪತ್ತಿಯಾಗಿರುತ್ತದೆಂದು ಹೇಳತಕ್ಕ ಮಾತು ಶುದ್ಧ ಸುಳ್ಳಾಗಿರು ತ್ತದೆ.

ಸಕಲ ತಂತ್ರಗಳೂ ಬ್ರಾಹ್ಮಣರನ್ನುದ್ದೇಶಿಸಿಯೇ ಪರಮೇಶ್ವರನು ಸೃಷ್ಟಿಸಿದ್ದಾನೆಂತ ಹೇಳತಕ್ಕದ್ದು, ಆಧಾರವಿಲ್ಲದ ಮಾತು. ವೇದ ವಿರುದ್ಧ ವಾದ ಸುರಾಪಾನವನ್ನು ಬ್ರಾಹ್ಮಣನು ಮಾಡಿದಲ್ಲಿ ಪ್ರಾಯಶ್ಚಿತ್ತವು ಹೇಳಲ್ಪ ಟ್ಟಿರೋಣದ್ದರಿಂದ, ಆ ರೀತಿ ಸುರಾಪಾನವು ಮಾಡತಕ್ಕದ್ದು (ಬ್ರಾಹ್ಮಣನಿಗೆ) ಮಹಾ ಪಾಪವೆಂದು ಶ್ರುತಿಗಳಲ್ಲಿಯೂ, ಮನ್ವಾದಿ ಸ್ಮೃತಿಗಳಲ್ಲಿಯೂ ಹೇಳಿ ರೋಣದ್ದರಿಂದ ಬ್ರಾಹ್ಮಣನು, ಸುರಾಪಾನ, ಮಾಂಸ ಭಕ್ಷಣವನ್ನು ಮಾಡಿ ದ್ದಾದರೆ ಪ್ರಾಯಶ್ಚಿತ್ತವು ಹೇಳಲ್ಪಟ್ಟಿರೋಣದ್ದರಿಂದ, ಕೌಳಾದಿ ಧರ್ಮಗಳುಳ್ಳ ತಂತ್ರಗಳು ಬ್ರಾಹ್ಮಣರಿಗೆ ಸೇರಿದ್ದಲ್ಲವೆಂತ ತಿಳಿಯಲ್ಪಡುತ್ತದೆ.

"ಮೋಹಾದ್ವಿಜಸ್ಸುರಾಂ ಪೀತ್ವೇತ್ಯತ್ರ ಶಾಸ್ತ್ರಾರ್ಥಾ ಪರಿಜ್ಞಾನಾದಿತಿ ಕಥಯಂತಿಕೌಲಾಃ । ಶಾಸ್ತ್ರಾರ್ಥಾ ಪರಿಜ್ಞಾನಂನಾಮ-ದೇವೀ ಪೂಜನೇ ಸುರಾಪಾನದೋಷೋನಾಸ್ತಿ ॥ ಇತರ ಕಾಲೇವೃಥಾ ಸುರಾಪಾನಂ ನಕುರ್ಯಾದಿತಿ ತೇಷಾಮಾಶಯಃ ॥ ಇದಂಚೇತ್॥ ॥ ಶ್ಲೋ ॥ ರಾಜ್ಞಿಕೇಪಶು ಹಿಂಸಾಚ ಸೌತ್ರಾಮಣ್ಯಾಂ ಸುರಾ ಗ್ರಹಾಃ ॥ ಮಧು ಪರ್ಕೇಗವಾಲಂ ಬೋನದುಷ್ಯತಿಕ ದಾಚನೇತಿ॥

“ ವಿಶೇಷೋಕ್ತ್ಯಾದಿಕಾನಾಮಾಗ್ನಿಷ್ಟೋಮಾದಿವಿಷಯೇ ಯಥೋಪಲಕ್ಷ್ಯತೇ ತಥಾಕೌಳಾನಾಮಪಿ ದೇವಪೂಜಾಯಾಂ ಮದ್ಯಪಾನಂ ನದುಷ್ಯತೀತ್ಯುಕ್ತಿ ಸಂತ್ರೇಷು ವಿನಾಶ್ರುತಿ ಸ್ಮೃತಿಷು ನೋಪಲಭ್ಯೇತ ॥ ಬ್ರಾಹ್ಮಣೇನ ಸದಾಪೇಯಮಿತಿ ಕುಲಾರ್ಣವಾದೌ ಕಥನಾತ್ ಸರ್ವದಾಪಾನ ಶೀಲಸ್ಯ ಬ್ರಾಹ್ಮಣ್ಯ ಮದೋನ್ಮತ್ತತ್ವಾ ದ್ವೈದಿಕ ಪರಿತ್ಯಾಗಾದಿ ದೋಷಸಂಭವತೀತಿ ॥ ಮನುಸ್ಮೃತ್ಯುಕ್ತತ್ವಾತ್ ॥ ಮಂತ್ರ ಸಂಸ್ಕಾರ ಬಲಾತ್ಕೌಲಾನಾಂ ತನ್ನಸಂಭವತೀತಿ ಚೇನ್ನ ॥ ಸುರಾಪಾನ ಧರ್ಮಾಃ ॥ ಶ್ಲೋ॥ ಮತ್ತಾ ಭ್ರಮಂತಿ ಗರ್ಜಂತಿ ಹಸಂತಿ ವಿವದಂತಿಚ । ರುದಂತಿ ಸ್ತ್ರೀಯ ವಿಭ್ರಂತೀತಿ ಕುಲಾರ್ಣವ ವಚನಾತ್ಯುರಾಕೃತ ಮದದೋಷಸ್ಯ ಕೌಳಾನಾಮಪಿ ದುರ್ನಿವಾರತ್ವಾದ ಬ್ರಾಹ್ಮಣಾಪತ್ತಿಃ ॥

ತಾ॥ “ ಮೋಹಾದ್ವಿಜಸ್ಸುರಾಂ ಪೀತ್ವಾ ” ಎನ್ನುವ ಪ್ರಾಯಶ್ಚಿತ್ತ ವಚನಕ್ಕೆ ಶಾಸ್ತ್ರಾರ್ಥವು ತಿಳಿಯದೇ ಇವರುಗಳು ಭ್ರಮೆಯನ್ನು ಹೊಂದಿದ್ದಾರೆಂತ ಈ ವಚನಕ್ಕೆ ವಾಸ್ತವವಾದ ಅರ್ಥವು. ದೇವಿಪೂಜೇ ವಿನಹಃ ಬ್ರಾಹ್ಮಣನು ಸುರಾಪಾನವನ್ನು ಮಾಡಕೊಡದೆಂತ ಕೌಳರ ಅಭಿಪ್ರಾಯವು. ಪಶುಹಿಂಸೆ ಸುರಾಪಾನವು, ಸ್ಮೃತಿಗಳಲ್ಲಿ ಬ್ರಾಹ್ಮಣನಿಗೆ ನಿಂದ್ಯವೆಂದು ಹೇಳಿದರೆ, ಯಜ್ಞದಲ್ಲಿ ಪಶುಹಿಂಸೆಯು, ಸೌತ್ರಾಮಣಿಯಲ್ಲಿ ಸುರಾಪಾನವೂ, ಮಧುಪರ್ಕದಲ್ಲಿ ಗವಾಲಂಬವು ವಿಹಿತಗಳೆಂದು ವಿಶೇಷ ವಚನಗಳಿರುತ್ತದೆ. ಆದ್ದರಿಂದ ವೈದೀಕರಿಗೆ ಯಜ್ಞದಲ್ಲಿ ಯಾವರೀತಿ ದೋಷವಿಲ್ಲವೋ , ಅದೇರೀತಿ ಕೌಳರಿಗೆ ದೇವೀಪೂಜೆಯಲ್ಲಿ ಸುರಾಪಾನವು ವಿಹಿತವೆಂದು ಹೇಳುವುದು ತಂತ್ರಗಳಲ್ಲಿ ವಿನಹಾ ಶ್ರುತಿ ಸ್ಮೃತಿಗಳಲ್ಲಿ ಬ್ರಾಹ್ಮಣನಿಗೆ ಸುರಾಪಾನವು ಹೇಳಲ್ಪಡಲಿಲ್ಲ. ಇದೂ ಅಲ್ಲದೇ ಬ್ರಾಹ್ಮಣನಿಂದ ಸರ್ವದಾ ಸುರಾಪಾನವು ಮಾಡಲ್ಪಡಬೇಕೆಂತ, ಕುಲಾರ್ಣವಾದಿ ತಂತ್ರಗಳಲ್ಲಿ ಹೇಳಿರೋಣದ್ದರಿಂದ ಆ ಪ್ರಕಾರವಾಗಿ ಸರ್ವದಾ ಸುರಾಪಾನವನ್ನು ಮಾಡತಕ್ಕ ಬ್ರಾಹ್ಮಣನು ಮದೋನ್ಮತ್ತನಾಗಿ, ಕೆಟ್ಟುಹೋಗುವನೆಂತಲೂ, ಹಾಗೂ ಶಿಷ್ಟರಾದ ವೈದೀಕರಿಂದ ಪರಿತ್ಯಜಿಸಲ್ಪಡುವನೆಂತಲೂ ಮತ್ತು ಮಹಾಪಾತಕ (ವೆಂತಲೂ) ವು ಸಂಭವಿಸುವದೆಂತಲೂ ಮನ್ವಾದಿ

ಸ್ಮೃತಿಗಳು ಹೇಳುತ್ತದೆಯಾದ್ದರಿಂದ ಸುರಾಪಾನಾದಿಗಳು ಬ್ರಾಹ್ಮಣನಿಗೆ ಕೂಡದೆಂತ ಸಿದ್ಧಾಂತವು. ಅದಕ್ಕೆ ಕೌಳರಿಗೆ ಮಂತ್ರ ಸಂಸ್ಕಾರಬಲದಿಂದ ಅಂಥಾ ದೋಷಗಳು ಸಂಭವಿಸುವುದಿಲ್ಲವೆಂತ ಇವರ ಮತವು. ಸಂಸ್ಕಾರದಿಂದ "ಸುರ" ದಲ್ಲಿ ಉಳ್ಳ ದುರ್ಗುಣಗಳು ದುರ್ನಿವಾರವೆಂತಲೂ, ಸುರಾಪಾನವನ್ನು ಮಾಡಿದವನು, ಮತ್ತನಾಗಿ ಭ್ರಮೆಯನ್ನು ಹೊಂದುವನಾಗುವನು. ಮತ್ತು ಗರ್ಜಿಸುವನು, ನಗುವನು, ವಿವಾದವನ್ನು ಮಾಡುವನು. ರೋದನವನ್ನು ಮಾಡುವನು, ಸ್ತ್ರೀಯರನ್ನು ಕೋರುವನು. ಈ ರೀತಿ ವಿಕಾರಗಳನ್ನು ಹೊಂದುವನು. ಈ ದುರ್ಗುಣಗಳು ಮಂತ್ರ ಸಂಸ್ಕಾರಗಳಿಂದ ಹೋಗುವುದಿಲ್ಲ. ಇದು ಕುಲಾರ್ಣವ ವಚನಗಳಾದ್ದರಿಂದ ಕೌಳರಿಗೆ ಕೂಡ, ಈ ದೋಷಗಳನ್ನು ನಿವಾರಿಸಿಕೊಳ್ಳಲು ಶಕ್ಯವಲ್ಲವು. ಬ್ರಾಹ್ಮಣ್ಯವು ಹಾನಿಯಾಗುತ್ತದೆ.

" ನನು ಸೌತ್ರಾಮಣ್ಯಾಂ ಸುರಾಗ್ರಹೇಯಥಾನ ದುಷ್ಯತಿ । ತಥೈವ
ದೇವಿಪೂಜಾಯಾಮಪಿಚೇನ್ನ । ಯಸ್ಮಿನ್ಯಸ್ಮಿ ಕರ್ಮಣಿಯಾಂ
ಯಾಂದೇವತಾ ಮುದ್ದಿಸ್ಯ ಯದ್ಯ ದ್ರವ್ಯಮುಚ್ಯತೆ–ತಸ್ಮಿಸ್ತಸ್ಮಿ
ಕರ್ಮಣಿ–ತಾಂತಾಂ ದೇವತಾಮುದ್ದಿಶ್ಯ- ತೈಸ್ತೈರ್ದವ್ಯೈರ್ಯಜೇನ್ನಾಸ್ಯ
ಥೇತಿ ಪೂರ್ವ ಮೀಮಾಂಸಾಯಾಂ ವ್ಯವಸ್ಥಾ ನಿರ್ಣಯಾತ್ತ
ಸ್ಯಾಮುಕ್ತ ದೇವತಾ ಪೂಜಾದಿ ಕರ್ಮಸುತತ್ಯಾದ್ರವ್ಯ ಮಾಗೀಕೃತ್ಯ।
ತತ್ರ ದ್ರವ್ಯಗ್ರಹಣಂ ಶೃತಿ ಸ್ಮೃತಿ ಮೀಮಾಂಸಾದಿ ವಿರುದ್ಧಂ ।
ಅಂತಃ ಸೌತ್ರಾಮಣ್ಯಾಮಿವ ಬ್ರಾಹ್ಮಣೈರ್ದೇವೀ ಪೂಜಾಯಾಂ
ಸುರಾನಗ್ರಾಹ್ಯೇತ್ಯುಚ್ಯತೇ ॥

ತಾ॥ ಅಯ್ಯಾ ! ಸೌತ್ರಾಮಣಿಯಲ್ಲಿ " ಸುರ " ಯಾವರೀತಿಯಲ್ಲಿ ಗ್ರಹಿಸಲ್ಪಟ್ಟಿರುತ್ತದೆಯೋ ಆ ರೀತಿಯಲ್ಲಿಯೇ ದೇವಿಪೂಜೆಯಲ್ಲಿ ಬ್ರಾಹ್ಮಣರಿಂದ "ಸುರ" ಯಾತಕ್ಕಾಗಿ ಗ್ರಹಿಸಕೂಡದೆಂದರೆ ಯಾವ ಯಾವ ದೇವತೆಗಳಿಗೆ ಯಾವ ಯಾವ ಕಾಲದಲ್ಲಿ ಯಾವ ಯಾವ ದ್ರವ್ಯಗಳು ಅರ್ಪಿಸಬೇಕೆಂತ ಹೇಳಲ್ಪಟ್ಟಿರುತ್ತದೆಯೋ, ಆಯಾ ದ್ರವ್ಯಗಳಿಂದ ಆಯಾ ಕರ್ಮಗಳನ್ನು ಮಾಡತಕ್ಕದ್ದು. ಎಂಬುದಾಗಿ ಪೂರ್ವ ಮೀಮಾಂಸದಲ್ಲಿ ವ್ಯವಸ್ಥೆಯಾಗಿರುತ್ತದೆ. ಅದ್ದರಿಂದ ಇತರ ಕಾಲದಲ್ಲ" ಸುರ" ಶ್ರುತಿ ಸ್ಮೃತಿ ಪೂರ್ವ ಮೀಮಾಂಸಗಳಲ್ಲಿ

ನಿಷೇಧಿಸಲ್ಪಟ್ಟಿರೋಣದ್ದರಿಂದ ಪಾತ್ರಾಮಣಿಯಲ್ಲಿಯುಂತೆ ದೇವಿಪೂಜೆಯಲ್ಲಿ ಬ್ರಾಹ್ಮಣರಿಂದ "ಸುರ" ಗ್ರಹಿಸಲ್ಪಡಕೂಡದು. ಅದು ಯಾತಕ್ಕೇದರೆ ಕೇಳು

ತಥಾಹಿ॥ ಶ್ರು ॥ ಹಿರಣ್ಯಪಾತ್ರಂ ಮಧೋಃ ಪೂರ್ಣಂದಧಾತಿ ॥
ಅಬಧ್ನಂಪಶುಂ ॥ ಸದ್ಯೋದೀಕ್ಷಯ ಇತ್ಯಾದಿ ಶ್ರುತಿಷು ॥ ಪರಿ
ಸೃತಂಝಷಮಾಜಂಪಲಂಚ ಭಕ್ತಾನಿಯೋನಿಸ್ಸ ಪರಿಷ್ಕೃತಾನಿ ॥
ನಿವೇದಯನ್ಸೀ ದೇವತಾಯೈ ಮಹತ್ಯೈ ಸ್ವಾತ್ಮೀಕೃತೇ ಸುಕೃತೀ
ಸಿದ್ಧಿಮೇತೀತಿ ॥ ತ್ರಿಪುರೋಪನಿಷದಿಚ ॥ ದೇವಿಪೂಜಾಯ
ಮಾಸವಸ್ಯ ಮುಖ್ಯತ್ವೇನೋಕ್ತತ್ವಾತ್ಕಥಂ ಶೃತ್ಯುಕ್ತದೋಷ ಇತಿ
ಚೇನ್ನ ॥ ಬ್ರಹ್ಮಣಾಶ್ರುತತ್ವಾಚ್ಛೃತಿರಿತ್ಯುಚ್ಯತೇ ॥ ಅತಸ್ಸಾ
ಸ್ವತಂತ್ರಾ ॥ ಪಾಂಡಿತ್ಯ ಬಲಾತ್ತಸ್ಯಾರ್ಥಸ್ವ ಸ್ವ ಬುಧ್ಯನು ಸಾರೇಣ
ವರ್ಣಿತಶ್ಚೇನ್ಮುಖ್ಯಾಮುಖ್ಯಾರ್ಥಂ ಪರಿಜ್ಞಾನಾಭಾವದ ಪ್ರಮಾ
ಣ್ಯಾಪತ್ತಿರ ಸತ್ಕರ್ಮ ಪ್ರವೃತ್ತಿಶ್ಚಸ್ಯಾತ್ ॥

ತಾ ॥ ಹಿರಣ್ಯಪಾತ್ರಂ, ಮಧೋರೀತಿ, ಅಬಧ್ನಂ, ಪುರುಷಂ ಪಶುಂ ಸದ್ಯೋದೀಕ್ಷಯ ನೀತಿ, ಪರಿಸೃತಂ ಝಷಮಿತೀಯ್ಯಾದಿ, ಮೊದಲಾದ ಶೃತಿಗಳಲ್ಲಿಯೂ, ತ್ರಿಪುರೋಪನಿಷದಾದಿಗಳಲ್ಲಿಯೂ, ದೇವೀಪೂಜೆಯಲ್ಲಿ "ಅಸಹಕ್ಕೆ" ಮುಖ್ಯತ್ವೇನ ಹೇಳಲ್ಪಟ್ಟಿರೋಣದ್ದರಿಂದ, ಶೃತಿಗಳಲ್ಲಿ ಹೇಳಿನ ದೋಷವು ಹೇಗೆ ಸಂಭವಿಸುತ್ತದೆಂತ ಕೇಳಕೂಡದು. ಯಾತಕ್ಕೆಂದರೆ, ಆದಿಯಲ್ಲಿ ಬ್ರಹ್ಮನಿಂದ ಕೇಳಲ್ಪಟ್ಟಿರೋಣದ್ದರಿಂದ "ಶೃತಿ" ಎಂದು "ವೇದವಾಕ್ಕು" ಹೇಳಲ್ಪಡುತ್ತಾ ಇದೆ. ಆದ್ದರಿಂದ ಶೃತಿ ಸ್ವತಂತ್ರ (ಉಳ್ಳದ್ದು) ವಾದದ್ದು ಪಾಂಡಿತ್ಯ ಬಲದಿಂದ ತಮ್ಮ ತಮ್ಮ ಇಷ್ಟಾನುಸಾರವಾಗಿ, ಶೃತಿಗಳಿಗೆ ಅರ್ಥವನ್ನು ಹೇಳಿದರೆ, ಮುಖ್ಯಾರ್ಥವನ್ನು ತಿಳಿಯಕೊಳ್ಳದೇಹೋದ ಪ್ರಮಾದ ದೋಷವೂ ದುಷ್ಕರ್ಮಗಳಲ್ಲಿ ಪ್ರವರ್ತಿಸುವಿಕೆಯೂ, ಸಂಭವಸುತ್ತದೆ.

ಅದಕ್ಕಾಗಿ ದಿವ್ಯದೃಷ್ಟಿಯಿಂದ ಶೃತಿಗಳ ವಾಸ್ತವಾರ್ಥವನ್ನು ನೋಡೋಣದ್ದರಿಂದ "ಋಷಿ" ಎಂದು ಅವರು ಕಂಡುಹಿಡಿದ ವಾಸ್ತವಾರ್ಥವನ್ನು

ಪುನಃ ಸ್ಮರಿಸೋಣದ್ದರಿಂದ "ಸ್ಮೃತಿ" ಎಂದು ಹೇಳಲ್ಪಟ್ಟಿರುತ್ತದೆ. ಅದಿಯಲ್ಲಿ ಋಷಿಗಳು ಶೃತ್ಯರ್ಥವನ್ನು ತಿಳಿದುಕೊಂಡು ಆ ಅರ್ಥವನ್ನು "ಸ್ಮೃತಿಗಳಾಗಿ ಪ್ರಕಾಶಪಡಿಸಿದರು. ಆದ್ದರಿಂದ ಶ್ರುತಿಗಳ ವಾಸ್ತವವಾದ ಅರ್ಥಗಳೇ ಸ್ಮೃತಿಗಳಲ್ಲಿ ಹೇಳಲ್ಪಡುತ್ತಾ ಇವೆ. ಆದ್ದರಿಂದ ಮೂಲ ಭೂತವಾದ "ಶ್ರುತಿ" ನಿರಾಂತಂಕವಾಗಿರುತ್ತದೆ. ಶ್ರುತ್ಯರ್ಥರೂಪವಾದ, ಮನ್ವಾದಿ ಸ್ಮೃತಿಗಳು ಪ್ರಮಾಣಗಳಾಗಿರುತ್ತವೆಂಬವ ನಿಶ್ಚಯದಿಂದಲೇನೇ ವೈದೀಕರಿಂದ ಸ್ಮೃತಿಗಳಲ್ಲಿ ಹೇಳಲ್ಪಟ್ಟಿರುವ ಧರ್ಮಗಳು ಆಚರಿಸಲ್ಪಡುತ್ತಾ ಇವೆ. ಆಧರ್ಮಗಳೂ ಸಹಾ ಯುಗ ಭೇದದಿಂದ ಬೇರೆ ಬೇರೆಯಾಗಿ ಗ್ರಹಿಸಲ್ಪಡಬೇಕಾಗಿರುತ್ತವೆ. ಕೃತಯುಗದಲ್ಲಿ ಮನ್ವಾದಿ ಸ್ಮೃತಿಗಳೂ, ತ್ರೇತಾಯುಗದಲ್ಲಿ ಗೌತಮಾದಿಸ್ಮೃತಿಗಳೂ, ದ್ವಾಪರಯುಗದಲ್ಲಿ, ಯಾಜ್ಞವಲ್ಕ್ಯಾದಿ ಸ್ಮೃತಿಗಳೂ, ಕಲಿಯುಗದಲ್ಲಿ ಪರಾಶರ ಸ್ಮೃತಿಯಲ್ಲಿ ಹೇಳಲ್ಪಟ್ಟಿರುವ, ಧರ್ಮಗಳು, ಆಚರಿಸಲ್ಪಡುತ್ತಾ ಇವೆ. ಆದ್ದರಿಂದ ಶ್ರುತ್ಯರ್ಥ ಸ್ವರೂಪವಾದ ಪರಾಶರಿಂದ ಸ್ಮೃತಿಗಳಲ್ಲಿಯೂ, ಪೂರ್ವೋತ್ತರ ಮೀಮಾಂಸಗಳಲ್ಲಿಯೂ, ಮೇಲೆ ಹೇಳಲ್ಪಟ್ಟ ಶ್ರುತಿಗಳಿಗೆ, ನೀನು ಹೇಳಿದ ಅರ್ಥವು ಹೇಳಲ್ಪಟ್ಟಿರುವುದಿಲ್ಲ ಆದ್ದರಿಂದ ಹಿರಣ್ಯಪಾತ್ರಮಿತ್ಯಾದಿ; ಶ್ರುತಿಗಳು, ದೇವೀಪೂಜೆಯಲ್ಲಿ "ಸುರ" ಪ್ರಶಸ್ತವೆಂದು ಘೋಷಿಸುತ್ತವೆಂದು, ನೀನು ಹೇಳಿದ ಅರ್ಥವು ಪೂರ್ವಪಕ್ಷವೆಂದು ಹೇಳುವುದು ರದ್ದಾಗಿದೆಯೆಂದು ತಿಳಿದು ಕೊಳ್ಳುವುದು. (ಬೇಕು.) ನೀನುಹೇಳಿದ ಬಾಹ್ಯಪೂಜೆಯಲ್ಲಿ ಮದ್ಯ ಮಾಂಸವು, ಪ್ರಯುಕ್ತವೆಂತಲ್ಲ. ಆಶ್ರುತ್ಯರ್ಥವು, ಅಂತರ್ಯವಾಸನಾ ವಿಷಯವು, (ಅಂತರಾಗ ವಿಷಯವು) ಮಾನಸಿಕ ಪೂಜಾ ವಿಷಯವೆಂದು, ಆಭಾಗವು, ಕುಲಾರ್ಣವದಲ್ಲಿ, ಈಶ್ವರ ಪ್ರೋಕ್ತವಾಗಿ, ಸಾಧಕನ ಸಹಸ್ರಾರಕಮಲದಲ್ಲಿರತಕ್ಕ, ವಿದ್ರೂಪ, (ಚಂದ್ರ ಮಂಡಲದಲ್ಲಿ) ಶಕ್ತಿ ಸಾಮಾರಸ್ಯ ಸುಖವನ್ನು ಉಂಟು ಮಾಡತಕ್ಕ, ಪ್ರೇಮ •ಸಂಚಕದಿಂದ ಹುಟ್ಟಿದ. "ಸುಧಾ" ಪಾನರತನಾದದ್ದಾದರೆ ಅದು, ಮಧು ಪಾನ ವೆಂತಲೂ, ಇತರರು ಮಾಡತಕ್ಕದ್ದು ಮದ್ಯಪಾನವೆಂತಲೂ, ಧರ್ಮಾಧರ್ಮಗಳು; ವಿಧಿನಿಷೇಧಗಳನ್ನುವ ದ್ವೈತಭಾವನೆಯುನ್ನೂ, ಪಶುತುಲ್ಯವಾಗಿ ಭಾವಿಸಿ, ಜ್ಞಾನವೆನ್ನುವ ಖಡ್ಗದಿಂದ, ಯೋಗವೇತ್ತನು ಅದನ್ನು ಖಂಡಿಸಿ, ಚಿತ್ತವನ್ನು ಪರಮಾತ್ಮನಲ್ಲಿ.

ಲಯುವನ್ನು ಹೊಂದಿಸಬೇಕು. ಅವರು ಪರ್ಣಾಹಾರವನ್ನು ಮಾಡಿದವರು. ಆತ್ಮನಿಗೂ, ಪರಾ ಶಕ್ತಿಗೂ, ಈ ದ್ವಂದ್ವದಿಂದ ಉತ್ಪನ್ನವಾದ, ಅಭೇದಭಾವನೆ ಯಿಂದ ಉಂಟಾದ ಆನಂದಾನುಭವದಲ್ಲಿ ಯಾರು ಇರುವರೋ, ಅದು ಮೈಥುನವೆಂದು ಹೇಳಲ್ಪಡುವುದು. ಇತರರು ಸ್ತ್ರೀಯರನ್ನು ಸೇವಿಸುವರು, ಆದ್ದರಿಂದ ತ್ರಿಪುರೋಪನಿಷತ್ತಿನಲ್ಲಿ ಹೇಳಿದ "ಪರಿಸ್ಮೃತ" ವೆಂಬ ಶ್ರುತ್ಯರ್ಥವು "ಸಂವಿಲ್ಲಯ" ವಿಷಯವೆಂದು ತಿಳಿದು ಕೊಳ್ಳಬೇಕು.

ಪರಿಸ್ರುತಂ ಝುಷಮಾಜಂಪಲಂ ಚೇಟಾದ್ಯುಪನಿಷದುಕ್ತಾರ್ಥಸ್ತುತ್ವ ದುಕ್ತ ಬಾಹ್ಯ ಪೂಜಾ ವಿಷಯಿಕ ಮದ್ಯಪಾನ ಪ್ರಯುಕ್ತೋ ನಭವತಿಕಿತ್ವಾಂತರ ವಾಸನಾ ವಿಷಯಃ। ತಮುಕ್ತಂಶಿವೇನೈವಕುಲಾರ್ಣವೇ॥ ಶ್ಲೋ॥ ಚಿಚ್ಛಂದ್ರ ಕುಂಡಲೀ ಶಕ್ತಿಸಾಮರಸ್ಯ ಸುಖೋದಯಃ॥ ವ್ಯೋಮ ಪಂಚಕ ನಿಷ್ಪನ್ನ ಸುಧಾಪಾನರತೋಭವೇತ್॥ ಮಧುಪಾನ ಮಿದಂ ಪ್ರೋಕ್ತಮಿತರೇ ಮದ್ಯ ಪಾಯಿನಃ॥ ಧರ್ಮಾಧರ್ಮ ಪಶುಂಕೃತ್ವಾ ಜ್ಞಾನಖಡ್ಗೇನ ಯೋಗವಿತ್॥ ಪರೇಲ ಯಂನಯೇಚ್ಚಿತ್ತಂ ಪಲಾಶೀತಿ ನಿಗದ್ಯತೇ॥ ಪರಾಶಕ್ತ್ಯಾತ್ಮಮಿಥುನ ಸಂಯೋಗಾ ನಂದನಿರ್ಭರಃ॥ ಯಆಸ್ತೇಮೈಥುನಂತತ್ಸ್ಯಾದಿತರೇ ಸ್ತ್ರೀ ನಿಷೇವಕಾಃ॥ಇತಿ॥ ತತ ಉಪನಿಷದುಕ್ತಾರ್ಥ ಸಂವಿಲ್ಲಯ ವಿಷಯಿಕ ಇತಿಜ್ಞೇಯಃ॥

ತಾ॥ ಇಲ್ಲಿ ವರೆಗೆ ತಾತ್ಪರ್ಯವನ್ನು ಮೇಲೆ ಬರೆಯಲ್ಪಟ್ಟಿದೆ,

"ನನು ಬಾಹ್ಯಪೂಜಾವಿಷಯಿಕ ಏವೋಪನಿಷದುಕ್ತಾರ್ಥ ಇತ್ಯಾಗ್ರಹಂ ತರ್ಹಿ"॥ ಶ್ಲೋಕ॥ ಲೋಕಧರ್ಮ ನಿರುದ್ಧೇಪಿ ಶಿದ್ಧಯೋಗೀಶ್ವರೇ ಮತೇಕುಲೇ ಪ್ರಮಾಣಾತಾಂಯಾತಿ ಪ್ರತ್ಯಕ್ಷ ಫಲದಂಯತ॥ ॥ಇತಿ॥ ಶಿವೇನೈವೋಕ್ತತ್ವಾ ತ್ತಾದೀ ದೃಶೀ ಬಾಹ್ಯಪೂಜಾ ಶಿದ್ಧಾನಾಂ ಯೋಗಿನಾಮೇವನಾನ್ಯೇಷಾಂ॥ ಕುತಇತಿಚೇತ್॥ ಲೋಕಧರ್ಮವಿರುದ್ಧೇ ಪೀತಿ ವಚನೇನ ವರ್ಣಾಶ್ರಮಾಚಾರ ವತಾಂ ವಿರುಂಧದಿತಿತೀ॥ ॥ಕಿಂಚ॥ ಶ್ಲೋ॥ ಬಾಹ್ಯಪೂಜಾನಕರ್ತವ್ಯಾ ಕರ್ತವ್ಯಾ ಬಾಹ್ಯ ಜಾತಿಭಿಃ। ತ್ರೈವರ್ಣಿಕೈರ್ನಕರ್ತವ್ಯಾ ಐಹಿಕಾರ್ಥೈಕ ಸಾಧನಮಿತಿ ಸನತ್ಸು ಜಾತ ಸಂಹಿತಾಯಾಮುಕ್ತತ್ವಾ ದ್ವರ್ಣಿನಾಮಾಶ್ರಮಿಣಾಂಚಾಸವಾದಿಪ್ರ ಯುಕ್ತ ಪೂಜಾ ನಿಷಿದ್ಧಾ॥ ತಸ್ಮಾದುಪನಿಷದುಕ್ತಾರ್ಥಂತು ವೇದ ಬಾಹ್ಯಾಸ ವಾದಿ ಪ್ರಯುಕ್ತ ಬಾಹ್ಯ ಪೂಜಾ ವಿಷಯಿಕ ಇತಿ ನಮಂತವ್ಯಃ॥

ತಾ|| ಮತ್ತು ಉಪನಿಷದ್ಭಾರ್ಥವು ಬಾಹ್ಯ ಪೂಜೆಯನ್ನು ಕುರಿತು ಹೇಳಿದ್ದೇ ಎಂದರೆ; ಸುರಾ ಮಾಂಸಾದಿಗಳಿಂದಲೇ ಪೂಜೆ ಎಂದು ಹೇಳುವ ಪಕ್ಷದಲ್ಲಿ ಲೋಕ ಧರ್ಮವಿರುದ್ಧವಾದಾಗ್ಯೂ, ಶಿಷ್ಟಯೋಗೀಶ್ವರ ಮತಾನುಸಾರವಾಗಿ ಕೌಳದಲ್ಲಿ ಕುಲ ಪೂಜೆಯಲ್ಲಿ ಪ್ರಮಾಣ ವಚನ ವಾಗುತ್ತದೆ. ಕುಲಾರ್ಣವ ದಲ್ಲಿ ಶ್ರೀ ಪರಶಿವನಿಂದಲೇ ಮೇಲ್ಕಂಡಂತೆ ಹೇಳಲ್ಪಟ್ಟಿರೋಣದ್ದರಿಂದ ಅಂಥಾ ಬಾಹ್ಯ ಪೂಜೆಯು ಸಿದ್ಧರಿಂದ ಯೋಗೀಶ್ವರರಿಗೆ ಮಾತ್ರವೇ ಹೇಳಲ್ಪಟ್ಟಿದೆಯೇ ಹೊರ್ತು, ವರ್ಣಾಶ್ರಮ ಧರ್ಮವನ್ನು ಪಾಲಿಸುವ ಶಿಷ್ಟ ಜನಗಳಿಗಾಗಿ ಅಲ್ಲ. ಯಾತಕ್ಕೆಂದರೆ, "ಲೋಕಧರ್ಮವಿರುದ್ಧವಾದಾಗ್ಯೂ" ಎಂದು ಹೇಳಲ್ಪಟ್ಟಿದ್ದರಿಂದ ವರ್ಣಾಶ್ರಮಾಚಾರ ಉಳ್ಳವರಿಗೆ ವಿರೋಧವೆಂದು ಗ್ರಾಹ್ಯವು. ಇದೂ ಅಲ್ಲದೇ; ಸನತ್ಸುಜಾತಸಂಹಿತಾವಚನ ಪ್ರಕಾರವಾಗಿ ಬಾಹ್ಯ ಪೂಜೆಯು, ಕೇವಲ ಐಹಿಕಫಲ ಪ್ರದವಾದದ್ದು. ಅದ್ದರಿಂದ, ಈ ಬಾಹ್ಯ ಪೂಜೆಯು ಬಾಹ್ಯ ಜಾತಿಯವರಿಂದಲೇನೇ ಆಚರಿಸಲ್ಪಡತಕ್ಕದ್ದೇ ವಿನಹ ದ್ವಿಜರಾದತ್ರೈವರ್ಣಿಕರು ಆಚರಿಸಕೂಡದೆಂದು ಹೇಳಿರೋಣವು, ತ್ರೈವರ್ಣಿಕರು, ಮತ್ತು ಯತಿಗಳು, ಸುರಾ ಮಾಂಸಾದಿಗಳಿಂದ ಪೂಜೆಯನ್ನು ಮಾಡತಕ್ಕದ್ದು, ನಿಷೇಧಿಸಲ್ಪಟ್ಟಿರುತ್ತದೆ. ಅದ್ದರಿಂದ, ತ್ರಿಪುರೋಪನಿಷದರ್ಥವು ವೇದ ಬಾಹ್ಯರಾದ ಬಾಹ್ಯರನ್ನು ಕುರಿತು, ಬಾಹ್ಯ ಪೂಜಾವಿಷಯವೆಂದು ಹೇಳ ಕೂಡದು.

" ಸಿದ್ಧಾನಾಂಯೋಗೀಶ್ವರಾಣಾಂಚಾಪಿಬಾಹ್ಯಪೂಜಾಪಿಪ್ರಯೋಜನಂ ನಾಸ್ತಿತಥಾಪಿಶಿಷ್ಟಯೋ ಗೀಶ್ವರಮತೇ | ಇತಿ ಶಿವವಚನೇನ ತೇಷಾಂ ಬಾಹ್ಯ ಪೂಜಾಪ್ಯಸ್ತೀತ್ಯಙ್ಗೀಕರ್ತವ್ಯಂ | ವರ್ಣಾಶ್ರಮಾಚಾರ ನಿರ್ಬಂಧಾ ಭಾವಾತ್ | ಸ್ವಾತ್ಮೀಕೃತ್ಯ ಮಹತ್ಯೈದೇವತಾಯೈ ನಿವೇದಯತೀ ಸುಕೃತೀ ಸಿದ್ಧಿ ಮೇತೀತ್ಯು ಕ್ತತ್ವಾತ್ಸಿದ್ಧಾನಾಂ ವರ್ಣಾಶ್ರಮಾಚಾರಸತಾಂ ಸಂವಿಲ್ಲಯರೂಪಾಂತರ ಪೂಜಾ ವಿಷಯಿಕೋ ಪನಿಷದರ್ಥ ಇತಿನಿಷ್ಕರ್ಷಃ"||

ತಾ|| ಸಿದ್ಧರಾದ ಯೋಗೀಶ್ವರರಿಗೂ ಸಹಾ ಬಾಹ್ಯ ಪೂಜೆಯಿಂದ ಪ್ರಯೋಜನವಿಲ್ಲವು ಆದಾಗ್ಯೂ, ಶಿಷ್ಟಯೋಗೀಶ್ವರ ಮತಪ್ರಕಾರವಾಗಿ ಶ್ರೀಪರಶಿವನವಚನ ರೀತ್ಯಾ ಅವರಿಗೆ ಈ ಬಾಹ್ಯ ಪೂಜೆಯು ಇದೆಯೆಂದು ಅಂಗೀಕಾರವು, ಯಾತಕ್ಕೆಂದರೆ, ಅವರಿಗೆ ವರ್ಣಾಶ್ರಮಾಚಾರ ನಿರ್ಬಂಧವು

ಇಲ್ಲದೇ ಇಹೋಣದ್ದರಿಂದ ಅವನು ಆ ರೀತಿಮಾಡಬಹುದು. ಆದಾಗ್ಯೂ ಶ್ರುತಿಯಲ್ಲಿ, ಸುರಾ, ಮತ್ಸ್ಯಮಾಂಸಾದಿಗಳಿಂದ ಬಾಹ್ಯ ಪೂಜೆಯನ್ನು ಮಾಡಿ ವೈಭವಯುಕ್ತನಾದ ದೇವತೆಗೆ ನೈವೇದ್ಯವನ್ನು ಮಾಡಿ ನಂತರ ತಾವು ಭುಜಿಸಿದಲ್ಲಿ; ಸುಕೃತವಂತನಾಗಿ, ಸಿದ್ಧಿಯನ್ನು ಹೊಂದುವರೆಂಬನಂಬಿಕೆಯು, ಅದ್ದರಿಂದ ಸಿದ್ಧರಾದವನು ಪುನಃ ಸಿದ್ಧಿಯನ್ನು ಕೋರುವುದು ಅನವಸರವಾದದ್ದು ಆದ್ದರಿಂದ ಸ್ವಾನು ಭೂತಿಯುಃ ಸಿದ್ಧಿಯನ್ನು ಕೋರತಕ್ಕ ವರ್ಣಾಶ್ರಮಾಚಾರ ವುಳ್ಳ ವೈದೀಕರಿಗೆ "ಸಂವಿಲ್ಲ"ಯ ರೂಪವಾದ ಅಂತರ ಪೂಜಾ ವಿಷಯಿಕವೇ ಉಪನಿಷದರ್ಥವೆಂದು ನಿಶ್ಚಯಿಸಲ್ಪಟ್ಟಿರುತ್ತದೆ.

"ನತು ಬಾಹ್ಯಪೂಜಾ ವಿಷಯಿಕಃ। ಐಹಿಕಾರ್ಥೈಕಸಾಧನಮಿತಿ। ಸನತ್ಸು ಜಾತಸಂಹಿತಾಯಾಮುಕ್ತತ್ವಾದ್ವೇದ ಬಾಹ್ಯ ಪೂಜಾ ವೈದಿಕಾನಾಂ ನಿಷಿದ್ಧಾ"॥

ತಾ॥ ಆಶ್ರುತ್ಯರ್ಥವು ನೀವು ಹೇಳಿದ ಬಾಹ್ಯ ಪೂಜಾ ವಿಷಯುವಲ್ಲವು. ಕೇವಲ ಐಹಿಕಾರ್ಥವನ್ನು ಕೊಡುವುದೆಂದು ಸಂಹಿತಾವಚನ ರೀತ್ಯಾವೇದ ಬಾಹ್ಯವಾದ ಪೂಜೆಯು ವೈದಿಕರಿಗೆ ನಿಷೇಧಿಸಲ್ಪಟ್ಟಿರುತ್ತದೆ.

"ನನು ಮನ್ವಾದಿ ಸ್ಮೃತೀನಾಂಯಥಾಸರ್ವತ್ರ ಪ್ರಮಾಣ ಮಙ್ಗೀ ಕೃತಂ। ತಥಾಪರಮೇಶ್ವರ ಕೃತ ತಂತ್ರಾಣಾಮಿತಿ ಚೇನ್ನ"॥

ಶ್ಲೋ॥ ಅಧಿಕಾರೀವಿಭೇಧೇನಹ್ಯನೇಕಾರ್ಥೋ೯ತ್ರವಷಕ್ಷ್ಯತ ॥ಇತಿ॥ ಸಂಹ್ಯಿತ್ಯಾ ದೌತೇನೈವೋಕ್ತತ್ವಾದ್ಯತ್ರಯಸ್ಯಾಧಿಕಾರಸ್ಸಏವತೇನ ಮಹಾಕಾಳ ಸಂಹಿತಾಯಾಂ ಗ್ರಾಹ್ಯತ್ವೇನ ನಿರ್ಣೀತತ್ವಾತ್। ಮಾಪ್ತುಶಿವಕೃತ ತಂತ್ರೇಷು ಸರ್ವೇಷಾನುಧಿಕಾರಃ। ಕಿಂತು, ,ಸರ್ವಜ್ಞತ್ವಾದಿಶಕ್ತಿವಿಶಿಷ್ಟ ವಿಷ್ಣು ಕಪಿಲದತ್ತಾತ್ರೇಯ ಪರಶುರಾಮಾದಿಭಿಃ। ಬೃಹಸ್ಪತಿ ನಾರದಾದಿಜೇವ ಋಕ್ಷಭಿಃ। ಧಧೀಚ್ಯಾದಿ ಮಹಾ ಋಷಿಭಿಶ್ಚರಚಿತತಂತ್ರ ಸಂಹಿತಾಸ್ಮೃತ್ಯಾದಿಷು ದೇವೀಪೂಜಾದೌ ದ್ವಿಜಾನಾಂ ಮದ್ಯಾದಿ ಗ್ರಹಾಣಾಧಿಕಾರಃ ಪ್ರೋಕ್ತ ಇತಿ ಚೇನ್ನ"॥

ತಾ॥ ಮತ್ತು ಮನ್ವಾದಿ ಸ್ಮೃತಿಗಳು ಯಾವರೀತಿ ಸರ್ವರಿಗೂ ಪ್ರಮಾಣವಾಗಿ ನಿರ್ಣಯಿಸಲ್ಪಟ್ಟಿರುತ್ತದೆಯೋ (ಅಂಗೀಕರಿಸಲ್ಪಟ್ಟಿರುತ್ತದೆಯೋ) ಅದೇ, ರೀತಿ ಪರಮೇಶ್ವರನಿಂದ ರಚಿಸಲ್ಪಟ್ಟ ತಂತ್ರಗಳಲ್ಲಿಯೂ ಸರ್ವರಿಗೂ, ಅಧಿಕಾರವಿರುತ್ತದೆಂದು ಹೇಳಬಹುದಾದರೂ ಆ ರೀತಿ ಹೇಳಕೂಡದು. ತಂತ್ರಗಳು ಅಧಿಕಾರ ಭೇದಗಳನ್ನುದ್ದೇಶಿಸಿ, ಅನೇಕ ಅಂಶಗಳನ್ನು ಹೇಳುತ್ತವೆಂತ, ಮಹಾಕಾಳಿ ಸಂಹಿತೆಯಲ್ಲಿ, ಈಶ್ವರ ನಿಂದಲೇನೇ ಹೇಳಲ್ಪಟ್ಟಿರೋಣದ್ದರಿಂದ, ಯಾವ ಕರ್ಮದಲ್ಲಿ, ಯಾರಿಗೆ ಯಾವ ಅಧಿಕಾರವೋ, ಅವರುಗಳು ಅದನ್ನು, ಗ್ರಹಿಸಬೇಕೆಂತ, ನಿರ್ಣಯವಾಗಿರೋಣದ್ದರಿಂದ, ತಂತ್ರಗಳಲ್ಲಿ ಸರ್ವರಿಗೂ ಅಧಿಕಾರವಿಲ್ಲ. ಇಮೂ ಅಲ್ಲದೇ ಸರ್ವಜ್ಞರಾದ ವಿಷ್ಣು, ಕಪಿಲ ದತ್ತಾತ್ರೆಯ ಪರಶರಾಮಾದಿಗಳಿಂದಲೂ, ಬೃಹಸ್ಪತಿ ನಾರದಾದಿದೇವಋಷಿಗಳಿಂದಲೂ, ಧಧೀಚ್ಯಾದಿ ಮಹರ್ಷಿಗಳಿಂದಲೂ, ರಚಿಸಲ್ಪಟ್ಟಿರತಕ್ಕ ತಂತ್ರಸಂಹಿತ ಸ್ಮೃತಿಗಳಲ್ಲಿ, ದೇವೀ ಪೂಜಾಕಾಲದಲ್ಲಿ (ದೇವೀ ಪೂಜೆಯಲ್ಲಿ) ಬ್ರಾಹ್ಮಣರಿಗೆ ಮದ್ಯಾದಿಕಗಳನ್ನು ಗ್ರಹಿಸಲು ಅಧಿಕಾರವು ಹೇಳಲ್ಪಟ್ಟಿರುತ್ತದೆಂದು ಹೇಳುವುದಾದರೆ. ಅದು ಸಮ್ಮತವಲ್ಲವು. ಆ ರೀತಿ ಹೇಳಕೂಡದು.

"ತ್ರೈಸ್ನೋಪಾನಕ್ರಮೇಣ ಶಾಪದಗ್ಧ ಬ್ರಾಹ್ಮಣೋದ್ಧರಣಾರ್ಥಂ ತಂತ್ರಾದಿಕಮುಕ್ತಂ। ತಧಾಚ ಕೂರ್ಮ ಬೃಹನ್ನಾರದೀಯ್ಯಾದಿಷು ಶಾಪಕಥನಾನಂತರಂ ಶಿವಕೇಶವ ಸನ್ನಿಧೌ ತೇಷಾಂಪ್ರಾರ್ಥನಂ ಪ್ರದರ್ಶ್ಯ। ಕ್ರಮೇಣಜನ್ಮಾಂತರೇ ಬ್ರಾಹ್ಮಣಾಧಿಕಾರ ಪ್ರಾಪ್ತ್ಯರ್ಥಂ ಕಿಂಚಿತ್ಪರಮೇಶ್ವರೋ ಪಾಸನಂ ವಕ್ತವ್ಯಮಿತಿ ತಂತ್ರಾಣಿ ಪ್ರಣೀತಾನಿ"॥

ತಾ॥ ವಿಷ್ಣು ದಧೀಚಿ, ದತ್ತಾತ್ರೇಯಾದಿಗಳಿಂದ ಸೋಪಾನಕ್ರಮವಾಗಿ ತಂತ್ರಗಳು ಮೊದಲಾದ ಪ್ರಮಾಣಗಳು ಉತ್ಪನ್ನವಾಗಿರುತ್ತವೆ. ಈ ಅರ್ಥವು. ಕೂರ್ಮಪುರಾಣ, ಬೃಹನ್ನಾರದೀಯಾದೀ ಪುರಾಣಗಳಲ್ಲಿ, ಶಾಪಕಥನಾನಂತರದಲ್ಲಿ ಶಿವಕೇಶವಸನ್ನಿದಿಯಲ್ಲಿ ಆ ಬ್ರಾಹ್ಮಣರು ಪ್ರಾರ್ಥನೆಯನ್ನು ಮಾಡಿ ಕ್ರಮವಾಗಿ ಜನ್ಮಾಂತರಗಳಲ್ಲಿ ಬ್ರಾಹ್ಮಣಾಧಿಕಾರವು ಸಿದ್ಧಿಸುವದಕ್ಕೋಸ್ಕರ ಸ್ವಲ್ಪ ಈಶ್ವರೋಪಾಸನೆಯು ಹೇಳಲ್ಪಟ್ಟದೆಯೆಂತಲೂ, ಅವರ ನಿಮಿತ್ತವಾಗಿ ತಂತ್ರಗಳು ನಿರ್ಣಯವಾಗಿರುತ್ತದೆಯೆಂತಲೂ ತಿಳಿಯಬೇಕು.

ಯಥಾ॥ ಶ್ಲೋ॥ ತಸ್ಮಾತ್ತ್ವಂವೇದಬಾಹ್ಯಾನಾಂರಕ್ಷಣಾರ್ಥಂ ಚ ಪಾಪಿನಾಂ। ವಿಮೋಹನಾನಿ ಶಾಸ್ತ್ರಾಣಿ ಕರಿಷ್ಯಾಮೋಯಥಾಯಥಂ। ಏವಂ ಸಂಬೋಧಿತೋರುದ್ರೋ ಮಾಧವೇನ ಮುರಾರಿಣಾ॥ ಚಕಾರ ಮೋಹ ಹಶಾಸ್ತ್ರಾಣಿ ಕೇಶವೋ ಪಿಶಿವೇರಿತಃ। ಪಾಂಚರಾತ್ರಂ ಪಾಶುಪತಂತಂತ್ರ ವೈಖಾನಸಾಭಿಧಂ॥ ವೇದಭ್ರಷ್ಟಾನ್ ಸಮುದ್ದಿಶ್ಯ ಕಮಲಾಪತಿರುಕ್ತವಾನ್। ಅತ್ಯಂತಸ್ಖಲಿತಾ ನಾಂಹಿ ದ್ವಿಜಾನಾಂವೇದಮಾರ್ಗತಃ॥ ಪಾಂಚರಾತ್ರಾ ದಯೋ ಮಾರ್ಗಾಃ ಕಾಲೇನೈ ವೋಪಕಾರಕಾಃ। ಸ್ವತಃ ಪ್ರಮಾಣಭೂ ಅನ್ಯಾನಿಯಾನಿ ಶಾಸ್ತ್ರಾಣಿ ವಿರುಂಧಾನಿ ಮಹಾಮುಶೇ। ತೇನ ದೇವೇನ ಮುನಿಸತ್ತಮ॥ ತಾನ್ಯೇವ ಶ್ರದ್ಧಯಾ ಯುಕ್ತಾಃಪರಿ ಗೃಹ್ಯಾದ್ವಿಜಾತಯಃ। ಆಚರಂತಿಮಹಾಪಾಪಾ ಯುಗಾಂತೇ ಸಮು ಪಸ್ಥಿತ॥ ಇತಿ॥

ತಾ॥ ಪರಮೇಶ್ವರನು ವಿಷ್ಣು ಮೊದಲಾದವರನ್ನು ನೋಡಿ ಶಾಪದ ಗ್ಧರಾದ ಪಾಪಿಗಳನ್ನು ರಕ್ಷಿಸುವುದಕ್ಕಾಗಿ ಮೋಹಕರವಾದ ತಂತ್ರಗಳನ್ನು ನೀವು ರಚಿಸಬೇಕೆಂದು ಆಜ್ಞಾಪಿಸಲ್ಪಟ್ಟ ಮೇಲೆ ಅವರು ಶ್ರೀಶಂಕರ ನಿಂದ ಪ್ರೇರೇಪಿಸಲ್ಪಟ್ಟವರಾಗಿ ತಾನು ಪ್ರಮಾಣ ಸ್ವರೂಪನಾದಾಗ್ಯೂ ಸಾಕ್ಷಾತ್ ಶ್ರೀಮಹಾವಿಷ್ಣುವು ಈ ಶಾಪ ದಗ್ಧರಾದ ಪಾಪಿಗಳಿಗೆ ಕ್ರಮವಾಗಿ ವೇಧಾಧಿಕಾರವು ಬರುವುದಕ್ಕೋಸ್ಕರ ಪಾಂಚರಾತ್ರಾದಿಗಳನು ರಚಿಸಿದನು. ಪಾಂಚರಾತ್ರವು ವೈಖಾನಸವು. (ಪಾಶುಪತ ಮೊದಲಾದ ನೇಕ ತಂತ್ರಗಳು ಹುಟ್ಟಿದವು.) ಅವರು ಅವುಗಳನ್ನು ನಂಬಿ ಶ್ರದ್ಧೆಯಿಂದ ಆಚರಿಸುತ್ತಾ ಇದ್ದಾರೆ. ಈ ರೀತಿ ಮಾಡಿದವರು ಜನ್ಮಾಂತರಗಳಲ್ಲಿ ಮಹಾ ಪಾಪಫಲವನ್ನು ಅನುಭವಿಸುವರು.

॥ ತಥಾಚಸ್ಕಾಂದೇಪಿ ॥ ಶ್ರುತಿಭ್ರಷ್ಟಃಸ್ಮೃತಿ ಪ್ರೋಕ್ತ ಪ್ರಾಯಶ್ಚಿತ್ತೇ ಭಯಂಗತಃ। ಕ್ರಮೇಣ ಶ್ರುತಿ ಸಿಧ್ಯರ್ಥಂ ಮನುಷ್ಯಸ್ತಂತ್ರ ಮಾಶ್ರಯೇತ್॥ ಸೂತಸಂಹಿತಾಯಾಂಚ॥ ಶ್ಲೋ॥ ಶ್ರುತಿಪಥಗಳಿತಾನಾಂ ಮಾನುಷಾಣಾಂ ಹಿತಂತ್ರಂ ಹರಿರಪಿ ಮುನಿಮುಖ್ಯಾಃ ಪ್ರಾಹತಂತ್ರೇ ಸ್ವಕೀಯೇ। ಶ್ರುತಿಪಥ ನಿರತಾನಾಂ ತನ್ನ ಸಂಸೇವನೀಯಂ॥ (ಶ್ಲೋ) ಶ್ರುತಿಪಥ ಸಮಮಾರ್ಗೋ

ನ್ನೈವಸತ್ಯಂ ಮಯೋದಿತಂ ॥ ದೇವೀ ಭಾಗವತೇಪಿ॥ ಶ್ಲೋ ॥ ಅನ್ಯಾನಿಯಾನಿ ಶಾಸ್ತ್ರಾಣಿಲೋಕೇಸ್ಮಿನ್ ವಿವಿಧಾನಿಚ । ಶ್ರುತಿ ಸ್ಮೃತಿ ವಿರುದ್ಧಾನಿ ತಾಮಸಾ ನ್ಯೇವ ಸರ್ವಶಃ ॥ ವಾಮಂ ಕಾಪಾಲಿಕಂಚೈವಕೌಲಕಂ ಭೈರವಾಗಮಃ ॥ ಶಿವೇನಮೋಹನಾರ್ಥಾಯ ಪ್ರಣೀತೋ ನಾನ್ಯಹೇತುಕಃ ॥ ದಕ್ಷಶಾಪಾದ್ಭೃಗೋ ಶ್ಶಾಪಾದ್ದಧೀಚೆಶ್ಚೈವಶಾಪತಃ ದಗ್ಧಾಯೇ ಬ್ರಾಹ್ಮಣವರಾವೇದಮಾರ್ಗ ಬಹಿಷ್ಕೃತಾಃ । ತೇಷಾಮುದ್ಧರಣಾರ್ಥಾಯ ಸೋಪಾನ ಕ್ರಮತಸ್ತಥಾ ಶೈವಾಶ್ಚ ವೈಷ್ಣವಾಶ್ಚೈವ ಸೌರಾಶ್ಶಾಕ್ತಾ ಸ್ತಥೈವಚ ॥ ಗಾಣಾಪತಾ ಆಗಮಾಸ್ಸೃಷ್ಟ ಪ್ರಣೀತಾಸ್ತಂಕರೇಣತ ॥ ತತ್ರವೇದಾವಿರುದ್ಧಾಂಶೋ ಪ್ಯುಕ್ತಏವಕ್ವಚಿತ್ಕ್ವಚಿತ್ । ವೈದಿಕೈಂತದ್ಗ್ರಹೇದ್ದೋಷೋ ನಭವತ್ಯೇಕ ದಾಚಿತ್॥ ಸರ್ವಥಾವೇದಾಭಿನಾರ್ಥೇನಾಂಧಿಕಾರೀ ದ್ವಿಜೋಭವೇತ । ವೇದಾಧಿ ಕಾರಹಾನಂತು ಭವೇತ್ತಂತ್ರಾಧಿಕಾರವಾನ್। ತಸ್ಮಾತ್ಸರ್ವ ಪ್ರಯತ್ನೇನ ವೈದಿಕೋ ವೇದ ಮಾಶ್ರಯೇ ॥ ಇತಿ ॥

ತಾ॥ ಈ ವಚನಗಳ ತಾತ್ಪರ್ಯವೇ ಹಿಂದೆ ಬರೆಯಲ್ಪಟ್ಟಿರುತ್ತದೆ.

“ ದೈತ್ಯಮೋಹನಾರ್ಥವೇದ ಬಾಹ್ಯಶಾಸ್ತ್ರಾಣಿ ಗುರುಣಾಪ್ರಣೀತಾನಿ।„ ತದುಕ್ತಂತತ್ರೈವ “ಶ್ರುತ್ವಾತುವಚನಂ ಕಾವ್ಯೋ ಜಗಾಮತ್ವರಿತಂತತಃ । ಅಪಶ್ಯದ್ದಾನವಾನಾಂಚ ಪಾರ್ಶ್ವೇ ವಾಚಸ್ಪತಿಂತಥಾ। ಛದ್ಮರೂಪಧರಂ ಸೌಮ್ಯಾಂ ಬೋಧಯಂತಚ್ಛಲೇನತಾನ್ । ಜೈನಂ ಧರ್ಮಂ ಕೃತಂಸ್ವೇನಯಜ್ಞನಿಂದಾ ಪರಂತ ಥೇ ” ॥ ಇತಿ ॥

“ ಬೃಹತ್ಸಂಗಮತಂತ್ರೇ ಸುರಾಮಧಿಕೃತ್ಯ ॥ ಶ್ಲೋ ॥ ವರಂ ಪ್ರಾಣಾಃ ಪ್ರಗಚ್ಛಂತು ಬ್ರಾಹ್ಮಣೋನಾಪ್ಯಯೇತ್ಸುರಾಂ। ಬ್ರಾಹ್ಮಣೋಮದಿರಾಂ ಪೀತ್ವಾ ಬ್ರಾಹ್ಮಣ್ಯಾದೇವ ಹೀಯತೇ॥“ ಶ್ರೀ ಚಕ್ರಕ್ರಮೇಪಿದೇವಿ ಪೂಜಾಮಧಿಕೃತ್ಯ।” ಶ್ಲೋ॥ “ದೇವ್ಯಾಸ್ತದ್ದಕ್ಷಿಣೇ ಭಾಗೇ ಚಕ್ರ ಪಾರ್ಶ್ವೇ ನಿವೇದಯೇತ್ । ಏತ ದ್ದ್ರವ್ಯಂತು ಶೂದ್ರಸ್ಯನಾನ್ಯೇಷಾಂತುಕದಾಚನೇ ॥ ಇತ್ಯುಪಾಸಕಾನಾಮ ಪಿದ್ವಿಜಾನಾಂದೇವಿ ದೇವೀ ಪೂಜಾಯಾಂ ಮದಿರಾ ಗ್ರಹಣೇ ದೋಷಶ್ರವಣಾ ನ್ಮೋಹಾ ದ್ವಿಜಸ್ಸುರಾಂ ಪೀತ್ವೇತ್ಯತ್ರಮೋಹ ಶಬ್ದಸ್ಯಶಾಸ್ತ್ರಾರ್ಥಾಪರಿಜ್ಞಾನಾ ದಿತಿ ವ್ಯಾಖ್ಯಾನಮಸಂಗತಂ। ಅತಃ ಸರ್ವಾಣಿತಂತ್ರಾಣಿ ವೇದವಿರುದ್ಧೇನ ವೈದಿ

ಕಾನಧಿಕೃತ್ಯ ಶಿವೇನ ನಿರ್ಮಿತಾನೀತಿಯದುಕ್ತಂ ತದಪಾಸ್ತಂ । ಸವ್ಯಾಪಸವ್ಯ ಮಾರ್ಗಾವಪಿ ವೈದಿಕ ವಿಷಯಾವಿತಿಯಚ್ಚೋಕ್ತಂ ತದಯುಕ್ತಂ ಸಚವೈದಿಕ ಮಾರ್ಗಾನು ವರ್ತಿತ್ವಾದ್ಧೇಯಃ ತತ್ರ ಪಸವ್ಯ ಮಾರ್ಗೋವಾಮಾಚಾರ ಪರಃ ॥ ತಲ್ಲಕ್ಷಣಂತು ಪ್ರಾಗೇವೋಕ್ತಂ । ಸಚವೈದಿಕ ಮಾರ್ಗದೂರ ವರ್ತಿತ್ವಾದ್ಧೇಯಃ ॥ ಕಿಂಚ ॥ ಕಾಮಿಕಾದೀನಾಂ ಋಣತ್ರಯ ಶೋಧನಾ ಭಾವಾಚ್ಚ ನಿರ್ಮೋಕ್ಷ ಪ್ರಸಂಗಃ ॥ ತದುಕ್ತಂ ಕಾಳಿಕಾಪುರಾಣೇ ॥ “ ಋಣ ಶೋಧನರ್ಜ್ಯೈಃ ಪಾಪೈರಾಕ್ರಾಂತತ್ವೇನ ಭೈರವೀ ॥ ಇತಿ ॥ ಸ್ಮೃತಿರಪಿ ॥ ಶ್ಲೋ ॥ ಋಣತ್ರಯ ಮಸಂಶೋಧ್ಯ ಅನುತ್ಪಾದ್ಯ ಸುತಾನಪಿ । ತಥಾಯಜ್ಞಾನ ನಿಷ್ಠಾಚಮೋಕ್ಷಮಿಚ್ಛನ್ ವ್ರಜತ್ಯಧಃ ॥ ಇತಿ ॥ ಋಣಾನಿತ್ರೀಣ್ಯ ಪಾಕೃತ್ಯಮ ನೋಮೋಕ್ಷೇ ನಿವೇಶಯೇ ॥ ಇತಿಚ ॥ ಏವಮ ವೈದಿಕ ವಾಮಕೌಲ ಮಾರ್ಗ ಪ್ರವೃತ್ತಾನಾಂ ಋಣತ್ರಯ ಶೋಧನಾಭಾವಾದೈಹಿಕ ಫಲಮಾತ್ರ ಪ್ರವೃತ್ತಿಃ ॥” ತಥಾಚೋಕ್ತಂ ಕುಲಾರ್ಣವೇ ॥ ಶ್ಲೋ ॥ ಪರೋಕ್ಷೇಕೋಸು ಜಾನೀಯಾ ತ್ಪ್ರತ್ಯಕಿಂತು ಭವಿಷ್ಯತಿ । ಲೋಕಧರ್ಮ್ಯನಿರುದ್ಧೇಪಿ ಶಿದ್ಧ ಯೋಗೀಶ್ವರೇಮತೇ । ಕುಲೇ ಪ್ರಮಾಣತಾಂ ಯಾತಿ ಪ್ರತ್ಯಕ್ಷಫಲದಂ ಯತಃ । ಅಳಿಮಾಂಸಾಂಗನಾ ಸಂಗೈರ್ಯತ್ಸುಖಂ ಜಾಯತೇ ಪ್ರಿಯೇ ॥ ತದೇವಮೋಕ್ಷ ಇತ್ಯಾದಿ ॥ ಅಳಿರ್ನಾ ಮಸುರಾ । ಅಳಿಸ್ಸುರಾ ಪುಷ್ಪಲಿಹೇತಿ ಕೋಶಾತ್ ॥ ಕಿಂಚ ॥ ಜಪಮಲಾ ನೃದಂತರಾಚಿತಾ । ಅರ್ಘ್ಯಪಾತ್ರಂ ಮನುಷ್ಯಕಪಾಲಂ । ಭೋಜನಂ ಮದ್ಯ ಮಾಂಸಾದಿಭಿಃ । ಪರಾಂಗನಾಸಂಗಃ ಸರ್ವವರ್ಣಸಮಾನತಾಚ । ಏವಂ ವಿಧೋವಾಮಾಚಾರಃ। ಕೌಳಾಚಾರವಚ್ಛ್ರುತಿಸ್ಮೃತಿವಿರೋಧಃ ।ಕೇವಲೈಹಿಕ ಮಾತ್ರೇ ವಿಷಯಾತತೋ ಹೇಯ ಇತ್ಯುಕ್ತಃ । ಏತೇನ ಕೌಳಾದಿ ಮಾರ್ಗಾಶ್ಶ್ರುತ್ಯ ವಿರೋಧೇನ ಸೂಚಿತಾ ಇತಿ ಯದುಕ್ತಂ ತದಪಿ ನಿರಂತಂ । ತಸ್ಮಾದ್ವಾಮ ಕೌಳಾದಿ ಪ್ರತಿಪಾದ ತಂತ್ರೇಷು ವೈದಿಕಾನಾಂನಾಧಿಕಾರಃ ॥

ವಿಶ್ವಾಮಿತ್ರಪರಾಶರಾದಿಭಿರ್ಮದಿರಾ ಪೀತೇತಿಯದುಕ್ತಂ ತದಸಮಂಜಸಂ। ಯದುಕ್ತಂ ತದಸ ಮಂಜಸಂ । ತಂತ್ರೋಕ್ತತ್ವಾತ್ । ಸ್ಮೃತಿಷ್ವಪ್ಯುಕ್ತಮಿತಿ ಚೇನ್ನ । ಶ್ಲೋ ॥ ಯಾವೇದಬಾಹ್ಯ ಸ್ಮೃತಯೋಯಾಶ್ಚಕಾಶ್ಚಕುದೃಷ್ಟಯಃ। ಸರ್ವಾಸ್ತಾನಿಷ್ಫಲಾಃಪ್ರೇತ್ಯತಮೋ ನಿಷ್ಠಾಹಿತಾಸ್ಮೃತಾಃ। ಇತಿ, ಮನೂಕ್ತ

ರೀತ್ಯಾ ವಿರುದ್ಧ ಸ್ಮೃತಿಸ್ವಪ್ವೈದಿಕ ಸ್ತ್ರೀ ಶೂದ್ರವ್ರಾತ್ಯಾ ನಾಮಾಧಿಕಾರಕ್ವೇಸ್ಯೋ ಕ್ತತ್ವಾತ್ ॥

ತಾ॥ ಪೂರ್ವದಲ್ಲಿ ದೇವ ಗುರುವಾದ ಬೃಹಸ್ಪತಿಯು ಶುಕ್ರಾಚಾರ್ಯ ವೇಷ ವನ್ನು ಧರಿಸಿ ರಾಕ್ಷಸರನ್ನು ವಂಚಿಸುವುದಕ್ಕಾಗಿ ಬಂದು ಅವರಿಗೆ ಜೈನ ಧರ್ಮ ಗಳು ವೇದ ವಿರುದ್ಧ ಮಾರ್ಗಗಳು, ಯಜ್ಞನಿಂದಾದಿಗಳು, ವಾಮ, ಕೌಳ ಧರ್ಮಗಳು, ಕೆಲವು ತಂತ್ರಗಳು ಉಪದೇಶಿಸಿದರು. ತರುವಾಯ ಶುಕ್ರಾಚಾ ರ್ಯರು ತಮ್ಮ ಶಿಷ್ಯರನ್ನೂ ಮತ್ತು ಕಪಟವೇಷಧಾರಿಯಾಗಿ ಪಾರ್ಶ್ವದಲ್ಲಿದ್ದ ಬೃಹಸ್ಮತಿಯನ್ನು ನೋಡಿ ಆಗ್ರಹದಿಂದ ಶಪಿಸಿದರು. ಆದ್ದರಿಂದ ಆ ತಂತ್ರ ಗಳು ವೇದಬಾಹ್ಯವಾದವುಗಳು.

ಬೃಹತ್ಸಂಗವು ತಂತ್ರದಲ್ಲಿ ಬ್ರಾಹ್ಮಣನು “ ಸುರ ”ಯೆನ್ನು ದೇವತೆಗಳಿಗೆ ಅರ್ಪಿಸಿದಾಗ್ಯೂ ಪಾನವನ್ನು ಮಾಡಿದಾಗ್ಯೂ, ಬ್ರಾಹ್ಮಣ್ಯವೇ ಹೋಗಿ ಬ್ರಾಹ್ಮಣರಿಂದ ಬಹಿಷ್ಕರಿಸಲ್ಪಡುವನೆಂದು ಹೇಳಲ್ಪಟ್ಟಿರೋಣದ್ದರಿಂದ ಬ್ರಾಹ್ಮ ಣನಿಗೆ “ ಸುರಾ ” ಮಾಂಸಾದಿಗಳಿಂದ ಶ್ರೀ ಚಕ್ರಾರ್ಚನಾಧಿಕಾರವಿಲ್ಲವೆಂತ ಭಾವವು.

ಸಿದ್ಧ ಯೋಗೀಶ್ವರ ಮತದಲ್ಲಿ ಕೌಳಾಚಾರವು ಪ್ರಶಸ್ತವೆಂತಲೂ, ಬ್ರಾಹ್ಮ ಣರುಉಪಾಸಕರಾಗಿ, ದೇವತಾ ಪೂಜೆಯಲ್ಲಿ, ದೇವೀಯಾಗವಲ್ಲಿ, ಸುರಾಪಾನವು ಪರ ಸ್ತ್ರೀ ಸಂಭೋಗವು, ದೋಷಾರ್ಹವಲ್ಲವೆಂದು ಹೇಳಿರತಕ್ಕದ್ದು. ವೇದಬಾ ಹ್ಯಗಳಾದ್ದರಿಂದ ಅವುಗಳೆಲ್ಲವೂ ಬ್ರಾಹ್ಮಣನಿಗೆ ದೂರವಾದುಗಳು.

“ ಮೋಹೇನಮದಿರಾಂ ಪೀತ್ವಾ ” ಎನ್ನುವ ಪ್ರಾಯಶ್ಚಿತ್ತ ವಚನಗಳಿಗೆ ಶಾಸ್ತ್ರಾರ್ಥವು ತಿಳಿಯದೇ ಹೇಳತಕ್ಕ ನಿಮ್ಮವಾದವು ವೇದವಿರುದ್ಧವೂ, ತಾಮಸವೂ ಆಗಿರೋಣದ್ದರಿಂದ ನಿಷೇಧಿಸಲ್ಪಟ್ಟಿದೆ.

ಜನ್ಮಾಂತರಲ್ಲಿ ಯಾರಿಗೆ ಏನು ಆಗುವುದೋ ಯಾರು ನೋಡಿದ್ದಾರೆ: ಮೋಕ್ಷವೆಂದರೆ ಪ್ರತ್ಯಕ್ಷವಾಗಿ ಕೌಳವಾ ಮಾಚಾರಗಳಲ್ಲಿ ಹೇಳಿರತಕ್ಕ ಸುರಾ ಪಾನವು. ಪರಾಂಗನೆಯರ ಸಂಭೋಗ ಸರ್ವವರ್ಣ ಸಮಾನತಾ ಸುಲಭವು ಳನ್ನು ಉಂಟುಮಾಡುತ್ತವೆ ಯಾದ್ದರಿಂದ ಇವುಗಳೇ ಮೋಕ್ಷವೆನ್ನುವ ನಿಮ್ಮ ವಾದವು; ವೇದ ಬಾಹ್ಯರಾದ ಶುದ್ರರಿಗೂ, ವರ್ಣಾಚಾರ ಭ್ರಷ್ಟರಾದ ಶೂದ್ರ

ಪ್ಪೈರಾಗಿಗಳಿಗೂ ಹೇಳಲ್ಪಟ್ಟಿರುತ್ತದೆ. ನೀನೂ ಸಹಾ ವರ್ಣಾಚಾರಗಳನ್ನು ತ್ಯಜಿಸಿದಾಗ ಈ ರೀತಿಮಾಡಬಹುದು–ಲೋಕ ನಿಂದ್ಯವು. ವೇದ ಬಾಹ್ಯವಾದ್ದರಿಂದ ಬ್ರಾಹ್ಮಣಾದಿ ತ್ರೈವರ್ಣಿಕರಿಗೆ ವಾಮ, ಕೌಳ, ಶಿದ್ದ ಯೋಗೀಶ್ವರಾದಿ ಮತಗಳು ವೇದ ಬಾಹ್ಯಗಳಾದ್ದರಿಂದ ನಿಷೇಧಿಸಲ್ಪಟ್ಟಿದೆ.

ಗ|| "ರಾಮಕೃಷ್ಣಾದಿಭಿರ್ವಾರುಣೀ ಸೇವಿತೇತಿ ಭಾರತ ಭಾಗವತಾದಿ ಸೂಕ್ತ ಮಿತಿ ಚೇನ್ನ"

ಶ್ಲೋ|| ಕ್ವ ಚಿ ತ್ಕ ದಾ ಚಿತ್ತಂತ್ರಾರ್ಥಕಟಾಪೇಣ ಮುನೀಶ್ವರಾಃ| ಸಂತಿತಾನಿ ಪುರಾಣಾನಿ ಸೋಂಶೋ ಗ್ರಾಹೋ ನವೈದಿಕೈ ||ಇತಿ|| ಸೂತ ಸಂಹಿತಾ ಯಾಮುಕ್ತತ್ವಾತ್| ಭಾರತೇಪ್ಯವೈದಿಕಂತತ್ರತತ್ರೋಕ್ತಃ|| ಯಥಾ| ಮೋಕ್ಷಧರ್ಮೇಷು ಪಾಶುಪತವ್ರತಕಥನಂ| ಶೇಷಧರ್ಮೇಷ್ವಂತಿ ಮಭಾಗೇತಪ್ತ ಮುದ್ರಾಧಾರಣಂ| ಆದಿಪರ್ವಣಿ ಕಚಹತ್ಯಾ ನಿಮಿತ್ತಂ ಸುರಾಶಾಪಂಚೋಕ್ತಂ| ಭಾಗವತೇಪಿ| ರಾಮಕೃಷ್ಣಯೋರ್ಮದಿರಾಪಾನವರ್ಣನಂ| ಕೇಚಿತ್ಕಥಯಂತಿ|ಅತ್ರೋಚ್ಯತೇ|ಶ್ರುತಿಸ್ಮೃತಿಷು ವೈದಿಕಾನಾಂ ಸುರಾಪಾನಮನಿಷಿದ್ಧಂ ಚೇನ್ಮಾದಕಾದಿ ದೋಷಂ ಜ್ಞಾತ್ವಾ ಸುರಾಯಾಶ್ಶುಕ್ರಶಾಪೋಯುಕ್ತಏವ|| ಶ್ರು || ಸುರಾಪಾನಾತ್ಪತೋಭವತೀತಿ ಶ್ರುತ್ಯಾ ಸುರಾಪಾನಸ್ಯ ನಿಷಿದ್ಧತ್ವಾ ಚ್ಛುಕ್ರ ಶಾಪಧನಂ ವೇದ ವಿರುದ್ಧಂ| ಅತೋವೈದಿಕೈಃ ಪುರಾಣಾದಿಷು ವೇದವಿರುದ್ಧಾಂಶೋನಗ್ರಾಹ್ಯಃ||

ತಾ|| ಭಾರತ ಭಾಗವತಾದಿಗಳಲ್ಲಿ ರಾಮಕೃಷ್ಣಾದಿಗಳು ಮದ್ಯಪಾನವನ್ನು ಮಾಡಿದ್ದಾರೆಂತ ಹೇಳಿರುವುದು ಯುಕ್ತವಲ್ಲ. ಒಂದೊಂದು ಸ್ಥಳ, ಸನ್ನಿವೇಶಗಳಲ್ಲಿ ಸ್ವಲ್ಪ ಸ್ವಲ್ಪ, ಅವರಿವರುಗಳಿಂದ, ತಂತ್ರಾರ್ಥಗಳಲ್ಲಿ ಅನುಗ್ರಹ ಬುದ್ಧಿಯಿಂದ ಮಹರ್ಷಿಗಳು ಹೇಳಿದ, ಅಂಶಗಳು, ಪುರಾಣಗಳಲ್ಲಿದ್ದಾಗ್ಯೂ, ವೇದ ವಿರುದ್ಧವಾದುವುಗಳಿಂದ್ದರಿಂದ ವೈದಿಕರು ಅವುಗಳನ್ನು ಗ್ರಹಿಸಕೂಡದು. ಭಾರತದಲ್ಲಿಯೂ ಅವೈದಿಕವು, ಅಲ್ಲಲ್ಲಿ ಹೇಳಲ್ಪಟ್ಟಿದೆ. ಹೇಗೆಂದರೆ, ಮೋಕ್ಷಧರ್ಮಗಳಲ್ಲಿ ಪಾಶು ಪತವ್ರತಕಥೆಯೂ, ಶೇಷಧರ್ಮಗಳಲ್ಲಿ, ಅಂತ್ಯಭಾಗದಲ್ಲಿ ತಪ್ತ ಮುದ್ರಾಧಾರಣೆಯೂ, ಆದಿಪರ್ವದಲ್ಲಿ ಕಚಹತ್ಯಾ ನಿಮಿತ್ತವಾಗಿ ಸುರ

ಶಾಪವನ್ನೂ, ಹೇಳಲ್ಪಟ್ಟಿದೆ. ಭಾಗವತದಲ್ಲಿ ರಾಮಕೃಷ್ಣ (ರಿಗೆ)ರ, ಮದಿರಾ ಪಾನವರ್ಣನೆಯೂ ಹೇಳಲ್ಪಟ್ಟಿದೆಯೆಂದು ಕೆಲವರು ಹೇಳುತ್ತಾರೆ.

ಈ ಅಂಶಗಳಿಗೆ ಸಮಾಧಾನವನ್ನು ಹೇಳಲ್ಪಡುತ್ತದೆ:-ಶ್ರುತಿಸ್ಮೃತಿಗಳಲ್ಲಿ ವೈದಿಕರಿಗೆ ಸುರಾಪಾನವು ನಿಂದ್ಯವಾಗದಿದ್ದಲ್ಲಿ ಶುಕ್ರಾಚಾರ್ಯರ ಶಾಪವು ಯುಕ್ತವೆಂತ ಹೇಳಿದಲ್ಲಿ; ಸುರಾಪಾನದಿಂದ ಬ್ರಾಹ್ಮಣನು ಅಪವಿತ್ರನಾಗುತ್ತಾನೆಂದು ಹೇಳತಕ್ಕ ಶ್ರುತಿ ವಚನದಿಂದ, ಶುಕ್ರ ಶಾಪವಿರುತ್ತಾದೆಂದು ಹೇಳುವುದು ವೇದ ವಿರುದ್ಧವಾದ್ದರಿಂದ. ಆ ಕಾರ್ಯವು ನಿಷಿದ್ಧವು. ಆದ್ದರಿಂದ ವೈದಿಕರಿಂದ ಪುರಾಣಾದಿಗಳಲ್ಲಿ ಹೇಳಲ್ಪಟ್ಟಿರತಕ್ಕ ವೇದ ವಿರುದ್ಧಾಂಶವು ಗ್ರಹಿಸಲ್ಪಡತಕ್ಕದ್ದಲ್ಲವು.

"ದೇವೈರ್ವಾರುಣೀ ಪೀತೇತ್ಯಾಗ್ರಹೋಯದಿಚೇತ್ತರ್ಹಿ। ನದೇವ ಚರಿತಂ ಚರೇ ರಿ ತ್ಯ ಕ್ತ್ಯಾದ್ಯದ್ದೇ ವೈರಪಿಕೃತಂತನ್ಮನುಷ್ಯೈರ್ನಕರಣೀಯಂ। ತೈರ್ಯದುಕ್ತಂ ತದೇವಾಚರಣೀಯಂ। ಅತ್ರೇವಂವದಂತಿಕಾಲಾಃ। ರಾಮಕೃಷ್ಣಾದಿ ದೇವೈರ್ಯದಂಗೀಕೃತಂತದವಸ್ಯಮೇವಭೂದೇವೈರಂಗೀಕಾರ್ಯ ನ ಪಿ ಶಾ ಚಾ ದಿ ಚರಿತವಿತಿ। ಅತ್ರೋಚ್ಯತೇ। ಯದಿ ಮದ್ಯಮಾಂಸ ವಿಷಯೇತತ್ಸಾದೃಶ್ಯಮಂಗೀಕ್ರಿಯತೇ ಚೇತ್ತತ್ಸಾಮರ್ಥ್ಯಮಪ್ಯಂಗೀಕ್ರಿಯತಾಂ। ಯಥಾಶಿವೇನ ಹಾಲಾಹಲಃ ಪೀತಃ ತಥೈವ ಸುರಾಪಿ ಪೀತಾ। ಮನುಷ್ಯಾ ಅಪಿ ಸುರಾಪಾನಂ ಕೃತ್ವಾಪಸ್ಮೃತ್ಯುಕ್ತ ತಪ್ತವರ್ಣಾಂ ಸುರಾಂಪೀತ್ವಾ ಜೀವಂತಿ ಚೇತ್ತೈರುಕ್ತ ಪ್ರಕಾರೇಣ ದೇವ ಚರಿತ ಮೇವಾಂಗೀಕರಣೀಯಾ ಭವತ್ಯತೋನ ದೇವ ಚರಿತಂ ಚರೇದಿತಿ||"

ತಾ|| ದೇವತೆಗಳಿಂದ ಸುರಾಪಾನವು ಮಾಡಲ್ಪಟ್ಟಿದೆಯೆಂತಲೂ, ಶಿವ, ರಾಮಕೃಷ್ಣಾದಿಗಳು ಮಾಡಿರತಕ್ಕದ್ದನ್ನು, ಮನುಷ್ಯರು, ಆಚರಿಸಬಹುದೆಂತಲೂ, ಪಿಶಾಚಾದಿ ಚರಿತಗಳನ್ನು ಮಾಡಕೂಡದೆಂತಲೂ, ಕೌಳರು ಹೇಳುತ್ತಾರೆ. ಅವರಿಗೆ ಸಮಾಧಾನವು ದೇವತೆಗಳು ಮಾಡಿದ ಕಾರ್ಯವನ್ನು ಮನುಷ್ಯರುಮಾಡ ಕೂಡ ದೆಂತಲೂ, ಸ್ಮೃತಿ ಅಭಿಪ್ರಾಯವೂ ಸಹಾ ಅದೇ ರೀತಿ ಇರೋಣದ್ದರಿಂದಲೂ, ದೇವಚರಿತವನ್ನು ಮನುಷ್ಯರು ತರ್ಕಿಸಕೂಡದೆಂತಲೂ, ಪರಮೇಶ್ವರನುಹಾಲಾ ಹಲವನ್ನು ಪಾನಮಾಡಿದನು. ಅದೇ ರೀತಿ ಸುರಾಪಾನವನ್ನು ಮಾಡಿದನು. ಮನುಷ್ಯರು ಸ್ಮೃತಿಯಲ್ಲಿ ಹೇಳಿದ್ದ ಪ್ರಕಾರ ಕೆಂಪಗೆ

ಕಾಯಿಸಿದ "ಸುರಾ"ಪಾನವನು ಮಾಡಿ ಜೀವಿಸಿ ಇದ್ದದ್ದಾದರೆ, ಅವರಂತೆ ಸುರಾಪಾನವನ್ನು ಅಂಗೀಕರಿಸಬಹುದು. ಆದ್ದರಿಂದ, ದೇವಚರಿತೆಯನ್ನು ಮನುಷ್ಯರು ಆಚರಿಸಕೂಡದು.



"ಸುರಾಪಾನಂ ಕಿಮರ್ಥ ಮಿತಿಚೇ ನ್ಮಂತ್ರ ಸ್ಫರಣಾರ್ಥಂ ಮನೋನಿಶ್ಚ ಲಾರ್ಥಮಜ್ಞಾನನಿವೃತ್ತ್ಯರ್ಥಂಚೇತಿವದಂತಿ। ಅ ತ್ರ ವಿ ಚಾ ರ್ಯ ತೇ । ಮದ್ಯ ಮಾಂಸ ಗಾಂಧಾರೀ ಪತ್ರ ಲಶುನಾದೀನಾಂ ಮಾದಕತ್ವ ದೋಷ ವಿಶಿಷ್ಟತ್ವೇನ ಶ್ರುತಿ ಸ್ಮೃತಿಷುನಿಷಿದ್ಧತ್ವಾದುಕ್ತಾರ್ಥೋನಸಂಪದ್ಯತ ಇತಿ ಚೇದನು ಪಾನಕಾ ನಾಮೇವೋಕ್ತ ದೋಷ ಇತಿಚೇನ್ನ। ಉಪಾಸಕಾನಾಮಪಿ ದೋಷಸ್ಯ ಪ್ರದರ್ಶಿ ತತ್ವಾತ್। ತಥಾಪಿ ಕೌಳಮತೇ ಪ್ರೋಕ್ತ ದೋಷೋನ ಸಂಭವತೀತಿ ವದಂತಿ। ಕುತಇತಿಚೇತ್ ॥ ಶ್ಲೋ ॥ ಅಹನಿಪ್ರಳಯಂಕುರ್ವ ನ್ನಿದಮಪ್ರತಿಯೋಗಿನಂ। ಪರಾಕ್ರಮೋ ಪರೋಭುಂಕ್ತೇ ಸ್ವಾತ್ಮಾನಮಶಿವಾಪಹ ॥ಇತಿ॥ ಯೋಗಿನೀತಂ ತ್ರೋಕ್ತಾನಾಂ ಭಾವ ಭಾವನಾ ಪರಾ ವೀರಾ ಸ್ತೇಷಾಮೇವಕುಲ ಮಾರ್ಗೇಧಿ ಕಾರಃ। ನಾನ್ಯೇಷಾ ಮಿತಿಶಿವಶಾಸನಂ ॥ತೇಚ॥ ಜ್ಞಾಲುಬ್ಧಾಂಜನಾನುದ್ಧರ್ತುಂ ತಂತ್ರೋಕ್ತ ದೀಕ್ಷಾಂದತ್ವಾಸರಹಸ್ಯಂಕುಲ ಮಾರ್ಗಮುಪದಿಶ್ಯ। ಮಂತ್ರ ಗುರು ದೇವತಾತ್ಮಾನಾಮೈಕ್ಯಂಚೋಕ್ತಾ ನುಸಂಧಾನಸ್ಯದಾರ್ಢ್ಯಾರ್ಥಂ ಮದಿ ರಾಂಪಾಯಯಂತಿ। ತತೋಮದಿರಾಮದೇನ ಗುರೂಕ್ತಾನುಸಂಧಾನೇ ಚಿತ್ತೈ ಕಾಗ್ರತಾಜಯತೇ। ಏವಮನುದಿನಮಾತ್ಮಾಹಂ ಭಾವಭಾವನಾರ್ಥಮಭ್ಯಾ ಸೇಕೃತೇ ಶಿವೋಭವತೀತಿ ಕೌಳಾನಾಮಾಶಯಃ। ಅತ ಸ್ಸುರಾಪಾನಸ್ಯ ಕೌಳಾ ನಾಂ ಜ್ಞಾನ ಸಾಧನತ್ವಾದುಕ್ತ ದೋಷೋನ ಸಂಭವತೀತಿ॥"

ತಾ॥ ಸುರಾಪಾನವನ್ನು ಯಾತಕ್ಕೆ ಮಾಡುವುದೆಂದರೆ; ಮಂತ್ರ ಸ್ಫರಣಕ್ಕಾಗಿಯೂ, ಮನೋನಿಶ್ಚಯಾರ್ಥಕ್ಕಾಗಿಯೂ, ಅಜ್ಞಾನನಿವೃತಿಗಾಗಿಯೂ, ಪಾನವೆಂದು ಕೌಳರು ಹೇಳುತ್ತಾಇದ್ದಾರೆ. ಸುರಾ, ಮಾಂಸ, ಗಾಂಜಾಪತ್ರೆ, ಲಶುನ (ಬೆಳ್ಳುಳ್ಳಿಗಳು) ಉನ್ಮಾದಾ ವಸ್ಥೆಯನ್ನುಂಟುಮಾಡುವ ದೋಷವನ್ನು ಹೊಂದಿರೋಣದ್ದರಿಂದ. ಶ್ರುತಿ ಸ್ಮೃತಿಗಳಲ್ಲಿ ಹೇಳಿರತಕ್ಕ ದೋಷಗಳು ಸಂಭವಿಸುತ್ತದೆಂದು ಹೇಳಿದರೆ, ಉಪಾಸನೆಯಿಲ್ಲದವರಿಗೆ ಮಾತ್ರವೇ ಹೊರ್ತು ಉಪಾಸಕರಿಗೆ ಆ ದೋಷಗಳು ಇಲ್ಲವೆಂತ ಹೇಳಿದಲ್ಲಿ ಅದು ಅಸಂಭವವು (ಅಂದರೆ

ಆ ರೀತಿ ಹೇಳಕೂಡದು) ಯಾತಕ್ಕೆಂದರೆ ಉಪಾಸಕರಿಗೂಸಹಾ ಆದೋಷಗಳ ಪ್ರತ್ಯಕ್ಷವಾಗಿ, ಕಾಣಿಸುತ್ತಾ ಇರೋಣದ್ದರಿಂದ ಕೂಡದು.

ಈ ರೀತಿ ದೋಷಗಳಿದ್ದಾಗ್ಯೂ ಕೌಳಮತದಲ್ಲಿ ಸುರಾಪಾನವು ವಿಧಿಯಾಗಿರುತ್ತದೆ. ಯಾತಕ್ಕೆಂದರೆ ಆವಚನವು, ಅಹಂಕಾವನ್ನು ಹರಿಸುತ್ತದೆಂತಲೂ, ಇದೇ" (ಎಂದು ಹೇಳುವುದಕ್ಕೆ) ಎಂಬ ಭೇಧಜ್ಞಾನಕ್ಕೆ ವಿರೋಧವಾದದ್ದಾಗಿಯೂ, ಅಜ್ಞಾನವನ್ನು ಹರಿಸತಕ್ಕ "ಸುರೆಗೆ" ಅಷ್ಟು ಪರಾಕ್ರಮ ಉಳ್ಳಯೋಗಿಗಳು ಪಾನನವನ್ನು ಮಾಡಬೇಕೆಂದು "ಯೋಗಿನೀ" ತಂತ್ರದಲ್ಲಿ ಹೇಳಿದ ಅಹಂಭಾವಪರರು ಇವರುಗಳೇ ಎಂತಲೂ ಅಂಥವರಿಗೇನೇ ಕೌಳಮಾರ್ಗದಲ್ಲಿ ಅಧಿಕಾರವೆಂದು ಈಶ್ವರಾಜ್ಞೆ. ಅವರು ಅಂಥಾವೀರರು, ಜ್ಞಾನಾಪೇಕ್ಷೆಯುಳ್ಳವರೂ ಆದ ಜೀವಗಳನ್ನು ಉದ್ಧಾರಮಾಡುವುದಕ್ಕಾಗಿ ಅವರುಗಳಿಗೆ ತಂತ್ರಮಾರ್ಗರೀತ್ಯಾ ಮಂತ್ರ ದೀಕ್ಷೆಯನ್ನು ಕೊಟ್ಟು, ರಹಸ್ಯಗಳಸಹಿತ ಕೌಳಮಾರ್ಗದಲ್ಲಿರತಕ್ಕ ಆಚಾರಗಳನ್ನು ಉಪದೇಶಿಸಿ, ಮಂತ್ರ ಗುರು ದೇವತೆಗಳಿಗೆ, ಅಭೇದವನ್ನು ಹೇಳಿ, ಐಕ್ಯಾನು ಸಂಧಾನಕ್ಕಾಗಿ, ಮದ್ಯಪಾನವನ್ನು ಮಾಡಿಸುತ್ತಾ ಇರುವರು ಆತರುವಾಯ ಆಶಿಷ್ಯರಿಗೆ, ಸುರಾಪಾನದಿಂದ ಉಂಟಾದ ಮತ್ತತೆಯಿಂದ ಗುರುವಿನಿಂದ ಹೇಳಲ್ಪಟ್ಟ, ಅನುಸಂಧಾನಗಳಲ್ಲಿ ಚಿತ್ತೈಕಾಗ್ರತೆಯುಂಟಾಗುವುದು. ಈ ಪ್ರಕಾರವಾಗಿ ಪ್ರತಿದಿನವೂ ಆತ್ಮಾಹಂಭಾವನೆಗಾಗಿ ಸುರಾಪಾನಾಭ್ಯಾಸವನ್ನು ಮಾಡಿದಲ್ಲಿ ಈಶ್ವರನಾಗುತ್ತಾನೆಂತ ಕೌಳರು ಹೇಳುತ್ತಾ ಇರುವರು. ಆದ್ದರಿಂದ, ಸುರಾಪಾನಕ್ಕೂ ಕೌಳರಿಗೂ ಮೇಲೆ ಹೇಳಲ್ಪಟ್ಟ ದೋಷವು ಸಂಭವಿಸಿರುತ್ತದೆ.

॥ಗದ್ಯ॥ ಯುಕ್ಷರಕ್ಷಃ ಪಿಶಾಚಾನ್ನಸ್ಯ। ಮದ್ಯಾದೇಸ್ಸೇವನಾದಜ್ಞಾನಜಸ್ಯ ಸತ್ಯಮಸೋಽವೃದ್ಧಿರ್ಭವತಿ। ತಸ್ಯೋದಯ ಕಾಲೇ ಸರ್ವಾಣ್ಯಂಗಾನಿಗುರುತ್ವಂ ಪ್ರಾಪ್ನುವಂತಿ। ತತೋಽನಿದ್ರಾಲಸ್ಯತಂದ್ರಾ ಪ್ರಮಾದಾದಯೋದೇಹ ಮಾವೃಣ್ವಂತಿ। ಮೋಹಾಭಿಭೂತತ್ವಾದಧರ್ಮಂಧರ್ಮಮಿತಿ ವೈಪರೀತ್ಯೇನ ಸರ್ವಾರ್ಥಾನ್ಮನ್ಯಂತೇ, ಅತಸ್ತಾಮಸೋಽಯುಕ್ತ ಇತ್ಯುಚ್ಯತೇ। ತಸ್ಯ ಆತ್ಮ ವಿಷಯಾ ಬುದ್ಧಿರ್ನ ವಿದ್ಯತೇ।ಬುದ್ಧಿರಹಿತಸ್ಯ ಆತ್ಮಜ್ಞಾನಾಭಿನಿವೇಶರೂಪ ಭಾವನಾಪಿನಸಂಭವತಿ। ಭಾವನಾರಹಿತಸ್ಯ

ಶಾಂತಿರಪ್ಯನು ಪಲಭ್ಯತೇ। ಉಪಶಮರಹಿತಸ್ಯ ಸುಖಸ್ಯ ಗಂಧ ಮಾತ್ರ ಮಪಿನೋಪ ಸದ್ಯತೇ। ಕಿಂಚತಮೋವಿಶಿಷ್ಟಸ್ಯಾಘೋಗತಿರೇಣ ಸುಸಿದ್ಧಾ। ಏತತ್ಸರ್ವ ಮಭಿಪ್ರೇತ್ಯ ಭಗವತಾ ಗೀತಂ॥

ತಾ॥ ಆದ್ದರಿಂದ ಯಕ್ಷರಕ್ಷಃ ಪಿಶಾಚಾನ್ನಾದಿಗಳಿಂದ ಉಂಟಾದ ತಮಸ್ಸಿನ್ನವ ಅಜ್ಞಾನವು, ಈ ಸುರಾಪಾನದಿಂದ ವೃದ್ಧಿಯಾಗುತ್ತದೆ. ಆರೀತಿ ಮತ್ತು ಉಂಟಾದಕೂಡಲೇ ಸರ್ವಾವಯಗಳೂಭಾರವಾಗುತ್ತದೆ. ಆ ತರುವಾಯ ನಿದ್ರೆ. ಆಲಸ್ಯ, ತಂದ್ರಭಯವು ಮೊದಲಾದ ದುರ್ಗುಣಗಳು ಹುಟ್ಟುತ್ತವೆ. ಮೋಹವು ಉಂಟಾದ್ದರಿಂದ ಧರ್ಮವು ಅಧರ್ಮವಾಗಿಯೂ. ಅಧರ್ಮವುಧರ್ಮವಾಗಿಯೂ, ಸಕಲವೂವಿಪರೀತವಾಗಿ ಭಾಸವಾಗುತ್ತದೆ. ಆದ್ದರಿಂದ ತಾಮಸನು ಅಪಾತ್ರನೆಂದುಪ್ರಸಿದ್ಧಿ. ಅವನಿಗೆ ಆತ್ಮ ವಿಷಯವಾದ ಬುದ್ಧಿ ತಿಳಿಯುವುದಿಲ್ಲ. ಬುದ್ಧಿಯಿಲ್ಲದವನಿಗೆ ಆತ್ಮಜ್ಞಾನವುಲಭಿಸುವುದಿಲ್ಲ. ಆತ್ಮಭಾವನೆಯಿಲ್ಲದೆ. ಶಾಂತಿ ಉಂಟಾಗುವುದಿಲ್ಲ. ಶಾಂತಿ ಇಲ್ಲದವನಿಗೆ ಸುಖವಾಸನೆಯೂ ಸಹ ಲಭಿಸುವುದಿಲ್ಲ. ಇವೂ ಅಲ್ಲದೇತಮಸ್ಸುಳ್ಳವನಿಗೆಅಧೋಗತಿಸಿದ್ಧವು, ಇವೆಲ್ಲವರ ಉದ್ದೇಶವನ್ನು ಶ್ರೀ ಕೃಷ್ಣಪರಮಾತ್ಮನಿಂದ ಭಗವದ್ಗೀತೆಯಲ್ಲಿ ಹೇಳಲ್ಪಟ್ಟಿದೆ. ("ಭಗವದ್ಗೀತಾಯಾಂ")

ಶ್ಲೋ॥. ಯಾತಯಾಮಂಗತರಸಂಪೂತಿಪರ್ಯುಷಿತಂಚಯತ್। ಉಚ್ಛಿಷ್ಟಮಪಿಚಾಮೇಧ್ಯಂ ಭೋಜನಂತಾಮಸಪ್ರಿಯಂ॥ ತಮಸ್ತ್ವಜ್ಞಾನಜಂವಿದ್ಧಿ ಮೋಹನಂ ಸರ್ವದೇಹಿನಾಂ॥ ಪ್ರಮಾದಾಲಸ್ಯ ನಿದ್ರಾಭಿಸ್ತನ್ನಿಬಧ್ನಾತಿ ಭಾರತ॥ ಅಧರ್ಮಂಧರ್ಮಮಿತಿಯೋ ಮನ್ಯತೇತಾಮಸಾವೃತಃ। ಸರ್ವಾರ್ಥಾನ್ವಿಪರೀತಾಂಶ್ಚ ಬುದ್ಧಿಸ್ಸಾಪಾರ್ಥತಾಮಸಿ॥ ಯದಗ್ರೇಚಾನು ಬಂಧೇಚ ಸುಖಂಮೋಹನ ಮಾತ್ಮನಃ। ನಿದ್ರಾಲಸ್ಯಪ್ರಮಾದೋಥ್ಥಂತತ್ತಾಮಸಮುದಾಹೃತಂ॥ನಾಸ್ತಿ ಬುದ್ಧಿರಯುಕ್ತಸ್ಯನಚಾಯುಕ್ತಸ್ಯ ಭಾವನಾ ನಚಾಭಾವಯತಶಾಂತಿರಶಾಂತಸ್ಯ ಕಥಂಸುಖಂ॥ ಊ (ರ್ಧ್ವಂ) ರ್ಧ್ವಂಗಚ್ಛಂತಿ ಸತ್ವಸ್ತಾಮಧ್ಯೇತಿಷ್ಠಂತಿರಾಜಸಾಃ। ಜಘನ್ಯಗುಣವೃತ್ತಿಸ್ಥಾ ಅಧೋಗಚ್ಛಂತಿತಾಮಸಾಃ॥

ಇತಿ ॥ ಮನುರಪಿ ॥

ಶ್ಲೋ॥ ಯಕ್ಷರಕ್ಷಃ ಪಿಶಾಚಾನ್ನಂ ಮದ್ಯಂ ಮಾಂಸಂ ಸುರಾಸವಂ ।
ತದ್ಬ್ರಾಹ್ಮಣೇನನಾತ್ತವ್ಯಂ ದೇವಾನಾಮಶ್ನತಾಹವಿಃ ॥
ಅಮೇಧ್ಯೇ ವಾಪತೇನ್ಮತ್ತೋ ವೈದಿಕಂವಾಪ್ಯುದಾಹರೇತ್ ।
ಅಕಾರ್ಯ ಮನ್ಯತ್ಕುರ್ಯಾದ್ವಾಅ ಬ್ರಾಹ್ಮಣೋಮದಮೋಹಿತ ॥ ಇತಿ ॥

ತಾ॥ ಈ ವಚನಗಳ ಅರ್ಥವನ್ನು ಹಿಂದೆಯೇ ಬರೆಯಲ್ಪಟ್ಟಿರುತ್ತದೆ. ಮದ್ಯವು, ಅನ್ನಸಾರವು, ಪುಷ್ಪಸಾರವು, ಸುರಾ, ತಾಳೆ, ಈಚಲು, ತೆಂಗು ಈ ವೃಕ್ಷಗಳ ರಸವು ಆಸವವು, ಮಧು ಪುಷ್ಪಗಳಿಂದ ಉಂಟಾಗಿರುತ್ತದೆ. ಇವೆಲ್ಲವೂ ಸಮಾನ ದುರ್ಗುಣಗಳುಳ್ಳವುಗಳು.

॥ ಗದ್ಯ ॥ ಅತೋಮದ್ಯಪಾನಮದ ಜನಿತ ಮನಸ್ಥೈರ್ಯಾದೇರ್ಮೋಹಾತ್ಮಕತ್ವಾದುಕ್ತಾರ್ಥೋನ ಸಂಪದ್ಯತೇ ॥ ಕಿಂಚ ॥ ಸುರಾಪಾನಸ್ಯ ಮನೋವಿಕೃತರೇವ ಭವತಿ ॥ ನತುತ್ವದುಕ್ತಮನಸ್ಥೈರ್ಯಾದಿಕಂ ॥ ಶ್ಲೋ ॥ ತಥಾಚಕುಲಾರ್ಣವೇ ॥ ಚಕ್ರೇಸಿನ್ಯೋಗಿನೋವಿರಾಯೋಗಿನ್ಯೋಮದ ಮಂಥರಾಃ ॥ ಸಮಾಚರಂತಿ ದೇವೇಶಿ ಯಥೋಲ್ಲಾಸಂ ಮನೋಗತಂ । ಶನೈಃ ಪುಚ್ಛಂತಿ ಪಾರ್ಶ್ವಸ್ಥಾನಿಸ್ಮೃತ್ಯಾತ್ಮವಿವಕ್ಷಿತಂ । ನಿಧಾಯವದನೇ ಪಾತ್ರಂ ಪಿಬಿತಿಚಹಸಂತಿಚ । ಗತ್ವಾಸ್ವಪುರುಷಂ ಮತ್ವಾ ಕಾಂತಾನ್ಯಮವಲಂಬತೇ ।ತಥೈವಪುರುಷಸ್ತ್ವಾಪಿಪ್ರಾಥಾಂತೋಲ್ಲಾಸ ಸಂಯುತಃ॥ಪುರುಷಃ ಪುರುಷಂ ಮೋಹಾದಾಲಿಂಗತ್ಯಂಗನಾಂಗನಾಂ।ಪೃಚ್ಛಂತಿ ಸ್ವಪತಿಂಮುಗ್ಧಾಕಸ್ತ್ವಂ ಕೋಹಮಯಂಚಕಃ। ಕಿಂಕಾರ್ಯಂ ವಯಮಾಯಾತಾಃ ಕಿಮರ್ಥಮಿಹಸಂಸ್ಥಿತಾಃ। ತಥ್ಯಾನಂ ಕಿಮಿದಂಹಂತ ಗೃಹಂಕಿಂವಾಂಗನಾಕಿಮಂ । ಮುಖ್ಯೇ ಸಂಪ್ರೋಷ್ಯಮಿರಾಂ ಪ್ರಪದ್ಯಂತೇ ಸ್ತ್ರೀಯಃ ಪ್ರಿಯರ್ಣಾ । ಉಪದಂಶಂ ಮುಖೇಕ್ಷಿಪ್ತ್ವಾನಿಕ್ಷಿಪಂತಿ ಪ್ರಿಯಾನನೇ। ಗೃಹಾಂತ್ಯನ್ಯೋನ್ಯ ಪಾತ್ರಾಣಿ ವ್ಯಂಜನಾನಿಚ ಶಾಂಭವಿ। ಧೃತ್ವಾಶಿರಸಿನೃತ್ಯಂತಿ ಮದ್ಯಭಾಂಡಾ ನಿಯೋಗಿನಃ । ಪ್ರಸ್ಖಲತ್ಪದ ವಿನ್ಯಾಸಂ ನೃತ್ಯಂತಿಕುಲಕನ್ಯಯಃ। ಯೋಗಿನೋ ಮಧುಮತ್ತಾಸ್ತೆಪತಂತಿ ಪ್ರಮದೋರಸಿ। ಮದಾಕುಲಾಶ್ಚಯೋಗಿನ್ಯಃ ಪತಂತಿ ಪುರುಷೋರಸಿ । ಮನೋರಥಂ ಸುಸಂಪೂರ್ಣಂ ಕುರ್ವಂತಿ ಚಪರಸ್ಪರಂ ॥ ಇತ್ಯಾದಿ ವಿವಿಧಾಕ್ರೀಡಾಃ ಕುರ್ವಂತಿಕುಲನಾಯಕೇ ॥ ಇತಿ ॥

ಟೀ|| ಆದ್ದರಿಂದ ಮದ್ಯಪಾನ ಮತ್ತತೆಯಿಂದ ಉಂಟಾದ ಮನಸ್ಥೈರ್ಯಾದಿಗಳು ಭ್ರಮ ಸ್ವರೂಪವಾದ್ದರಿಂದ, ನೀವು ಹೇಳಿದ ಮಾತ್ರ ಸ್ಫುರಣಾದಿಗಳು ಸಂಭವಿಸುವುದಿಲ್ಲವು. ಇಷ್ಟೇ ಅಲ್ಲದೆ ಸುರಾಪಾನವನ್ನು ಮಾಡಿದವರ ಮನಸ್ಸು ವಿಕಾರವನ್ನು ಹೊಂದುವುದು (ಚಲಿಸಿಹೋಗುವುದು) ನೀನು ಹೇಳಿದ ಮನಸ್ಥೈರ್ಯಾದಿಗಳುಂಟಾಗುವುದಿಲ್ಲ. ಇದಕ್ಕೆ ಕುಲಾರ್ಣವದಲ್ಲಿ ಹೇಳಿದ್ದೇನೆಂದರೆ:—ಪರಮೇಶ್ವರನು ಪರಾಶಕ್ತಿಯೊಂದಿಗೆ ಹೇಳುತ್ತಾ ಇದ್ದಾನೆ. ಶ್ರೀ ಚಕ್ರಾಧಿದೇವತೆಯಾದ ಓ, ಪಾರ್ವತೀ, ಕೌಳದಲ್ಲಿ ವೀರರಾದ (ಯೋಗ್ಯರಾದ) ಪುರುಷರೂ (ಯೋಗಿಗಳಿಂದ) ಸಹಾ ಮದ್ಯಪಾನದಿಂದ ಮದೋನ್ಮತ್ತರಾದ ಯೋಗಿನಿಗಳೂ ಸಹಾ ತಮ್ಮ ತಮ್ಮ ಮನಸ್ಸಿನಲ್ಲಿ ಯಾವ ರೀತಿ ಉತ್ಸಾಹ ಉಂಟಾಗುತ್ತದೆಯೋ ಆ ರೀತಿಯಲ್ಲಿಯೇ ಸಂಚರಿಸುವರು. ಅವರ ವಿಲಾಸಗಳನ್ನು ಕೇಳುವಳಾಗು. ಮದ್ಯಪಾನದಿಂದ ಶರೀರ ಸ್ಮೃತಿ ಸ್ವಲ್ಪ ಮಟ್ಟಿಗೆ ತಪ್ಪಿದ ಕೂಡಲೇ ತಮ್ಮ ಪಕ್ಕದಲ್ಲಿರುವರೊಂದಿಗೆ, ನಾನು ಯಾರು ! ನಾನು ಏನು ಮಾಡುತ್ತಾ ಇದ್ದೇನೆ ! ಎಂದು ಮೆಲ್ಲಗೆ ಕೇಳುವನು. ಮದ್ಯಪೂರಿತವಾದ ಪಾತ್ರೆಯನ್ನು ಬಾಯಲ್ಲಿ ಇಟ್ಟುಕೊಂಡು ನಗುವನು. ಪಾನವನ್ನು ಮಾಡುವನು. ಸ್ತ್ರೀ ಪಾನವನ್ನು ಮಾಡಿ ಪರಪುರುಷನ ಹತ್ತಿರಕ್ಕೆ ಹೋಗಿ ತನ್ನ ಗಂಡನೆಂದು ಭಾವಿಸಿ ಅವನನ್ನು ಆಲಂಗಿಸುವಳು. ಅದೇ ರೀತಿ ಪುರುಷನೂ ಸಹ ಪೂರ್ತಿಯಾಗಿ ಪಾನಮಾಡಿ ಮತ್ತತೆಯಿಂದ, ಪುರುಷನು, ಪುರುಷನನ್ನೂ ಸ್ತ್ರೀಯು ಸ್ತ್ರೀಯಳನ್ನೂ ಆಲಂಗಿಸಿಕೊಳ್ಳುವರು. ಸ್ತ್ರೀಯರು ತಮ್ಮ ಗಂಡಂದಿರನ್ನು ನೋಡಿ ಮುಗ್ಧರಾಗಿ, ನಾನು ಯಾರು, ನೀನು ಯಾರು ಇದು ಏನು, ಎಂದು ಕೇಳುವರು. ಮತ್ತು ನಾವು ಯಾತಕ್ಕೆ ಬಂದಿದ್ದೇವೆ. ಯಾತಕ್ಕಾಗಿ ಇಲ್ಲಿ ಬಂದಿದ್ದೇವೆ. ಅದು ಸವಾರಿಯೆ ? ಗೃರ್ಹವೇ ? ಗೃಹವೇ ? ಸ್ತ್ರೀಯೋ ? ಪುರುಷನೇ ? ಎಂದು ಕೇಳುವಳು. ಬಾಯಿ ತುಂಬಾ ಮದ್ಯವನ್ನು ಸುರಿದುಕೊಂಡು ತನ್ನ ಪ್ರಿಯನಿಗೆ ಶೇಷವನ್ನು ಕೊಡುವಳು. ತಮ್ಮ ಬಾಯಿಯಲ್ಲಿ ಮತ್ಸ್ಯ ಮಾಂಸಗಳನ್ನು ಕಚ್ಚಿಕೊಂಡುಇರುವುದನ್ನು ಇತರರು ಅವುಗಳನ್ನು ವ್ಯಂಜನದಂತೆ ಬಾಯಿ ಇಂದಲೇ ಗ್ರಹಿಸುವರು. ಯೋಗೀಶ್ವರೆಂದೆನಿಸಿಕೊಳ್ಳುವ ಪುರುಷರು, ಮದ್ಯಭಾಂಡಗಳನ್ನು ಸುರಾ ಘಟಗಳನ್ನು ತಲೆಯ ಮೇಲೆ ಬಾರಲು ಹಾಕಿಕೊಂಡು ನೃತ್ಯವನ್ನು ಮಾಡುವರು. ಕುಲಶಕ್ತರಾದ ಸ್ತ್ರೀಯರು

ತಪ್ಪು ಹೆಜ್ಜೆಗಳನ್ನು ಹಾಕುತ್ತಾ ಜೋಲಾಡುತ್ತಾ ಪುರುಷರ ವಕ್ಷಸ್ಥಳಗಳ ಮೇಲೂ ಪುರುಷರು ಸ್ತ್ರೀಯರ ವಕ್ಷಸ್ಥಳಗಳ ಮೇಲೂ ಜ್ಞಾನವಿಲ್ಲದೇ ಹೊರಳಾಡುತ್ತಾ ಬಿದ್ದು ಅವರವರ ಕೋರಿಕೆಗಳನ್ನು ಪೂರ್ತಿಯಾಗಿ ತೀರಿಸಿ ಕೊಳ್ಳುವರು. ಈ ಮೊದಲಾದ ವಿಕಾರಗಳನ್ನು ಮದ್ಯಪಾನವನ್ನು ಮಾಡಿದ ಕೌಳರು, ಸ್ತ್ರೀಪುರುಷರು ಮಾಡುತ್ತಾರೆಂದು ಪಾರ್ವತಿಗೆ ಶ್ರೀ ಪರಮೇಶ್ವರನು ಹೇಳಿದ್ದಾನಾದ್ದರಿಂದ ಸುರಾಪಾನ ಮಾಡೋಣದ್ದರಿಂದ ಉಂಟಾದ ಮತ್ತತೆಯಿಂದ ಹುಟ್ಟಿದ ಉಲ್ಲಾಸವು ಚಾಂಚಲ್ಯವೂ, ಸಮಯದಲ್ಲಿ ಮನ ಸ್ಥೈರ್ಯ ಪೂರ್ವಕವಾದ ದೇವತಾರಾಧನೆ, ಧ್ಯಾನ, ಉಂಟಾಗುತ್ತದೆಂದು ಹೇಳತಕ್ಕದ್ದು ಅಸತ್ಯವು. ಸರ್ವಥಾ ಸದ್ಬುದ್ಧಿ ಉಂಟಾಗುವುದಿಲ್ಲ.

ಗ|| "ನನುಸುರಾಪಾನ ಜನಿತ ವಿಶೇಷ ಮನೋ ವಿಕೃತಿ ತ್ಯಾಗಾವಸರ ಪ್ರವರ್ತ ಮಾನ ಮನೋಲ್ಲಾಸ ಸಮಯೇ ಮನಸ್ಥೈರ್ಯ ಪೂರ್ವಕ ದೇವತಾಭಾವ ಮಾಪದ್ಯತ ಇತಿಚೇನ್ನ || ತಸ್ಯೈವ ಮೋಹಾತ್ಮಕತ್ವೇನ ವಿವಕ್ಷಿತತ್ವಾತ್ । ಪಾನಜನಿತಮನಸ್ಥೈರ್ಯಾದಿಕಂ ಮೋಹಾತ್ಮಕಮಿತಿ ಚೇನ್ಮನಸ್ಥೈರ್ಯರಹಿತೋಪಾಸನಾಯಾಃನಿಷಿದ್ಧತ್ವಾದಿತಿ ಚೇನ್ನ || ಶ್ಲೋಕ || ಆಹಾರ ಶುದ್ಧೌಸತ್ವ ಶುದ್ಧಿಸ್ಸತ್ವಶುದ್ಧೌಧ್ರುವಾಸ್ಮೃತಿಃ। ಸ್ಮೃತಿಲಾಭಾದ್ವಃನಾತಾಸ್ತತಶ್ಚಿತ್ತ ಪ್ರಸನ್ನತಾ||ಇತಿಮನಸ್ಥೈರ್ಯಸ್ಯಾ ಹಾರಾದಿ ನಿಯಮ ಪೂರ್ವಕತ್ವೇನೋಕ್ತತ್ವಾತ್ಸುರಾಪಾನಾತ್ಮದಕ ಮಂತ್ರಸ್ಮರಣಂ ಮನಸ್ಥೈರ್ಯಂ ಭವಪಾಶ ನಿವೃತ್ತಿಶ್ಚನಸಂಭವತಿ ತಸ್ಮಾತ್ತ್ವದುಕ್ತಾಹಂಭಾವನಾನುಸಂಧಾನ ಮಪ್ಯುಕ್ತದೋಷೋಮುಕ್ತಿವಾರ ಯೇನ"||

ತಾ|| ಅಯ್ಯಾ! ಸುರಾಪಾನದಿಂದ ಹುಟ್ಟಿದ ಮನೋ ವಿಕಾರಗಳನ್ನು ತ್ಯಜಿಸಬೇಕಾದ ಅವಸರದಲ್ಲಿ ಉಂಟಾಗುವ ಮನಸ್ಥೈರ್ಯಾದಿಗಳು ಮನೋ ಲ್ಲಾಸ ಸಮಯದಲ್ಲಿ ಮನಸ್ಥೈರ್ಯ ಪೂರ್ವಕವಾದ ದೇವತಾಭಾವವನ್ನು ಹೊಂದುವುದೆಂಬ ವಿಷಯವು ಅಸಂಭವವು. ಅಂಥಾ ಸಮಯದಲ್ಲಿ ಉಂಟಾದ (ಉತ್ಪತ್ತಿಯಾದ) ಚಿತ್ತವೃತ್ತಿಯೇ ಮೋಹವೆಂದು ಹೇಳಲ್ಪಟ್ಟಿರೋಣದ್ದರಿಂದ ಮನಸ್ಥೈರ್ಯವಿಲ್ಲದ ಉಪಾಸನೆಯು ನಿಷಿದ್ಧವೆಂದು ಹೇಳಿದರೆ ಅಲ್ಲ.

ಸಾತ್ವಿಕಾಹಾರದಿಂದ ಸತ್ವಗುಣವು ವೃದ್ಧಿಯಾಗುತ್ತದೆ. ಅದರಿಂದ ನಿಶ್ಚಲವಾದ ಬುದ್ಧಿಯುಂಟಾಗುತ್ತದೆ. ಅದರಿಂದ ದುಃಖ ನಾಶವು, ತದ್ವಾರಾ ಚಿತ್ತ ನೈರ್ಮಲ್ಯವು ಉಂಟಾಗುತ್ತದೆ. ಈ ರೀತಿ ಮನಸ್ಥೈರ್ಯಕ್ಕೆ ಆಹಾರಾದಿ ನಿಯಮವು ಪ್ರಧಾನವಾದದ್ದು. ಆದ್ದರಿಂದ ಸುರಾಪಾನದಿಂದ ನೀನು ಹೇಳಿದ ಮಂತ್ರ ಸ್ಫುರಣೆಯು, ಮನೋನಿಶ್ಚಲತೆಯು ಅಜ್ಞಾನ ನಾಶನವು ಸಂಭವಿಸುವುದಿಲ್ಲ. ಆದ್ದರಿಂದ ನೀನು ಹೇಳಿದ ಅಹಂಭಾವನಾಶತ್ವವು ಸಿದ್ಧಿಸುವುದಿಲ್ಲವು. ಕೌಳರಿಗೂ ಸಹ ಸುರೆಯಲ್ಲಿರತಕ್ಕ ದೋಷವನ್ನು ಹೋಗಲಾಡಿಸಲು ಸಾಧ್ಯವಿಲ್ಲ.

ಗ॥ "ನನು" ನಮಾಂಸಭಕ್ಷಣೇ ದೋಷೋನ ಮದ್ಯೇ ನಚ ಮೈಥುನೇ। ಪ್ರವೃತ್ತಿರೇಷಾ ಭೂತಾನಾಂ ನಿವೃತ್ತಿಸ್ತುಮಹಾಫಲಾಃ ॥ ಇತಿ ॥ ಮನುನೈವೋಕ್ತತ್ವಾನ್ಮಾಂ ಸಭಕ್ಷಣಾದೇರ್ನ ನಿಷೇಧತ್ವಾದಿತಿಚೇನ್ನ ॥ ಶ್ಲೋ ॥ "ಸ್ವಮಾಂಸಂ ಪರಮಾಂಸೇನಯೋವರ್ಧಯಿತು ಮಿಚ್ಛತಿ" ॥ ಅನಭ್ಯರ್ಚ್ಯ ಪಿತಾಂ ದೇವಾ ನನಭ್ಯರ್ಚ್ಯ ಮಾಂಸಭಕ್ಷಣಾದಿಕಂ ಕುರ್ವಂತಿಚೇತ್ಪಾತಕಿನೋ ಭವಂತೀತಿ । ತೇನೈವೋಕ್ತತ್ವಾತ್ । ಅತ್ರಾಯಂ ವಿವೇಕಃ । ವೈದಿಕೋಧರ್ಮೋ ದ್ವಿವಿಧಃ ಪ್ರವೃತ್ತಿರ್ನಿವೃತ್ತಿಶ್ಚೇತಿ।ತತ್ರಬ್ರಾಹ್ಮಣಾದಿಭಿಃ ಶ್ರುತಿಸ್ಮೃತ್ಯುಕ್ತ ರೀತ್ಯಾ ಸ್ವಸ್ವವರ್ಣಾಶ್ರಮಾಚಾರೇಣಾನುಷ್ಠೀಯ ಧರ್ಮೋ ಪ್ರವೃತ್ತಿ ರಿತ್ಯುಚ್ಯತೇ ॥ ಶ್ಲೋ ॥ ನಸುತಾನಧನಂ ದಾರಾನದೇಹೋಗೇಹಯೇವಚ । ಕದಾಚಿದುಪಕುರ್ವಂತಿ ವರಾಕಾಃಕ್ಷಣಭಂಗುರಾಃ ಇತಿ, ಪಾದ್ಮೋಕ್ತರೀತ್ಯಾ ದೇಹಾದಿಷು ವೈರಾಗ್ಯ ಪೂರ್ವಕಮಾತ್ಮಾ ಸ್ವರೂಪಾವಸ್ಥಾಯಾ ಮನುಷ್ಟೀಯ್ಯ ಮಾನೋಧರ್ಮಃ ನಿವೃತ್ತಿರಿತ್ಯುಚ್ಯತೇ। ತತ್ರಪ್ರವೃತ್ತಿಧರ್ಮರತನಾಂ ಯಜ್ಞಾದಿ ದ್ವಾರಾ ಸ್ವರ್ಗಾದಿಷು ಪುಣ್ಯಫಲಾನುಭವಃ।ನಿವೃತ್ತಿಧರ್ಮರತಾನಾಂ ಮೋಕ್ಷಂಚಸಿದ್ಧ್ಯತಿ। ತಥಾಚೋಕ್ತಮನುನಾ ॥ ಶ್ಲೋ ॥ ಪ್ರವೃತ್ತಿಸೇವ ಮಾನಸ್ತು ಭೂತಾನ್ಯತ್ಯೇತಿ ಪಂಚವೈ ॥ ಅತಏವ ॥ ಭೂತಾನಾಮೇಷಾ ಪ್ರವೃತ್ತಿರೂಪೋ ಧರ್ಮ ಇತ್ಯೇತಚ್ಛಬ್ದೇನೈವನಿರ್ದಿಷ್ಟಃ ॥ ನಚೇದ್ದೇವಾದಿಸಾಮ್ಯಂ ಕಥಮುಪನ್ಯಸ್ಯತೇ ॥ ಏತಸ್ಮಾನ್ನಿವೃತ್ತಿಃ। ನಿವೃತ್ತಿ ರೂಪೋಧರ್ಮಃ ಪುನರಾವೃತ್ತಿ ರಹಿತತ್ವಾತ್ಸರ್ವಾಧಿಕೋ ಭವತೀತಿ। ನತುಯಾಗಾದಿಕಂವಿನಾಸ್ವದೇಹ ಭರಣಾರ್ಥಂ ಕಾಮಚಾರೇಣ ಮಾಂಸಾದಿಕಂ ನಗ್ರಾಹ್ಯಮಿತಿ ॥

ತಾ॥ ಪೂರ್ವ ಪಕ್ಷವು ॥ ಮಾಂಸ ಭಕ್ಷಣದಲ್ಲಿಯೂ, ಮದ್ಯಪಾನದಲ್ಲಿಯೂ ಸಂಭೋಗದಲ್ಲಿಯೂ, ದೋಷವಿಲ್ಲವೆಂತಲೂ ಭೂತಗಳಿಗೆ ಇದು ಪ್ರವೃತ್ತಿ ಎಂತಲೂ, ನಿವೃತ್ತಿಉಂಟಾದಾಗ ಮಹಾಫಲವೆಂತಲೂ, ಮನುವಚನವುಮನುವಿನಿಂದಲೇ ಹೇಳಲ್ಪಟ್ಟಿರೋಣವ್ದರಿಂದ ಮಾಂಸಭಕ್ಷಣಾದಿಗಳಲ್ಲಿ ನಿಷೇಧಗಳಿಲ್ಲವೆಂದು ಹೇಳಕೂಡದು. ದೇವತೆಗಳನ್ನುದ್ದೇಶಿಸಿ ಯಾಗಗಳಲ್ಲಿಯೂ, ಪಿತೃಕಾರ್ಯಗಳಲ್ಲಿಯೂ, ತಮ್ಮ ಸ್ವೇಚ್ಛೆಯಾಗಿ ಪರಮಾಂಸದಿಂದ ತನ್ನ ಮಾಂಸವನ್ನು ವೃದ್ಧಿ ಹೊಂದುವ ಕೋರಿಕೆಯುಳ್ಳವರು, ಮಹಾಪಾಪಿಗಳಾಗುತ್ತಾರೆಂದು ಆ ಮನುವೇ ಹೇಳಿರೋಣವ್ದರಿಂದ ಇಲ್ಲಿ ಊಹಿಸಬೇಕಾದ್ದೆನೆಂದರೆ, ವೈದಿಕ ಧರ್ಮಗಳು, ಎರಡು ವಿಧಗಳು, ಪ್ರವೃತ್ತಿ, ನಿವೃತ್ತಿಯೆಂದು. ಅವರಲ್ಲಿ ಬ್ರಾಹ್ಮಣಾದಿಗಳಿಂದ ತಮ್ಮ ತಮ್ಮ ವರ್ಣಾಶ್ರಮ ಪ್ರಕಾರವಾಗಿ, ಶ್ರುತಿ ಸ್ಮೃತಿಗಳಲ್ಲಿ ಹೇಳಿದ ಪ್ರಕಾರವಾಗಿ, ನಡೆಸಿದ ಧರ್ಮವು ಪ್ರವೃತ್ತಿಯೆಂತಲೂ, ಪುತ್ರರು, ಧನ ಭಾರ್ಯಾ, ಶರೀರವು, ಗೃಹವು, ತನಗೆ ಉಪಕಾರವನ್ನು ಮಾಡುವುದಿಲ್ಲವೆಂತ ತಿಳಿದು ಅವುಗಳು ಕವಡೆಗೆ ಸಮಾನವೆಂತಲೂ, ಕ್ಷಣ ಭಂಗುರವೆಂತಲೂ ತಿಳಿದು ಪುರಾಣೋಕ್ತ ಪ್ರಕಾರವಾಗಿ ವೈರಾಗ್ಯವನ್ನು ಹೊಂದಿ, ಆತ್ಮ ಸ್ವಸ್ವರೂಪ ಸ್ಥಿತಿಯಲ್ಲಿ ಆಚರಿಸಿದ ಧರ್ಮವು ನಿವೃತ್ತಿ ಎಂತ ಹೇಳಲ್ಪಡುತ್ತದೆ. ಅವರಲ್ಲಿ ಪ್ರವೃತ್ತಿ ಧರ್ಮದಲ್ಲಿರುವವರಿಗೆ ಸ್ವರ್ಗಾದಿ ಪುಣ್ಯ ಲೋಕ ಪ್ರಾಪ್ತಿಯೂ, ನಿವೃತ್ತಿ ಧರ್ಮ ಉಳ್ಳವರಿಗೆ ಮೋಕ್ಷವೂ ಸಿದ್ಧಿಸುತ್ತದೆ. ಈ ಅರ್ಥದಲ್ಲಿ ಮನುವಚನವೂ ಪ್ರವೃತ್ತಿ ಉಳ್ಳವರಿಗೆ ದೇವಸಮಾನತ್ವವೂ, ನಿವೃತ್ತಿ ಮಾರ್ಗವನ್ನು ಹೊಂದಿದವರು ಪಂಚಭೂತಗಳನ್ನು ಅತಿ ಕ್ರಮಿಸಿ, ಮೋಕ್ಷವನ್ನು ಹೊಂದುವರೆಂತಲೂ, ಆದ್ದರಿಂದಲೇ ಪ್ರವೃತ್ತಿ, ಸ್ವರ್ಗಾದಿ ಲೋಕಗಳನ್ನುಂಟುಮಾಡುತ್ತದೆಂತಲೂ ನಿವೃತ್ತಿ ಮಾರ್ಗವು ಸರ್ವೋತ್ಕೃಷ್ಟವೆಂತಲೂ ತಿಳಿಯಬೇಕು. ಆದ್ದರಿಂದ ಯಾಗಾದಿ ಕರ್ಮಗಳಲ್ಲಿ ಅಲ್ಲದೆ ತಮ್ಮ ದೇಹ ಪೋಷಣಾರ್ಥವಾಗಿ ಮಾಂಸ ಭಕ್ಷಣೆಯನ್ನು ಗ್ರಹಿಸಕೂಡದೆಂತ ಭಾವವು.

ನಮಾಂಸಭಕ್ಷಣೇದೋಷೋನ ಮದ್ಯೇನಚ ಮೈಥುನೇತ್ಯುಕ್ತ್ವಾ ।
ಕಿಂಚ । ಮಾಂಸಭಕ್ಷಣಾದಾಉಕ್ತದೋಷೋನಾಸ್ತೀತಿಚೇತ್ ॥ ಶ್ರು ॥
ನಸುರಾಂಪಿಬೇನ್ನಕಲಜಂಭುಂಜೇನ್ನಮಾಂಸಂ ಭಕ್ಷಯೇದಿತ್ಯಾದಿ
ಶಾಸ್ತ್ರಸ್ಯಾನುಪಯೋಗ ಏವ । ಅತೋಯೋಗಾದಿಷ್ವಿನಾಗತೋ

ಮಾಂಸಭಕ್ಷಣಾದಿ ಕಂಸಕಾರ್ಯಮಿತಿ। ಮಾಸ್ತುಕಾಮ ಚಾರೇಣ ಮಾಂಸ ಭಕ್ಷಣಕಿಂತು ॥

ಶ್ಲೋ ॥ ಕ್ರೀತ್ವಾಸ್ವಯಾಪ್ಯುತ್ಪಾದ್ಯ ಪರೋಪಕೃತಮೇವವಾದೇರ್ವಾ ಪಿತ್ವಾಶ್ಚಾರ್ಚಯಿತ್ವಾಖಾದನ್ಮಾಂಸಂನದುಷ್ಯತೀತಿ । ಮನುವಚನೇನ ದೇವ ತಾಯಾಗಾದೌ ಮಾಂಸಭಕ್ಷಣಾನ್ನ ದೃಷ್ಟತ್ವಾ ದ್ದೇವೀ ಯಾಗಾದಾವಸ್ಮಾಕ ಮಪಿನದೋಷ ಇತಿಚೇನ್ನ॥ ದೇವಿಯಾಗಲಕ್ಷಣಂ॥ ಸದ್ಯೋಮ್ರದ-ಕೋಪ-ಶಮನಂ ಪತನಂ-ಗಾನ ನರ್ತನೇ । ವೇಣು ವೀಣಾದಿ ವಾದ್ಯಂಚ ಕವಿತಾರಚನಾದಿಕಂ ರೋದಸಂಭಾಷಣಂಪಾತಃ ॥ ಸ ಮು ದ್ಘಾ ನ ಂ ವಿ ಜೃ ಂ ಭ ಣ ಂ । ಗಮನಂ ವಿಕ್ರಿಯಾ ದೇ ವೀ ಯಾ ಗ ಇ ತ್ಯ ಭಿ ಯ ತ ಇ ತಿ । ತಂತ್ರೋಕ್ತ ಯಾಗಲಕ್ಷಣಸ್ಯ ಶ್ರುತಿಸ್ಮೃತಿಲಕ್ಷಣತ್ವಾದಗ್ನಿಷ್ಟೋಮಾದಾವಿವ ದೇವ್ಯರ್ಚನಾಯಾಂ ಬ್ರಾಹ್ಮಣಸ್ಯ ಮಾಂಸಭಕ್ಷಣಾದೇಃ ಸ್ಮೃತಿಷ್ವನುಕ್ತದ್ವಾತ್॥ ಕಿಂಚ ॥ ಶ್ಲೋ ॥ ಅನ್ಯೇಕೃತಯುಗೇ ಧರ್ಮಾ ಸ್ತ್ರೇತಾಯಾಂ ದ್ವಾಪರೇ ಪರೇ । ಅನ್ಯೇ ಕಲಿಯುಗೇನ್ನ್ಯಾಣಾಂಯುಗಹ್ರಾಸಾನುರೂಪತ ॥ ಇತಿ ॥ ಮನುವ ಚನೇನ ಯುಗಹ್ರಾಸಾನು ರೂಪತಸ್ತತ್ತದ್ಯುಗೇಷು ಧರ್ಮಾ ಅಪಿಭಿನ್ನಾಭವಂತೀ॥ ಅತಏವಗೋಮೇಧ ನರಮೇಧಾಶ್ವಮೇಧ ಸುರಾಗ್ರಹಾದಯೋಧರ್ಮಾಃ ಸ್ಮೃತಿ ಷುಉಕ್ತಾಪಿ ಕಲೌ ಪ್ರತಿಷೇದಿತಾಃ । ತಥಾಚಸ್ಮೃತಯಃ ॥ ಶ್ಲೋ ॥ ಸಮುದ್ರಯಾತ್ರಾ ಸ್ವೀಕಾರಃ ಕಮಂಡಲ ವಿಧಾರಣಂ।ದ್ವಿಜಾನಾಮಸವರ್ಣಾಸು ಕನ್ಯಾ ಸೂಪಯಮಸ್ಥಥಾ । ದೇವರಾದ್ಯೈ (ದೇವರೇಣ) ಸ್ಸುತೋತ್ಪತ್ತಿರ್ಮಧು ಪರ್ಕೇಪಶೋರ್ವಧಃ। ಮಾಂಸದಾನಂ ತಥಾಶ್ರಾದ್ಧೇವಾನ ಪ್ರಸ್ಥಾಶ್ರಮಸ್ತಥಾ । ದತ್ತಾಕ್ಷತಾಯಾಃ ಕನ್ಯಾಯಾಃ ಪುನರ್ದಾನಂ ಪರಸ್ಯಚ। ದೀರ್ಘಕಾಲಂ ಬ್ರಹ್ಮ ಚರ್ಯಂ ನರಮೇಧಾಶ್ವಮೇಧಕಾ । ಮಹಾ ಪ್ರಸ್ಥಾನಗಮನಂ ಗೋಮೇಧ ಶ್ಚತಥಾ ಮಖಃ । ಮದ್ಯಪಾನಂ ಮಹಾಪಾಪೇ ಮರಣಾಂತ ವಿಶೋಧನಂ । ಸೌತ್ರಾಮಣ್ಯಾದಿಯಜ್ಞೇಪಿಸುರಾಪಾತ್ರಗ್ರಹಂತಥಾ ॥ ಮ ದ್ಯ ಭ ಕ್ಷ್ಯಾ ದಿ ವಾಮಾದ್ಯಾಃ ಶಮುಸ್ಯತು ಸಮಾನತಾ । ವಿವಾಮಾಂಸಾದ್ವಿತಯೋ ಸರ್ವ ಶಿಷ್ಟೈ ಷ್ಟತಪನಾದರಾತ್ । ಇಮಾಂಧರ್ಮಾನ್ಕಲಿಯುಗೇ ವರ್ಜಾನಾಹುರ್ಮನೀಷಿಣ ॥ ಇತಿ ॥

ತಾ॥ ಪೂರ್ವ ಪಕ್ಷವು ಮಾಂಸವನ್ನು ಕೊಂಡುಕೊಂಡಾಗಲೀ, ಸ್ವಯಂ ಪಕ್ವಮಾಡಿಯಾಗಲೀ, ಪರರಿಂದ ಪ್ರತ್ಯುಪಕಾರ ರೀತ್ಯಾ ಗ್ರಹಿಸಿಯಾಗಲೀ ದೇವತೆಗಳಿಗೂ ಅರ್ಪಿಸಿ, ತಾನು ಭುಜಿಸಿದ್ದಾದರೆ ದೋಷವಿಲ್ಲವೆಂಬ ಮನುವಚನಗಳಿಂದ, ನಮಗೆ, ದೇವೀಯಾಗದಲ್ಲಿ ಮಾಂಸ ಭಕ್ಷಣ ದೋಷವಿಲ್ಲವೆಂದು ಹೇಳಿದರೆ ಅದು ಸಮ್ಮತವಲ್ಲ. ಯಾತಕ್ಕೆಂದರೆ ಈ ದೇವೀಯಾಗ ಲಕ್ಷಣವು ಕುಲಾರ್ಣವದಲ್ಲಿ ಹೇಳಲ್ಪಟ್ಟಿರುತ್ತದೆ. ಅತಿ ಸಂತೋಷವು ಅತಿ ಕೋಪವು, ಅತಿಶಾಂತಿ ಸ್ಮೃತಿ ಇಲ್ಲದೇ ಬಿದ್ದು ಹೋಗುವಿಕೆ, ಗಾನವು ನೃತ್ಯವು, ವೇಣು ವೀಣಾದಿ ವಾದ್ಯವು ಕವಿತತ್ವ ರಚನೆ, ರೋದನೆ, ಪ್ರಲಾಪ, ಪತನ, ಜೋಲಾಡುವಿಕೆ ಬಿದ್ದು ಏಳುವುದು, ವಿಜೃಂಭಣೆ, ಓಡಿ ಹೋಗುವಿಕೆ, ವಿಕಾರ ಚೇಷ್ಟೆಗಳನ್ನು ಮಾಡುವಿಕೆ, ಇವೆಲ್ಲವೂ (ಇರೋಣದ್ದರಿಂದ) ಇರುವಿಕೆಯು ದೇವೀಯಾಗವೆಂತಲೂ, ತಮ್ಮ ಮತಗಳಲ್ಲಿ ಹೇಳಿರತಕ್ಕ ಯಾಗ ಲಕ್ಷಣಗಳು, ಶ್ರುತಿ ಸ್ಮೃತಿ ವಿಲಕ್ಷಣಗಳಾಗಿರೋಣದ್ದರಿಂದ, ಅಗ್ನಿಷ್ಟೋಮ ಪ್ರಕಾರ ದೇವೀ ಯಜ್ಞದಲ್ಲಿ ಬ್ರಾಹ್ಮಣನಿಗೆ ಮಾಂಸ ಭಕ್ಷಣವು ಸ್ಮೃತಿ ವಿಹಿತವಾದರಿಂದ ದೋಷವು ಹೇಳಲ್ಪಡಲಿಲ್ಲವೆಂದರೆ, ಅದು ಸಮ್ಮತವಲ್ಲ. ಅದೂ ಅಲ್ಲದೆ ಕೃತಯುಗ ಧರ್ಮಗಳೇ ಬೇರೆ; ತ್ರೇತಾಯುಗ, ದ್ವಾಪರಯುಗ, ಕಲಿಯುಗ ಧರ್ಮಗಳೇ ಬೇರೆ ಬೇರೆಯಾಗಿರುತ್ತವೆ. ಯುಗಗಳು ತಾರತಮ್ಯಗಳ ಪ್ರಕಾರ ಧರ್ಮಗಳೂ ವ್ಯತ್ಯಾಸವಾಗಿರುತ್ತವೆ. ಆದ್ದರಿಂದ ಕಲಿಯುಗದಲ್ಲಿ ಗೋಮೇಧ, ಅಶ್ವಮೇಧ, ನರಮೇಧ, ಮೊದಲಾದುವುಗಳು ಸ್ಮೃತಿಗಳಲ್ಲಿ ಹೇಳಲ್ಪಟ್ಟಿದ್ದಾಗ್ಯೂ ಕಲಿಯಲ್ಲಿ ನಿಷೇಧಿಸಲ್ಪಟ್ಟಿರುತ್ತವೆ.

(ಕಲಿವರ್ಜ್ಯಾನಿ) ಸ್ಮೃತಿಗಳಲ್ಲಿ ಈ ರೀತಿ ಹೇಳಲ್ಪಟ್ಟಿರುತ್ತದೆ:- ಸಮುದ್ರಯಾತ್ರೆಯನ್ನು ಅಂಗೀಕರಿಸುವಿಕೆ, ಕಮಂಡಲ ಧಾರಣೆ (ಸನ್ಯಾಸಾಶ್ರಮ) ಬ್ರಾಹ್ಮಣರು ಮಿಕ್ಕ ಮೂರು ಜಾತಿಗಳ ಕನ್ಯೆಯರನ್ನು ವಿವಾಹವನ್ನು ಮಾಡಿಕೊಳ್ಳುವಿಕೆ, ಭಾವ, ಮೈದುನಿರು ಇವರುಗಳಿಂದ ಸ್ತ್ರೀಯು ಧರ್ಮಸಂತಾನವನ್ನು ಪಡೆಯುವಿಕೆ, ಮಧುಪರ್ಕದಲ್ಲಿಯೂ, ಗೋವಧ, ಶ್ರಾದ್ಧಕಾಲಗಳಲ್ಲಿಯೂ ಮಾಂಸದಾನವು, ವಾನಪ್ರಸ್ಥಾಶ್ರಮವು, ಅಕ್ಷತೆ ಸಹಿತವಾಗಿ ಒಬ್ಬನಿಗೆ ದಾನ ಮಾಡಿದ ಕನ್ಯೆಯನ್ನು, ಪುನಃ ಮತ್ತೊಬ್ಬನಿಗೆ ದಾನ ಮಾಡುವಿಕೆಯೂ, ಚಿರಕಾಲ ಬ್ರಹ್ಮಚರ್ಯೆಯನ್ನು ಪಾಲಿಸುವಿಕೆಯೂ, ನರ

ಮೇಧ, ಅಶ್ವಮೇಧ, ಮಹಾಪ್ರಸ್ಥಾನಗಮನ, ಮಹಾಪಾಪಗಳನ್ನು ಮಾಡಿ ಮರಣಾಂತಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವಿಕೆ, ಸೌತ್ರಾಮಣಿಯಲ್ಲಿ ಸುರಾಪಾತ್ರಗ್ರಹಣವೂ, ಮದ್ಯಪಾನಉಳ್ಳ ವಾಮಾಚಾರಾದಿಗಳು ಸರ್ವ ವರ್ಣ ಸಮಾನತ್ವವೆನ್ನುವಶಾಂತಿ(ಸಹನೆಯು)ಈ ಕೃತ್ಯಗಳು ಕಲಿಯುಗದಲ್ಲಿ ಪೂರ್ವೋಕ್ತರ ಮೀಮಾಂಸಗಳಲ್ಲಿ ಸಕಲಶಿಷ್ಟಜನರಿಂದ ಅಂಗೀಕರಿಸಲ್ಪಡಲಿಲ್ಲವಾದ್ದರಿಂದ ಈವರ್ಗಗಳು ಕಲಿಯುಗದಲ್ಲಿ ವರ್ಜಿಸಲ್ಪಟ್ಟವುತ್ತನೆಂದು ವಿದ್ವಾಂಸರು ಹೇಳುತ್ತಾರೆ.

“ ತಸ್ಮಾದ್ಯುಗಹ್ರಾಸತಃ ಸ್ಮೃತ್ಯುಕ್ತ:ಧರ್ಮಾಣಾಮಪಿ ನಿಷೇಧೇ ಪ್ರಾಪ್ತೇ ಶ್ರುತಿಸ್ಮೃತಿ ವಿರುದ್ಧಾನಾಂ ತಂತ್ರೋಕ್ತ ಧರ್ಮಾಣಾಮಾಚರಣ ವಿಷಯೇ ತಾಂತ್ರಿಕಾನೇವಪ್ರಷ್ಟವ್ಯಂ। ಕುತ ಇತಿ ಚೇತ್॥ ಸದಾಚಾರಂ ಪರಿಭ್ರಷ್ಟಃ ಕುಲಾಚಾರಂಸಮಾಶ್ರಯೇ॥ಇತಿ॥ ಕುಲಾರ್ಣವೇ ॥ಶಿವೇನೋಕ್ತತ್ವಾತ್ಸದಾಚಾರ ಭ್ರಷ್ಟನಾಂಕಾಮಾಚಾರಾಣಾಮವೈದಿಕಾನಾಮೇವ ಕೌ ಲಾ ದ್ಯಾ ಚಾ ರ ಪ್ರವೃತ್ತಿರತಃಸ್ತೇಷು ಪ್ರವೃತ್ತಾಃ ಪ್ರತಾರಿತಾ ಭ್ರಷ್ಟಾಭವಂತಿ ” ॥

ತಾ॥ ಆದ್ದರಿಂದ ಯುಗಗಳ ಕ್ಷೀಣತ್ವಗಳಿಂದ ಸ್ಮೃತಿಗಳಲ್ಲಿ ಹೇಳಿರತಕ್ಕ ಧರ್ಮಗಳೇ ಕ್ರಮಕ್ರಮವಾಗಿ ನಿಷೇಧಿಸಲ್ಪಡುತ್ತಾ ಇರೋಣಾದ್ದರಿಂದ ಶ್ರುತಿ ಸ್ಮೃತಿಗಳಿಗೆ ವಿರೋಧವಾಗಿರತಕ್ಕ (ಪರಸ್ಪರ) ತಂತ್ರಗಳಲ್ಲಿ ಹೇಳಿರತಕ್ಕ ಧರ್ಮಗಳನ್ನು ಆಚರಿಸುವ ವಿಚಾರವನ್ನು ಕುರಿತು, ತಂತ್ರಮಾರ್ಗದಲ್ಲಿಯೇ ಪ್ರವರ್ತಿಸುವರಲ್ಲಿಯೇ ವಿಚಾರಿಸಬೇಕು. ಯಾತಕ್ಕೆಂದರೆ ಸದಾಚಾರವನ್ನು ಬಿಟ್ಟು ಭ್ರಷ್ಟರಾದವರು ಕೌಳಾಚಾರವನ್ನು ಆಶ್ರಯಿಸಬೇಕೆಂದು “ ಕುಲಾರ್ಣವದಲ್ಲಿ ಶ್ರೀಪರ ಶಿವನಿಂದ ಹೇಳಲ್ಪಟ್ಟಿರೋಣದ್ದರಿಂದ, ಸ್ವೇಚ್ಛಾಚಾರವುಳ್ಳ ಸದಾಚಾರ ಭ್ರಷ್ಟರಾದ ಅವೈದಿಕರಿಗೇ ವಾಮಾಚಾರ ಪ್ರವೃತ್ತಿಯಾದ್ದರಿಂದ ಅವುಗಳಲ್ಲಿ ಪ್ರವೇಶಿಸಿ ತೂಗಾಡತಕ್ಕವರು ಭ್ರಷ್ಟರೆಂದೆನ್ನಿಸಿಕೊಳ್ಳುವರು. ಆದ್ದರಿಂದ ಭ್ರಷ್ಟಾಚಾರಗಳು ಭ್ರಷ್ಟರಿಗೇನೇ ತಿಳಿಯುತ್ತದೆ.

**(ಸಿದ್ಧಾಂತವು)**

ಗದ್ಯ॥ (ಅತ್ರಾಯಂವಿಧಿಃ) ಯಾವದಾಂತರ ಪೂಜಾಯಾಮಧಿಕಾರೋ ನಭ

ವೇತ್ತಾವಚ್ಛಾ ಸ್ತ್ರೋಕ್ತವತ್ಮ್ರನಾ ಚಿತ್ತಶುಧ್ಯರ್ಥಂ। ಬಾಹ್ಯ ಪೂಜಾ ಮಾಚರೇತ್। ಅಂತರಪೂಜಾನಾಮ। ಬ್ರಹ್ಮಾಣಿ.ಚಿತ್ತಲಯರೂಪಾ। ತಸ್ಯಾಮಧಿಕಾರೇಜಾತೇ ಕೃತಕೃತ್ಯೋಭವೇತ್। ಅಂತರ ಪೂಜಾಯಾ ಮಧಿಕಾರಃ। ಕದಾಭವೇದಿತ್ಯಾಶಂಕಾಯಾಂ॥ ಶ್ಲೋ॥ ನೈವಕಿಂಚಿತ ರೋಮೀತಿಯುಕ್ತೋ ಮನ್ಯೇತ ತತ್ವವಿದಿತ್ಯಾಧಿ ಗೀತೋಕ್ತ ಪ್ರಕಾರೇಣ ದೇಹಾದ್ಯ ಧ್ಯಾನರಹಿತೋ ಯದಾಭವತಿ। ತದಾಂತರ ಪೂಜಾಯಾಮಧಿ ಕಾರೀ। ಭವತಿ। ತಥಾಚೋಕ್ತ ದೇವೀಗಿತಾಯಾಂ॥ ಶ್ಲೋ॥ ಯಾವ ದಾಂತರ ಪೂಜಾಯಾ ಮಧಿಕಾರೋ ಭವೇನ್ನಹಿ। ತಾವದ್ಬಾಹ್ಯಾಮಿ ಮಾಂಪೂಜಾಂ ಶ್ರಯೇಜ್ಜಾತು ನತಾಂತಜ್ಯೇತ್। ಅಭ್ಯಂತರಾತುಯಾ ಪೂಜೊಸಾತು ಸಂವಿಲ್ಲಯಃಸ್ಮೃತಃ। ಸಂವಿದೇವಪರಂ ರೂಪಮುಪಾಧಿತ ಹಿತಂಮಮ। ಅ ಂ ತ ಸ್ಸಂ ವಿ ದಿ ಮ ದ್ರೂ ಪೇ ಚೇ ತಸ್ಥಾಪ್ಯಂಸಿರಾ ಶ್ರಯಂ। ಸಂವಿದ್ರೂಪಾತಿರಿಕ್ತಂತು ಮಿಥ್ಯಾ ಮಾಯಾಮಯಂ ಜಗತ್ ॥ ಇತಿ ॥

ತಾ॥ ಈ ವಿಚಾರಣೆಯಲ್ಲಿ ಬ್ರಾಹ್ಮಣರಿಗೆ ವಿಧಿ ಏನೆಂದರೆ:—ಎಲ್ಲಿಯವ ರಿವಿಗೆ ಅಂತರ ಪೂಜೆಯಲ್ಲಿ ಅಧಿಕಾರವಿಲ್ಲವೋ ಅಲ್ಲಿಯವರಿವಿಗೂ ಶಾಸ್ತ್ರೋಕ್ತ ಪ್ರಕಾರವಾಗಿ ಬಾಹ್ಯಪೂಜೆ ಶ್ರೀ ಚಕ್ರಾರ್ಚನೆಯನ್ನು ಮಾಡಬೇಕು. ಅಂತರ ಪೂಜೆ ಅಂದರೆ ಬ್ರಹ್ಮದಲ್ಲಿ (ನಲ್ಲಿ) ಮನೋಲಯವೇ ಸ್ವರೂಪವಾಗಿ ಉಳ್ಳದ್ದು ಅದರಲ್ಲಿ ಅಧಿಕಾರ ಉಂಟಾದ ಕೂಡಲೇ ಆರಾಧಕನು ಕೃತ ಕೃತ್ಯ ನಾಗುತ್ತಾನೆ. ಅಂತರ ಪೂಜಾಧಿಕಾರವು ಎಂಥಾದ್ದು ಯಾವಾಗ ಅಧಿಕಾರಿ ಆಗುತ್ತಾನೆಂದರೆ, ಉತ್ತರವು ಗೀತಾ ವಚನವು ಪ್ರಧಾನವಾದದ್ದು. ತತ್ವವೇತ್ತಿ ಯಾವ ಜ್ಞಾನಿ ನಾನು ಮಾಡಬೇಕಾದ್ದು ಕಿಂಚಿತ್ತಾದರೂ ಇಲ್ಲವು. ನಾನು ಇನ್ನು ಏನೂ ಮಾಡುವುದಿಲ್ಲವೆಂಬ ನಿಶ್ಚಯ ಯಾವಾಗ ಉಂಟಾಗುತ್ತದೋ ಆಗ ಗೀತಾ ವಚನ ಪ್ರಕಾರವಾಗಿ ದೇಹಧ್ಯಾಸ, ದೇಹರಕ್ಷಣಾದಿಕಗಳೂ ಕೂಡ ಇಲ್ಲದವರು ಯಾವಾಗ ಆಗುತ್ತಾರೋ ಆಗ ಅಂತರ ಪೂಜೆಗೆ ಅಧಿಕಾ ರವನ್ನು ಹೊಂದಿದವರಾಗುವರು. ಈ ಪ್ರಕಾರವಾಗಿ ಗೀತೆಯಲ್ಲಿ ಹೇಳಲ್ಪಟ್ಟಿದೆ. "ಪ್ರಜ್ಞಾನಂ ಬ್ರಹ್ಮ"ಎನ್ನುವ ಮಹಾವಾಕ್ಯ ಪ್ರಮಾಣಾನುಸಾರವಾಗಿ ಸಂಪತ್ತಿ

ನಲ್ಲಿ ಚಿತ್ತಲಯವು, ಅಂತರಪೂಜೆಯೆಂದೆನಿಸಿಕೊಳ್ಳುವುದು. ಸಂಪತ್ತು ಮಾತ್ರವು ಉಪಾಧಿಯಿಲ್ಲದ, ನಿಜರೂಪವೆಂತಲೂ ಆದರಿಂದ ಸಾಧಕನ ಅಂತರ ದಲ್ಲಿ (ಅಂತಸ್ಥ) ಇರುವ ಜ್ಞಾನವೇ ಪರಾಶಕ್ತಿ ಸ್ವರೂಪವೆಂದು ನಿಶ್ಚಯಿಸಿ ಕೊಂಡು ಅವರಲ್ಲಿಯೇ ಚಿತ್ತವನ್ನು ಲಯವನ್ನುಂಟುಮಾಡಬೇಕು. ಸಂಪತ್ತಿ ಗಿಂತಲೂ ಬೇರೆಯಾದ ಸಕಲ ಜಗತ್ತು ಮಾಯಾಮಯವೆಂತ ಶ್ರೀದೇವೀ ವಾಕ್ಯವು.

"ಬಾಹ್ಯ ಪೂಜಾಯಾಂದೇವತಾ ಪ್ರೀತಯೇ ಬ್ರಾಹ್ಮಣೈರ್ದೇಯ ಬಲಿದ್ರ ವ್ಯಾದಿಕಂ ಶಾರದಾತಿಲಕಾದಿಗ್ರಂಥೇಷೂಕ್ತಂ ॥ ಯಥಾ ॥ ಶ್ಲೋ ॥ ಭೂತೇಭ್ರ ಸ್ತ್ಯರ್ಲಾಜತಿಲ ಹರಿದ್ರಾದಧಿಸಕ್ತವಃ । ಸಾನ್ನಾಃ ಪಿತೃಭ್ಯಸ್ಸತಿಲಾ ತಂಡುಲಾಃ ಯ ಪರಿಕೀರ್ತಿತಾಃ । ಕರಂಭಲಾಜಾಯಕ್ಷೇಭ್ಯೋ ನಾರಿಕೇಳೋದಕಾನ್ವಿತಂ । ಸಕ್ತುಪಿಷ್ಟಂಚನಾಗೇಭ್ಯಃ ಬ್ರಹ್ಮಣೇ ಪಂಕಜಾಕ್ಷತಾಃ।ಸಾಪೂಪಮನ್ನ ಶರ್ವಾಯ ವಿಷ್ಣವೇಚಗುಡೌದನ ॥ಇತಿ॥ ದೇವೀವಿಷಯೇತು। ಕೂಷ್ಮಾಂಡಮಿಷುದಂಡಂಚ ಶ್ರೀಫಲಂನಾರಿಕೇಳಕಂ । ಏತೇಬಲಿ ಸಮಾಃ ಪ್ರೋಕ್ತಾ ಸ್ತ್ರುಪ್ತೌಚ್ಛಾಗ ಸಮಾಸ್ಸದೇ ॥ ಇತಿ ॥ ಅವಶ್ಯಂ ವಿಹಿತಂಯತ್ರ ಮದ್ಯಂತತ್ರ ದ್ವಿಜಃಪುನಃ । ನಾರಿಕೇಳಜಲಂ ಕಾಂಸ್ಯೇಕ್ಷೀರಂವಾ ವಿಸೃಜೇನ್ಮಧ್ವಿತಿ ॥ ಶ್ರೀಚಕ್ರ ಕ್ರಮೇಪಿ । ಶ್ಲೋ ॥ ಏತದ್ರವ್ಯಂ (ಸ್ತು) ತು ಶೂದ್ರಸ್ಯನಾನ್ಯೇಷಾಂತು ಕದಾಚನ । ವೈಶ್ಯಸ್ಯಮಾಧ್ವಿಕಂ ಶುದ್ಧಂ ಕ್ಷತ್ರಿಯಸ್ಯತು ಸಾಜ್ಯಕಂ । ಬ್ರಾಹ್ಮಣಸ್ಯಗವಾಂಕ್ಷೀ ರಂ ಕಾಂಸ್ಯೇವಾವಿಜೇನ್ಮಧ್ವಿತಿ ॥ ವಶಿಷ್ಠ ಸಂಹಿತಾಯಾಂ । ಶ್ಲೋ ॥ ವಿಪ್ರಾಃಕ್ಷೋಣಿಭುಜೋವಿಶಂತವಿತರೇ ಕ್ಷೀರಾಜ್ಯಮಧ್ವಾಸವೈಃ। ಶ್ರೀಚಕ್ರೇಯ ಜನಂ ಕ್ರಮೇಣ ವಿಹಿತಂ ಕುರ್ಯಾತ್ತತೋ ನಾನ್ಯಥೇ ॥ ಇತಿ ॥

ತಾ॥ ಬಾಹ್ಯ ಪೂಜೆಯಲ್ಲಿ(ಶ್ರೀ ಚಕ್ರಾರ್ಚನೆಯಲ್ಲಿ) ದೇವತಾ ಪ್ರೀತಿಗಾಗಿ ಬ್ರಾಹ್ಮಣರಿಂದ ಕೊಡಬೇಕಾದ ಬಲಿ ದ್ರವ್ಯವು ಶಾರದಾ ತಿಲಕಾದಿ ಗ್ರಂಥಗಳಲ್ಲಿ ಹೇಳಲ್ಪಟ್ಟಿರುತ್ತದೆ. ಹೇಗೆಂದರೆ:-ಭೂತಗಳಿಗಾಗಿ ಲಾಜ(ಭತ್ತದ ಅರಳು) ಎಳ್ಳು ಅರಿಶಿನ, ಮೊಸರು, ಸತ್ತು ಹಿಷ್ಟವು, ಪಿತೃದೇವತೆಗಳಿಗೆ ಎಳ್ಳು ಸಹಿತ ವಾದ ಅನ್ನವೂ, ತಂಡುಲವೂ (ಅಕ್ಕಿ) ಯಕ್ಷರಿಗೆ, ಮೊಸರು ಅನ್ನವು ಲಾಜ, (ಅರಳು) ನಾರಿಕೇಳ ಜಲಸಹಿತವಾದ ಲಾಜವೂ, ಸರ್ಪಗಳಿಗೆ

ಸತ್ತುಪಿಷ್ಟವೂ, ಬ್ರಹ್ಮನಿಗೆ ಪದ್ಮಗಳೂ, ಅಕ್ಷತೆಯು, ಈಶ್ವರನಿಗೆ ಆಪೂಪಸಹಿತಾನ್ನವೂ, ವಿಷ್ಣುವಿಗೆ ಗುಡಾನ್ನನವು (ಗುಡಾನ್ನವು–ಬೆಲ್ಲ ಸಹಿತವಾದ ಅನ್ನವೂ) ದೇವೀ ವಿಷಯವಾಗಿ ಬೂದು ಕುಂಬಳ ಕಾಯಿಯೂ, ಕಬ್ಬು, ಕಾರೇಹಣ್ಣು, ನಾರಿಕೇಳವೂ, ಇವುಗಳನ್ನು ಬಲಿಯಾಗಿ ಕೊಟ್ಟಲ್ಲಿ (ಕೊಡಬೇಕು) ಇವುಗಳು ಭಾಗ ಬಲಿಸಮಾನವಾಗುವುವು. ವೈದೀಕರಿಗೆ ಇವು ಮುಖ್ಯಪಕ್ಷವಾದವುಗಳು. ಇವುಗಳಲ್ಲಿ ಯಾವ ವಸ್ತುಗಳಾದರೂ ಸಾಕು. ಎಲ್ಲಿ ಯಾವ ಸಂದರ್ಭಗಳಲ್ಲಿ ಮಧು ಅವಶ್ಯಕವೆಂದು ಹೇಳಲ್ಪಟ್ಟಿರುತ್ತದೆಯೋ ಅಲ್ಲಲ್ಲಿ ಬ್ರಾಹ್ಮಣರು ಕಾಂಸ್ಯ ಪಾತ್ರೆಯಲ್ಲಿ ನಾರಿಕೇಳಜಲವಾಗಲೀ, ಗೋಕ್ಷೀರವಾಗಲೀ, ಗ್ರಹಿಸಬೇಕು. ಯಾವ ಕಾರಣದಿಂದಲೂ ಎಲ್ಲಿಯೂ “ ಸುರಾ ” ಗ್ರಹಣವು ಕೂಡದು. ಬ್ರಾಹ್ಮಣರು “ಸುರಾ” ಗ್ರಹಣವನ್ನು ಮಾಡಕೂಡದು. ಬ್ರಾಹ್ಮಣರಿಗೆ ಇದು ಮುಖ್ಯಪಕ್ಷವಾದದ್ದು. ಇವಕ್ಕೆ ಪ್ರಮಾಣಗಳು ಶ್ರೀ ಚಕ್ರಾರ್ಚನಾಕ್ರಮದಲ್ಲಿಯೂ, ವಶಿಷ್ಠಸಂಹಿತೆಯಲ್ಲಿಯೂ ಹೇಳಲ್ಪಟ್ಟಿರುತ್ತದೆ. ಬಾಹ್ಯ ಪೂಜೆಯಲ್ಲಿ ಶ್ರೀ ಚಕ್ರಾರ್ಚನೆಯಲ್ಲಿ “ ಸುರಾ ” ಅನ್ನುವ ದ್ರವ್ಯವು ಶೂದ್ರರಿಗೆ ಹೇಳಲ್ಪಟ್ಟಿರುತ್ತದೆ. ವೈಶ್ಯರಿಗೆ ಜೇನುತುಪ್ಪವೂ, ಕ್ಷತ್ರಿಯರಿಗೆ ಆಜ್ಯವೂ (ತುಪ್ಪ)ಬ್ರಾಹ್ಮಣರಿಗೆ ಗೋಕ್ಷೀರವೂ ಹೇಳಲ್ಪಟ್ಟಿರುತ್ತದೆ. ಇದೇ ವಚನಗಳನ್ನು ಶ್ರೀ ಚಕ್ರಕ್ರಮದಲ್ಲಿಯೂ, ವಶಿಷ್ಠ ಸಂಹಿತೆಯಲ್ಲಿಯೂ ಉಲ್ಲೇಖಿಸಲ್ಪಟ್ಟಿರುತ್ತದೆ. ಇದರ ವಿನಹಾ, ನಾಲ್ಕು ವರ್ಣದವರೂ,ವ್ಯತ್ಯಾಸವಾಗಿಪೂಜೆಯನ್ನು ನಡಿಸಕೂಡದೆಂದಪ್ರಮಾಣಗಳು ಹೇಳುತ್ತವೆ. ಇದರಿಂದ, ಕೌಳವಾಮಾಚಾರಗಳು ಶೂದ್ರರಿಗೂ,ಶೂದ್ರ ಬೈರಾಗಿಗಳಿಗೂ ಶಾಪದಗ್ಧ ಬ್ರಾಹ್ಮಣರಿಗೋಸ್ಕರವಾಗಿಯೂ, ಉತ್ಪನ್ನವಾಗಿರುತ್ತವೆ. ಅಂಥಾ ತಂತ್ರ ಮಾರ್ಗಗಳಲ್ಲಿ ಬ್ರಾಹ್ಮಣಾದಿ ತ್ರೈವರ್ಣಿಕರಿಗೆ .ಸರ್ವಥಾಅಧಿಕಾರವಿಲ್ಲ.ಭ್ರಮೆಯನ್ನುಹೊಂದಕೂಡದು. ವೈದಿಕರಾದವರು ಅವುಗಳಲ್ಲಿ ಪ್ರವೇಶಿಸಿದ್ದಾದರೆ ಅವರುಗಳು ಬ್ರಾಹ್ಮಣ ವರ್ಣದಿಂದ ತ್ಯಜಿಸಲ್ಪಟ್ಟವರೆಂತಲೂ (ಬಹಿಷ್ಕರಿಸಲ್ಪಟ್ಟವರೆಂತ) ಭ್ರಷ್ಠರೆಂತಲೂ ಗ್ರಂಥಕರ್ತರಾದ ಶ್ರೀ ಆಚಾರ್ಯರವರ ಅಭಿಪ್ರಾಯವು ಇದು ಸಪ್ರಮಾಣವಾದದ್ದೂ ಆಗಿರುತ್ತದೆ,

“ ಯದ್ಯಪಿಕೃತಾದಿಷು ಪಂಚ ಪಂಚ ನಖಾ ಭಕ್ಷ್ಯಾ ಇತಿ ಶ್ರಾದ್ಧಾದೌ

ಉಕ್ತಮಪಿಯುಗಶಾಸ್ತ್ರಾನು ರೂಪತೋ ಧರ್ಮಸ್ಯ ನೂನತ್ವಾದ್ಯದನ್ನಂ ಪುರುಷೋಭುಂಕ್ತೇತದನ್ನಾಸ್ತಸ್ಯ ದೇವತಾ ಇತ್ಯುಕ್ತರೀತ್ಯಾಯುಗಶಾಸ್ತ್ರ ಸೇನ ಯಸ್ಮಿನ್ ಯುಗೇಯಸ್ಯ ಯದನ್ನಂ ಭೋಜ್ಯತ್ವೇನ ಸ್ಮೃತಿಷು ನಿರ್ಣೀತಂ । ತಸ್ಮಿಂಸ್ತಸ್ಮಿನ್ ಯುಗೇ ಯುಗೇನ ತೇನ ತತ್ತದನ್ನಮೇವ ದೇವತಾಯೈ ನಿವೇದಯೇತ್॥ ಅತೋ ಬ್ರಾಹ್ಮಣಾದೀನಾಮಯಮೇವ ಮುಖ್ಯ ಕಲ್ಪಃ । ಯುಗ ಧರ್ಮಾನುರೂಪತ್ವಾತ್ ” ॥

ತಾ॥ (ಒಂದಾನೊಂದು ಕಾಲದಲ್ಲಿ) ಒಂದು ಸಮಯದಲ್ಲಿ ಕೃತಯುಗಾದಿಗಳಲ್ಲಿ, ಪಂಚನಖಗಳು. ಐದು ಜಾತಿ ಮೃಗಗಳು, ಭಕ್ಷಣ ಯೋಗ್ಯವೆಂದು ಶ್ರಾದ್ಧಾದಿಗಳಲ್ಲಿ ಹೇಳಲ್ಪಟ್ಟಿದ್ದಾಗ್ಯೂ ಯುಗಗಳ ನ್ಯೂನ್ಯತೆಗಳಿಂದ ಯಾವ ಯುಗದಲ್ಲಿ ಯಾವ ಅನ್ನವನ್ನು ಪುರುಷನು ಭುಜಿಸುವನೋ ಅವನು ತನ್ನ ದೇವತೆಗಳಿಗೆ ಆ ಅನ್ನವನ್ನು ನಿವೇದಿಸಬೇಕೆಂಬುದು (ವಿಧಿ) ನಿಯಾಮಕವಾಗಿರೋಣದ್ದರಿಂದ ಯಾವ ಯುಗದಲ್ಲಿ, ಯಾವ ಅನ್ನವನ್ನು ಯಾರಿಗೆ, ಸ್ಮೃತಿಗಳಲ್ಲಿ ವಿಹಿತವಾಗಿರುತ್ತದೆಯೋ ಆಯಾ ಯುಗದಲ್ಲಿ ಅವರವರಿಂದ ಆಯಾ ಅನ್ನವು, ದೇವತೆಗಳಿಗೆ ನಿವೇದಿಸಲ್ಪಡಬೇಕು. ಆದ್ದರಿಂದ ಮೇಲೆ ಹೇಳಲ್ಪಟ್ಟ ಸಂಹಿತಾ ವಚನಗಳ ಪ್ರಕಾರವೇ ಮುಖ್ಯ ಪಕ್ಷವು ಯುಗ ಧರ್ಮಗಳನ್ನು ಅನುಸರಿಸಿ ಇರೋಣದ್ದರಿಂದ, ಸುರಾದಿಗಳಿಗೆ ಪ್ರತಿಯಾಗಿ ನಾರಿ ಕೇಳ ಜಲಾದಿಗಳೂ, ಗ್ರಹಿಸಲ್ಪಡೋಣದ್ದರಿಂದ ‘ ವಾ ’ ಪಕ್ಷದಲ್ಲಿ ಪ್ರತಿಯೊಂದು ವಸ್ತುವಿಗೂ, ಪ್ರತಿನಿಧಿಯಾಗಿ ಬೇರೇ ವಸ್ತುಗಳ ಉಪಯೋಗ ಹೇಳಿದರೆ ಅದು ಸಮ್ಮತವಲ್ಲ.

“ ಮೂ॥ ಸುರಾದೀನಾಂ ನಾರಿಕೇಳ ಜಲಾದಿಕಸ್ಯ ಪ್ರತಿನಿಧಿತ್ವೇನೋಕ್ತತ್ವಾದನು ಕಲ್ಪ ಏವೇನ್ನ । ಶ್ರಾದ್ಧಾದೌಮಾಂಸಾದಿ ಪ್ರತಿನಿಧಿತ್ವೇನ ಮಾಷಾದೀನಾಂ ಮುಖ್ಯತ್ವೇನ ಗ್ರಹಣಾತ್ ॥ ತತ್ರಾಪ್ಯುಕ್ತದೋಷೋ ದುರ್ನಿವಾರ ಇತಿಚೇನ್ನ । ಕಲಿಯುಗೀಯಧರ್ಮಾಣಾಮಾನರ್ಥಕ್ಯ ಪ್ರಸಂಗಾತ್ ಧರ್ಮಪ್ರತಿಪಾದಕ ಸ್ಮೃತಿರೋಧಾಚ್ಚ ಯಥಾ ಕೌಲಾದೀನಾಂ ಮದ್ಯಾದಿಕಂ ಮುಖ್ಯಂತಥೈವ ದಕ್ಷಿಣಾಚಾರಿಮುಪಿಕ್ಷೀರಾದಿಕಂ ಮುಖ್ಯಮೇವ ನತುಗೌಣಂ ” ॥

ತಾ॥ ನಾರಿಕೇಳ ಜಲಾದಿಗಳು ಸುರೆಗೆ ಪ್ರತಿನಿಧಿಯಾಗಿ ಹೇಳಿರೋಣ (ದ್ದರಿಂದ) ವು. ಆ ವಚನವು "ವಾ" ಪಕ್ಷವಲ್ಲವೇ ಎಂದು ಪ್ರಶ್ನಿಸಿದರೆ ಅನುಕಲ್ಪವು" "ವಾ" ಪಕ್ಷವಲ್ಲ. ಮುಖ್ಯ ಪಕ್ಷವೆಂತಲೇ ತಿಳಿಯಬೇಕು. ಶ್ರಾದ್ಧಾದಿಗಳಲ್ಲಿ ಮಾಂಸ ಪ್ರತಿನಿಧಿಯಾಗಿ, ಮಾಷಾದಿಕಗಳನ್ನು (ಮಾಷ= ಉದ್ದು) ಮುಖ್ಯ ಪಕ್ಷವಾಗಿ ಗ್ರಹಿಸಲಿಲ್ಲವೇ, ಅಂದರೆ, ಅಲ್ಲಿಯೂ ಸಹಾ ಅನು ಕಲ್ಪ ದೋಷವು ನಿವಾರಿಸಲು ಅಶಕ್ಯವಲ್ಲವೆಂದರೆ, ಕಲಿಯುಗ ಧರ್ಮಗಳಲ್ಲಿ ಆ ಸ್ಮೃತಿಗಳಿಗೆ ವ್ಯರ್ಥತೆಯುಂಟಾಗುತ್ತದೆಂತಲೂ, ಆದ್ದರಿಂದ ಮೇಲೆ ಹೇಳಿ ತಕ್ಕವು ಮುಖ್ಯ ಪಕ್ಷವೇ ವಿನಹಾ ಪ್ರತಿನಿಧಿ ಅಲ್ಲವೆಂತ ಭಾವವು.

"ಕಿಂಚ-ದೇವಾನಾಮಮೃತಸ್ಯ ಮುಖ್ಯಾನ್ನತ್ವಾತ್ತೇಷಾ ಮರ್ಚನಾದಾ ವಮೃತಮೇವ ಮುಖ್ಯಕಲ್ಪಮಪಿ। ತದಲಾಭೇ ಅಮೃತೇಶ್ವರೀ ಬೀಜಾಭಿ ಮಂತ್ರಿತ ಸುರಾದೀನಾಂ ಗ್ರಹಣಮನುಕಲ್ಪ ಏವ ಭವತಿ ॥ ಶ್ಲೋ॥ ಮುಖ್ಯ ಸ್ಯಾತ್ಪ್ರಥಮಃ ಕಲ್ಪೋನುಕಲ್ಪಸ್ತತೋಧಮ ಇತ್ಯಮರಃ॥ ಕೌಲಾತ್ಕಾನಾ ನಾಮಪ್ಯನುಕಲ್ಪದೋಷೋದುರ್ನಿವಾರಏವ॥ ಅತಃ॥ ಶ್ರುತಿ ನಿಷಿದ್ಧ ಸುರಾಯಾಂಕ್ರಿಯಮಾಣಾಮೃತಭಾವನಾಯಾಃ ಶ್ರುತ್ಯನಿಷಿದ್ಧ ಕ್ಷೀರ ಜಲಾದೌತದ್ಭಾನಾ (ವಾ)ಭಾವಿತಾಚೇದ್ವರಿಷ್ಟೇವಸ್ಯಾತ್ ಸ್ಮೃತಿಷುಯುಗಾನ ಸಾರತೋ ಯಸ್ಯಯಸ್ಯ ಕರ್ಮಣೀ ಯದ್ಯ ದ್ರವ್ಯ ಮುಚ್ಯತೇ ತತ್ತದೇವ ಮುಖ ಕಲ್ಪ ಇತಿ ಋಷಿಭಿ ಗೃಹೀತ ಇತ್ಯತೋ ನಿರ್ವಿವಾದಃ."

ತಾ॥ ಇದೂ ಅಲ್ಲದೇ ದೇವತೆಗಳಿಗೆ ಅಮೃತವು ಮುಖ್ಯಾನ್ನವಾದ್ದರಿಂದ ಅವರ ಪೂಜಾದಿಗಳಲ್ಲಿ ಅಮೃತವೇ ಮುಖ್ಯ ಕಲ್ಪವು. ಅದು ಇಲ್ಲದ ಸಮಯ ದಲ್ಲಿ ಅಮೃತೇಶ್ವರೀ ಬೀಜಗಳಿಂದ ಅಭಿಮಂತ್ರಿಸಿದ ಸುರಾದಿಗಳನ್ನು ಗ್ರಹಿಸು ವುದೂ ಅನುಕಲ್ಪವೇ (ಪ್ರತಿನಿಧಿಯೇ) ಆಗುತ್ತದೆ. ಪ್ರಥಮ ಪಕ್ಷವು ಮುಖ್ಯವೆಂತಲೂ ಪ್ರತಿನಿಧಿಯು ಅದಕ್ಕಿಂತಲೂ ಅಧಮವೆಂತಲೂ, ಅಮರ ಕೋಶ ವಚನವು ಕೌಳರಿಗೆ ಅಮೃತಾಭಾವದಲ್ಲಿ ಸುರಾಗ್ರಹಣದಿಂದ ಅನು ಕಲ್ಪದೋಷವನ್ನು ನಿವಾರಿಸಲು ಶಕ್ಯವಲ್ಲವು. ಆದ್ದರಿಂದ ಶ್ರುತಿಯಲ್ಲಿ ನಿಷೇಧಿ ಸಲ್ಪಟ್ಟಿರತಕ್ಕ ಸುರೆಯಲ್ಲಿ ಅಮೃತ ಭಾವಕ್ಕಿಂತಲೂ ಶ್ರುತಿ ಸಮ್ಮತವಾದ

ಕ್ಷೀರ ಜಲಾದಿಗಳಲ್ಲಿ, ಅಮೃತ ಭಾವನೆಯು ಶ್ರೇಷ್ಠವಾದದ್ದಾಗಿರುತ್ತದೆ. ಸ್ಮೃತಿಗಳಲ್ಲಿ ಯುಗಾನುಸಾರವಾಗಿ, ಯಾವ ಯಾವ ಕರ್ಮಗಳಲ್ಲಿ ಯಾವ ಯಾವ ದ್ರವ್ಯಗಳು, ಹೇಳಲ್ಪಟ್ಟಿರುತ್ತದೆಯೋ ಅವರವರಿಗೆ ಆಯಾ ಕರ್ಮಗಳಲ್ಲಿ ಆಯಾ ದ್ರವ್ಯಗಳು ಮುಖ್ಯವೆಂತ, ಋಷಿಗಳಿಂದ ಗ್ರಹಿಸಲ್ಪಟ್ಟಿರೋಣದ್ದರಿಂದ ಆ ವಿಚಾರದಲ್ಲಿ ( ಆ ಪಕ್ಷದಲ್ಲಿ ) ಯಾವ ವಿವಾದವೂ ಇಲ್ಲವು.

ಇತಿಶ್ರೀ ವಿದ್ಯಾರಣ್ಯ ಯತೀಂದ್ರ ವಿರಚಿತಾ
ಸದಾಚಾರ ದೀಪಿಕಾ—ಸಂಪೂರ್ಣಮ್.

॥ ಶ್ರೀ ಪರ ದೇವತಾರ್ಪಣಮಸ್ತು ॥

ಇತಿ ಶ್ರೀ ಮತ್ಕಾಂಡಿಣ್ಯಗೋತ್ರೋದ್ಭವ, ಸಮಯ-ದಕ್ಷಿಣಾಚಾರ
ತತ್ಪರ-ಲಂಕಾ ವಂಶೋದ್ಭವ ಶ್ರೀರಾಮಚಂದ್ರ ಚನ್ನ
ಮಾಂಬಾತನೂಜ ಶ್ರೀ ಶ್ರೀನಿವಾಸ ಶರ್ಮನಿಂದ
ಶ್ರೀ ವಿದ್ಯಾರಣ್ಯಯತೀಂದ್ರ ವಿರಚಿತ ಶ್ರೀ ಸದಾಚಾರ
ದೀಪಿಕ ಮೂಲಗ್ರಂಥಕ್ಕೆ ಕರ್ಣಾಟಕ
ವ್ಯಾಖ್ಯಾನವು ಸಂಪೂರ್ಣವಾಗಿ
ಬರೆಯಲ್ಪಟ್ಟಿದೆ .

“ ಕರಚರಣ ಕೃತಮಪರಾಧಂ ಕ್ಷಂತು ಮರ್ಹಂತಿಸಂತಃ।
ಆರ್ಯರಾದ ಸತ್ಪುರುಷರು ಗ್ರಹಿಸಿ ಸಂತಸಿಸುವರಾಗಲಿ.
ಸರ್ವೇಜನಾಸ್ಸುಖಿನೋಭವಂತು.

ಶ್ರೀನಂದನನಾಮ ಸಂವತ್ಸರ ವೈಶಾಖ, ಶುಕ್ಲ ಪ್ರತಿಪತ್.
ಶುಕ್ರವಾರವು.

(ಶಕ 1874) (25—4—1952)